ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಎಂ. ಫಿಲ್ ಪದವಿಯ ನಿಬಂಧ

ನಿಬಂಧದ ವಿಷಯ

ಕೆ. ಎಸ್.ನರಸಿಂಹಸ್ವಾಮಿಯವರ ಕವನಗಳಲ್ಲಿ
ಪ್ರಣಯದ ಚಿತ್ರಣ – ಒಂದು ಅಧ್ಯಯನ

ಮಾರ್ಗದರ್ಶಕರು
ಡಾ॥ ಕೆ. ರಮಾನಂದ

ಸಂಶೋಧನ ವಿದ್ಯಾರ್ಥಿ
ಪುಷ್ಪ ಹೆಗಡೆ

ವರ್ಷ: ೨೦೧೦-೨೦೧೧

ಅಧ್ಯಯನ ಕೇಂದ್ರ
ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
. ವಿ. ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ,
ನೇ ಮುಖ್ಯ ರಸ್ತೆ, ಎನ್. ಆರ್. ಕಾಲೋನಿ
ಬೆಂಗಳೂರು – ೧೯

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಎಂ. ಫಿಲ್ ಪದವಿಯ ನಿಬಂಧ

ನಿಬಂಧದ ವಿಷಯ

ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ಪ್ರಣಯದ ಚಿತ್ರಣ – ಒಂದು ಅಧ್ಯಯನ

ಮಾರ್ಗದರ್ಶಕರು
ಡಾ॥ ಕೆ. ರಮಾನಂದ

ಸಂಶೋಧನ ವಿದ್ಯಾರ್ಥಿ
ಷಣ್ಮುಖ ಹೆಗಡೆ

ವರ್ಷ: ೨೦೧೦-೨೦೧೧

ಎಂ. ವಿ. ಸೀ ಸ್ನಾತಕೋತ್ತರ ಅಧ್ಯಯನ ಕೇಂದ್ರ
ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ
ಎಸ್. ಆರ್. ಕಾಲೋನಿ
ಬೆಂಗಳೂರು – ೧೯

ಅಭ್ಯರ್ಥಿಯ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦-೧೧ ನೇ ಸಾಲಿನ ಎಂ.ಫಿಲ್ ಪದವಿಗಾಗಿ "**ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ಪ್ರಣಯದ ಚಿತ್ರಣ – ಒಂದು ಅಧ್ಯಯನ**" ಎಂಬ ಶೀರ್ಷಿಕೆಯ ಈ ನಿಬಂಧವನ್ನು **ಡಾ॥ ಕೆ. ರಮಾನಂದ,** ರವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧವು ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈ ವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧನಾ ವಿದ್ಯಾರ್ಥಿ
ಷಣ್ಮುಖ ಹೆಗಡೆ
ಸಹಿ/-

ಸ್ಥಳ: ಬೆಂಗಳೂರು.

ದಿನಾಂಕ: 11-6-2011

ಮಾರ್ಗದರ್ಶಕರ ಪ್ರಮಾಣಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಎಂ.ವಿ.ಸೀ ಸ್ನಾತಕೋತ್ತರ ಸಂಶೋಧನ ಕೇಂದ್ರ, ಬೆಂಗಳೂರು ಇವರ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೦-೧೧ ನೇ ಸಾಲಿನ ಎಂ.ಫಿಲ್ ಪದವಿಗಾಗಿ "**ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ಪ್ರಣಯದ ಚಿತ್ರಣ – ಒಂದು ಅಧ್ಯಯನ**" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಶ್ರೀ **ಷಣ್ಮುಖ ಹೆಗಡೆ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದಾರೆ.

ಈ ನಿಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈ ವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು
ಡಾ. ಕೆ ರಮಾನಂದ

ಸ್ಥಳ: ಬೆಂಗಳೂರು.

ದಿನಾಂಕ: 11.6.2011

ಕೆ. ರಮಾನಂದ
ಸಹಿ/-

ಡಾ|| ಕೆ. ರಮಾನಂದ
ಎಂ.ಎ., ಎಂ.ಫಿಲ್., ಪಿಹೆಚ್.ಡಿ
ಪ್ರೊಫೆಸರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು
ಸಿಂಧಿ ಕಾಲೇಜು, ಹೆಬ್ಬಾಳ, ಬೆಂಗಳೂರು-24

ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ಪ್ರಣಯದ ಚಿತ್ರಣ - ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ –೧

ಪೀಠಿಕೆ

ಪ್ರೇಮವು ಮಾನವ ಸಂಬಂಧಗಳನ್ನು ಬೆಸೆಯುವ ಸೇತುವೆ. ಸಮಾಜದಲ್ಲಿ ವಾಸಿಸುವ ಜೀವಿಗಳೆಲ್ಲ ಪ್ರೇಮವೆಂಬ ತಳಹದಿಯಲ್ಲಿಯೇ ಬದುಕುತ್ತವೆ. ಪ್ರೀತಿ, ಅನ್ಯೋನ್ಯತೆ, ಪ್ರೇಮ, ಪ್ರಣಯ, ಅನುರಾಗ ಎಂಬರ್ಥಗಳಲ್ಲಿ ಈ ಪದವು ಬಳಕೆಯಾಗುತ್ತಿದ್ದರೂ 'ಪ್ರಣಯ' ಇದು ವಿಶೇಷಾರ್ಥವನ್ನು ನೀಡುವಂತದ್ದಾಗಿದೆ. ಗಂಡು–ಹೆಣ್ಣುಗಳಲ್ಲಿ ಪರಸ್ಪರ ಅನುರಾಗ ಮೊಳೆತು ಅದು ಪಕ್ವತೆಯನ್ನು ಪಡೆದಾಗ ಪ್ರಣಯವಾಗಿ ಪರಿವರ್ತಿತವಾಗುತ್ತದೆ. ಗಂಡ–ಹೆಂಡತಿಯ ಪ್ರೀತಿ ಪ್ರೇಮ ಕೇವಲ ನಾಲ್ಕು ಗೋಡೆಗಳ ಒಳಗೆ ಬಂಧಿಸಲ್ಪಟ್ಟಿತ್ತು. ಇವರು ನಾಚಿಕೆಯೆಂದೋ, ಅಪರಾಧವೆಂದೂ ಮತ್ತೊಬ್ಬರ ಅರಿವಿಗೆ ಬಾರದಂತೆ ಪರಸ್ಪರರನ್ನು ಪ್ರೀತಿಸುತ್ತಲೇ ಇರುತ್ತಾರೆ. ಹೃದಯದ ಭಾವನೆಗಳು ಆಚೆಗೆ ಬರುವುದೇ ವಿರಳ. ಇಂತಹ ಸನ್ನಿವೇಶದಲ್ಲಿ ಕೆ. ಎಸ್. ನರಸಿಂಹ ಸ್ವಾಮಿಯವರ ದಾಂಪತ್ಯಗೀತೆ ವಿಶೇಷವಾಗಿ ನಿಲ್ಲುತ್ತದೆ. 'ಒಲುಮೆಯ ಕವಿ', 'ಪ್ರೇಮ ಕವಿ' ಎಂದೇ ಬಿರುದಾಂಕಿತರಾಗಿರುವ ಕೆ. ಎಸ್. ಎನ್. ಅವರ ಕವನಗಳು ನವೋಲ್ಲಾಸವನ್ನು ಉಂಟು ಮಾಡುತ್ತದೆ. ಇವರ ಕವನದಲ್ಲಿ ದಾಂಪತ್ಯದ ಸುಖ ಹೊರ ಹೊಮ್ಮುತ್ತದೆ. ಮುಂದಿನ ತಲೆಮಾರುಗಳಿಗೆ ಅವಶ್ಯವೆನಿಸುವಷ್ಟು ಆದರ್ಶಗಳು ಇಲ್ಲಿ ತುಂಬಿಕೊಂಡಿವೆ. ಮಧುರವಾದ ಪ್ರೀತಿ ಪ್ರಣಯದ ಭಾವನೆಗಳಿಗೆ ಇಲ್ಲಿ ಹೆಚ್ಚಿನ ಆದ್ಯತೆಯಿದೆ. ಈ ಎಲ್ಲ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವೇ ಈ ಪ್ರಬಂಧದ ಆಶಯ. ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ಪ್ರಣಯದ ನವಿರಾದ ಭಾವನೆಗಳನ್ನು ಹೆಕ್ಕಿ ತೆಗೆಯುವುದೇ ನನ್ನ ಅಧ್ಯಯನದ ಮೂಲಭೂತ ಅಂಶವಾಗಿದೆ. ಇದು ಅನೇಕ ಪ್ರಣಯಗಳಿಗೆ ಇಷ್ಟವಾಗುವಂತಹ ವಿಚಾರವಾಗಿರುತ್ತದೆ ಎನ್ನುವುದು ಸಮಂಜಸಪೂರ್ಣವಾಗಿದೆ. ಹೀಗೆ ಈ ಅಧ್ಯಯನವು ಕೆ. ಎಸ್. ನರಸಿಂಹ ಸ್ವಾಮೀಯುವರ ಕವಿತೆಗಳ ಭಾವನಾತ್ಮಕ ವಿಚಾರಗಳನ್ನು ಹೊರಗೆಡಹುತ್ತದೆ.

ಉದ್ದೇಶ

ಕನ್ನಡ ಸಾಹಿತ್ಯದಲ್ಲಿ ನವೋದಯ ಸಾಹಿತ್ಯವು ವೈಶಿಷ್ಟ್ಯವನ್ನು ಹೊಂದಿದೆ. ಕುವೆಂಪು, ಬೇಂದ್ರೆ, ಕಾರಂತ, ಅಡಿಗ ಇವರೆಲ್ಲ ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗಳ ಮೇಲೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಕೆ. ಎಸ್. ನರಸಿಂಹಸ್ವಾಮಿಯವರು ಆರಂಭದಲ್ಲಿ ಇಂಗ್ಲೀಷನಲ್ಲಿ ಕಾವ್ಯ ರಚನೆ ಮಾಡಿದರು. ನಂತರ ಗುರುಗಳಾದ ಪಟ್ಟಾಭಿರಾಮನ್ ಅವರ ಆಶಯದಂತೆ ಕನ್ನಡದಲ್ಲಿ ಕವನಗಳನ್ನು ರಚಿಸಲು ಆರಂಭಿಸಿದರು. ಈ ಕವನಗಳಲ್ಲಿ ಒಂದಕ್ಕಿಂತ ಒಂದು ವೈಶಿಷ್ಟ್ಯಪೂರ್ಣವಾಗಿದೆ. ಸಂಸಾರದ ಮಧುರ ಕ್ಷಣಗಳ ಆಸ್ವಾದನೆಯಿದೆ. ನವರಸಗಳಲ್ಲಿ ಪ್ರಸಿದ್ಧವಾದ 'ಶೃಂಗಾರ' ರಸಕ್ಕೆ ಪ್ರಾಧಾನ್ಯತೆಯಿದೆ. ಪಾಶ್ಚಾತ್ಯ ಕವಿಗಳ ಪ್ರಭಾವವಿದೆ. ರಸಿಕತೆಯೇ ಇವರ ಕವನಗಳ ಜೀವಾಳ ಈಗಿನ ಆಧುನಿಕತೆಯ ಭರಾಟೆಯಲ್ಲಿ ಸಂಸಾರದ ಬಾಂಧವ್ಯದ ಸವಿ

ಕಡಿಮೆಯಾಗುತ್ತಿದೆ. 'ಹಣವೇ ಸರ್ವಸ್ವ' ಎಂಬ ಭಾವನೆ ಬಲವಾಗುತ್ತಿದೆ. ವಿಚ್ಛೇದನದಂತಹ ಪ್ರಕರಣಗಳು ಹೆಚ್ಚಾಗುತ್ತಿವೆ. ಈ ಸಂದರ್ಭದಲ್ಲಿ ಕೆ. ಎಸ್. ನ ಅವರ ಕವನಗಳು ಹೆಚ್ಚು ಹೆಚ್ಚು ಪ್ರಸ್ತುತವಾಗುತ್ತಲೇ ಹೋಗುತ್ತವೆ. ಹೀಗಾಗಿ ಎಲೆಯ ಮರೆಯ ಕಾಯಂತಿರುವ ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳನ್ನು ಪ್ರಣಯದ ಹಿನ್ನೆಲೆಯಲ್ಲಿ ಅಧ್ಯಯನ ನಡೆಸುವುದೇ ನನ್ನ ಉದ್ದೇಶವಾಗಿದೆ.

ವ್ಯಾಪ್ತಿ

ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳು ಭಾವಗೀತೆಯ ಹಿನ್ನಲೆಯಲ್ಲಿ ಮೂಡಿ ಬಂದಿವೆ. ಸಂಗೀತ ಮತ್ತು ಸಾಹಿತ್ಯವು ಇವರ ಕವಿತೆಗಳಲ್ಲಿ ಸಮ್ಮಿಳಿತವಾಗಿರುತ್ತವೆ. ಈಗಿನ ಕಾಲದಲ್ಲಿ ಭಾವನೆಗಳಲ್ಲದ, ಜೀವವಿಲ್ಲದ ಪದ್ಯಗಳೇ ಆಕರ್ಷಕವಾಗುತ್ತಿದೆ. ಇದು ಅಪಾಯಕಾರೀ ಬೆಳವಣಿಗೆ. ಆದ್ದರಿಂದ ಭಾವಗೀತೆಗಳ ಪ್ರಾಂಜಲತೆಯ ದೃಷ್ಟಿಯಿಂದ ಕೆ. ಎಸ್. ಎನ್ ಕವಿತೆಗಳು ಆಕರ್ಷಕವೂ, ಮಹತ್ವಪೂರ್ಣವೂ ಆಗಿದೆ. ಓದುಗರ ಹೃದಯದ ವೀಣೆಯ ತಂತಿಯನ್ನು ಮೀಟಿ ಅದರಲ್ಲಿರುವ ರಸದ ಊಟೆಯನ್ನು ಉಕ್ಕಿ ಹರಿಸುತ್ತದೆ. ಈ ~~ವಿಶೇಷ~~ ಅಧ್ಯಯನದಲ್ಲಿ ಕೆ. ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ಕಂಡು ಬರುವ ಶಬ್ದಾಲಂಕಾರ, ಅರ್ಥಾಲಂಕಾರ, ಪ್ರಾಸ, ರಸನಿಷ್ಪತ್ತಿ, ಉದ್ದೇಶ, ಧ್ಯೇಯಗಳನ್ನು ಗುರುತಿಸುವುದೂ ಸಹ ನನ್ನ ಅಧ್ಯಯನದ ಮಹತ್ವದ ಅಂಗವಾಗಿದೆ. ಕೆ. ಎಸ್. ನ ಅವರಂತೆ ಪ್ರಣಯಕ್ಕೆ ಸಂಬಂಧಿಸಿದ ಇತರ ಕವಿಗಳ ಕವನಗಳನ್ನು ಅಭ್ಯಸಿಸುವ ಅಂಶವನ್ನು ಈ ಅಧ್ಯಯನವು ಒಳಗೊಂಡಿದೆ. ಪ್ರಾಚೀನ ಭಾರತದ ಶೃಂಗಾರ ಕಾವ್ಯವನ್ನು ಉಲ್ಲೇಖಿಸಿ ನವೋದಯದಲ್ಲಿ ಶೃಂಗಾರ ರಸವನ್ನು ಕವಿಗಳು ಹೇಗೆ ಬಳಸಿಕೊಂಡಿದ್ದಾರೆಂಬುದರ ಮೇಲೆ ಅಧ್ಯಯನವು ಬೆಳಕು ಚೆಲ್ಲಲಿದೆ.

ಅಧ್ಯಾಯ -೨

ಕೆ. ಎಸ್. ನರಸಿಂಹಸ್ವಾಮಿಯವರ ಜೀವನ ಪರಿಚಯ

'ಮೈಸೂರು ಮಲ್ಲಿಗೆಯ ಕವಿ' ಎಂದೇ ಹೆಸರಾದ ಕೆ.ಎಸ್. ನರಸಿಂಹಸ್ವಾಮಿಯವರ ೨೬-೦೧-೧೯೧೫ ರಂದು ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ ಜನಿಸಿದರು . ಕಿಕ್ಕೇರಿ ಸುಬ್ಬರಾಯರು ಮತ್ತು ಹೊಸ ಹೊಳಲು ನಾಗಮ್ಮ ಇವರ ತಂದೆತಾಯಿಗಳು. ೧೯೨೧ ರಿಂದ ೧೯೨೮ ರ ಅವಧಿಯಲ್ಲಿ ಪ್ರಾಥಮಿಕ ಹಾಗೂ ಮಾದ್ಯಮಿಕ ಶಿಕ್ಷಣವನ್ನು ಮುಗಿಸಿದರು. ೧೯೨೮-೧೯೩೧ ರ ಅವಧಿಯಲ್ಲಿ ಮೈಸೂರಿನ ಮಹಾರಾಜ ಹೈಸ್ಕೂಲಿನಲ್ಲಿ ಪ್ರೌಢ ಶಿಕ್ಷಣವನ್ನು ಕಲಿತರು. ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ಜೀವನದ ಪ್ರಪ್ರಥಮ ಕವನ 'ಕಬ್ಬಿಗನ ಕೂಗು' ಬರೆದು ಪ್ರಬುದ್ಧ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಿಸಿದರು. ೧೯೩೩ ರಲ್ಲಿ ಮೈಸೂರು ಕಾಲೇಜಿನಲ್ಲಿ ಇಂಟರ್ ಮೀಡಿಯಟ್‌ನಲ್ಲಿ ಉತ್ತೀರ್ಣರಾದರು. ೧೯೩೪ ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ. ಎ. (ಜ್ಯೂನಿಯರ್) ವಿದ್ಯಾಭ್ಯಾಸ ಮಾಡಿದರೂ ಅದು ಕಾರಣಾಂತರಗಳಿಂದ ಅಪೂರ್ಣವಾಯಿತು. ತಿಪಟೂರಿನ ವೆಂಕಮ್ಮನವರನ್ನು ೧೯೩೬ ರಲ್ಲಿ ವಿವಾಹವಾದರು. ಇವರಿಗೆ ನಾಲ್ಕು ಗಂಡು ಹಾಗೂ ನಾಲ್ಕು ಹೆಣ್ಣುಮಕ್ಕಳು. ೧೯೩೭ ರಲ್ಲಿ ಸರ್ಕಾರಿ ನೌಕರಿ ಸೇರಿ ಮೈಸೂರಿನಲ್ಲಿ ವೃತ್ತಿ ಜೀವನವನ್ನು ಆರಂಭಿಸಿದರು. ೧೯೪೨ ರಲ್ಲಿ ಪ್ರಥಮ ಕವನ ಸಂಕಲನ 'ಮೈಸೂರು ಮಲ್ಲಿಗೆ' ಪ್ರಕಟವಾಯಿತು. ಈ ಮೈಸೂರು ಮಲ್ಲಿಗೆ' ಕವನ ಸಂಕಲನವು ಅಪಾರ ಜನಪ್ರಿಯತೆಯನ್ನು ಪಡೆದದ್ದಲ್ಲದೇ ೧೯೪೩ ರಲ್ಲಿ 'ದೇವರಾಜ ಬಹಾದ್ದೂರ್' ಪ್ರಶಸ್ತಿಯನ್ನೂ ಸಹ ಗಳಿಸಿತು. ೧೯೪೨ ರಲ್ಲಿ ಗದ್ಯಕೃತಿ 'ಮಾರಿಯ ಕಲ್ಲು' ಪ್ರಕಟವಾಯಿತು. ೧೯೪೫ ರಲ್ಲಿ 'ಐರಾವತ' ಕವನ ಸಂಕಲನವನ್ನು ಬರೆದರು. ೧೯೪೭ ರಲ್ಲಿ 'ದೀಪದ ಮಲ್ಲಿ' ೧೯೪೯ ರಲ್ಲಿ 'ಉಂಗುರ' ೧೯೫೨ ರಲ್ಲಿ 'ಇರುವಂತಿಗೆ' ಕವನ ಸಂಕಲನವನ್ನು ಪ್ರಕಟಿಸಿದರು. ೧೯೫೬ ರಲ್ಲಿ 'ಶಿಲಾಲತೆ' ಕವನ ಸಂಕಲನವನ್ನು ಪ್ರಕಟಿಸಿದರು. ಈ ಅವಧಿಯಲ್ಲಿ ಮೋಹನ ಮಾಲೆ (ಗಾಂಧೀಜಿ ಸುಭಾಷಿತಗಳು) ಕನ್ನಡಕ್ಕೆ ಅನುವಾದಿಸಿದರು. ೧೯೫೭ ರಲ್ಲಿ 'ಶಿಲಾಲತೆ' ಕವನ ಸಂಕಲನಕ್ಕೆ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಶಾಖೆಯ ಬಹುಮಾನವನ್ನು ಪಡೆದರು. ೧೯೫೮ ರಲ್ಲಿ ಗದ್ಯಕೃತಿಯಾದ 'ಉಪವನ'ವನ್ನು ಬರೆದರು. ಇದೇ ವರ್ಷ 'ದೆಹಲಿ ರೇಡಿಯೋ ಕವಿ ಸಮ್ಮೇಳನ'ದಲ್ಲಿ ಭಾಗವಹಿಸಿದರು. ೧೯೬೦ ರಲ್ಲಿ 'ದಮಯಂತಿ' ಎಂಬ ಗದ್ಯಕೃತಿ 'ಮನೆಯಿಂದ ಮನೆಗೆ' ಎಂಬ ಕವನ ಸಂಕಲವನ್ನು ಪ್ರಕಟಿಸಿದರು. ೧೯೬೧ ರಲ್ಲಿ ಗಾಂಧೀಜಿ ಕೃತಿಗಳಿಂದ ನನ್ನ ಕನಸಿನ ಭಾರತ' ಎಂಬ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು. ೧೯೬೫ ರಲ್ಲಿ ವೆರಿಯರ್ ಎಲ್ವಿನ್ ಅವರ ಕೃತಿಯನ್ನು 'ಪ್ರಪಂಚದ ಬಾಲ್ಯದಲ್ಲಿ' ಎಂಬ ಹೆಸರಿನೊಂದಿಗೆ ಅನುವಾದಿಸಿದರು. ೧೯೬೫ ರಲ್ಲಿ ಕಾರವಾರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾವ್ಯ ಮಂಡನ ವಿಭಾಗದ ಅಧ್ಯಕ್ಷತೆಯನ್ನು ನಿರ್ವಹಿಸಿದರು. ೧೯೬೬ ರಲ್ಲಿ ಯುರಿಪಿಡೀಸ್ 'ಮೀಡಿಯಾ' ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು. ೧೯೬೯ ರಲ್ಲಿ ಮಾರ್ಕಟ್ವೇಯ್ನ ಕೃತಿಯನ್ನು 'ಹಕಲ್

ಬರಿಫಿನ್ನನ ಸಾಹಸಗಳು' ಎಂಬ ಹೆಸರಿನೊಂದಿಗೆ ಕನ್ನಡದಲ್ಲಿ ಅನುವಾದಿಸಿದರು. ೧೯೭೦ ರಲ್ಲಿ ಬೆಂಗಳೂರು ಸುವರ್ಣ ಮಹೋತ್ಸವ ಸಂದರ್ಭದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕಾವ್ಯ ಸಾಧನೆಗಾಗಿ ಕೆ.ಎಸ್. ನ ಅವರನ್ನು ಸನ್ಮಾನಿಸಲಾಯಿತು. ೧೯೭೦ ಜನವರಿ ೨೫ ಕ್ಕೆ ಕೆ.ಎಸ್.ನ ಅವರ ವಯಸ್ಸು ೭೦ ಆಗಿದ್ದಾಗ ಸರ್ಕಾರಿ ಸೇವೆಯಿಂದ ನಿವೃತ್ತರಾದರು. ಆಗಲೇ ಮೈಸೂರು, ನಂಜನಗೂಡು, ಬೆಂಗಳೂರಿನಲ್ಲಿ ಸೇವೆಯನ್ನು ಸಲ್ಲಿಸಿದ್ದರು. ೧೯೭೧ ರಲ್ಲಿ ಪ್ರೇಮನಂದಕುಮಾರ್ ಅವರ 'ಸುಬ್ರಹ್ಮಣ್ಯ ಭಾರತಿ' ಕೃತಿಯನ್ನು ಕನ್ನಡಕ್ಕೆ ತಂದರು. ಪುಷ್ಕಿನ್ನನ ಕವಿತೆಗಳನ್ನು ಇದೇ ವರ್ಷ ಕನ್ನಡಕ್ಕೆ ಅನುವಾದಿಸಿದರು. ೧೯೭೨ ರಲ್ಲಿ 'ಮಾಯಾಶಂಖ ಮತ್ತು ಇತರ ಕಥೆಗಳು' ಹಾಗೂ ಹರೀಂದ್ರನಾಥ ಚಟ್ಟೋಪಾಧ್ಯಾಯರ 'ರಾಣಿಯ ಗಿಳಿ ರಾಜನ ಮಂಗ' (ಮಕ್ಕಳ ಗೀತೆಗಳು) ಕನ್ನಡಕ್ಕೆ ಅನುವಾದಿಸಿದರು. ೧೯೭೨ ರಲ್ಲಿ ಕನ್ನಡ ನಾಡಿನ ಖ್ಯಾತ ಸಾಹಿತಿಗಳು ಮತ್ತು ಅಭಿಮಾನಿಗಳು 'ಚಂದನ' ಎಂಬ ಅಭಿನಂದನ ಗ್ರಂಥವನ್ನು ಕೆ. ಎಸ್. ನ ಅವರಿಗೆ ಸಮರ್ಪಿಸಿದರು. ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರು ಇದರ ಸಂಪಾದಕರಾಗಿದ್ದುದು ಒಂದು ವಿಶೇಷ. ಇದೇ ವರ್ಷ ಕರ್ನಾಟಕ ರಾಜ್ಯವು ಇವರಿಗೆ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ೧೯೭೨ ರಿಂದ ೭೪ ರ ಅವಧಿಯಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯಲ್ಲಿ ಸಾಹಿತ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ೧೯೭೪ ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಸಹ ಇವರಿಗೆ ಸಂದಾಯವಾಯಿತು. ೧೯೭೪ ರಿಂದ ೭೫ ರ ಅವಧಿಯಲ್ಲಿ 'ಯುವ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ೧೯೭೫ ರಲ್ಲಿ 'ತೆರೆದ ಬಾಗಿಲು' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ೧೯೭೭ ರಲ್ಲಿ ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ದೊರಕಿತು. ೧೯೮೨ ರಲ್ಲಿ ಇವರ ಖ್ಯಾತ ಕೃತಿ 'ಮೈಸೂರು ಮಲ್ಲಿಗೆ ' ಸಿ. ಅಶ್ವತ್ಥ ನಿರ್ದೇಶನದಲ್ಲಿ ಕ್ಯಾಸೆಟ್ ಬಿಡುಗಡೆಯಾಯಿತು. ೧೯೮೩ ರಲ್ಲಿ 'ನವ ಪಲ್ಲವ' ಎಂಬ ಕವನ ಸಂಕಲನವನ್ನು ಬರೆದು ಪ್ರಕಟಿಸಿದರು . ೧೯೮೫ ರಲ್ಲಿ 'ಮಲ್ಲಿಗೆಯ ಮಾಲೆ' ಸಮಗ್ರ ಕವನಗಳಿರುವ ಸಂಪುಟ 'ಅಪಿ ಪ್ರಕಾಶನ'ದಿಂದ ಪ್ರಕಟವಾಯಿತು. ೧೯೮೭ ರಲ್ಲಿ ಕೇರಳದ 'ಕವಿಕುಮಾರ್ ಆಶಾನ್' ಪ್ರಶಸ್ತಿಗೆ ಇವರು ಪಾತ್ರರಾದರು. ೧೯೯೦ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದರು . ೧೯೯೦ ರಲ್ಲಿ ಕೆ. ಎಸ್. ನ 'ನುಡಿಮಲ್ಲಿಗೆ' – ಪೂರ್ಣ ಪ್ರಮಾಣದ ಸಂದರ್ಶನ ಪುಸ್ತಕವು ಪ್ರಕಟವಾಯಿತು. ೧೯೯೧ ಮೇ ೧೨ 'ಮೈಸೂರ ಮಲ್ಲಿಗೆ' ಐವತ್ತರ ಉತ್ಸವನ್ನು ಆಚರಿಸಿಕೊಂಡಿತು. ಇದೇ ವರ್ಷ 'ಮೈಸೂರ ಮಲ್ಲಿಗೆ' ಚಲನ ಚಿತ್ರವು ಬಿಡುಗಡೆಯಾಗಿ ವೈಶಿಷ್ಟ್ಯತೆಯೊಂದಿಗೆ ಅಪಾರ ಖ್ಯಾತಿಯನ್ನು ಪಡೆಯಿತು. ಇದು ಕವಿಯೊಬ್ಬರಿಗೆ ನೀಡಿದ ಗೌರವದ ಉಡುಗೊರೆ ಎಂದರೂ ತಪ್ಪಾಗಲಾರದು. ೧೯೯೨ ರಲ್ಲಿ ರಾಷ್ಟ್ರ ಪತಿಯವರು ಕೆ. ಎಸ್. ನ ಅವರನ್ನು ಸರ್ವೋತ್ತಮ ಗೀತಕಾರರೆಂದು ರಜತ ಫಲಕವನ್ನು ನೀಡಿ ಗೌರವಿಸಿದರು. ಇದೇ ವರ್ಷ ಬೆಂಗಳೂರು ವಿಶ್ವವಿದ್ಯಾಲಯವು ಗೌರವ ಡಿ.ಲಿಟ್ ಪದವಿಯನ್ನು ನೀಡಿ ಗೌರವಿಸಿತು. ೧೯೯೩ ರಲ್ಲಿ 'ದುಂಡು ಮಲ್ಲಿಗೆ' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ೧೯೯೫ ರಲ್ಲಿ ಕೆ.ಎಸ್.ನ ಅವರಿಗೆ ಡಾ॥ ಮಾಸ್ತಿ ಸಾಹಿತ್ಯ ಪ್ರಶಸ್ತಿಯು

ದೊರೆಯಿತು. ೧೯೯೭ ರಲ್ಲಿ ರಾಜ್ಯ ಸರ್ಕಾರವು ಇವರಿಗೆ 'ಪಂಪ' ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಈ ಅವಧಿಯಲ್ಲಿ ರಾಬರ್ಟ್ ಬರ್ನ್ಸ್ ಕವಿಯ ಆಂಗ್ಲ ಕವನವನ್ನು ಕನ್ನಡಕ್ಕೆ ಅನುವಾದಿಸಿದರು. ಮತ್ತು ಕೆಲವು ಚೀನಿ ಕವನಗಳನ್ನು ಕನ್ನಡಕ್ಕೆ ಅನುವಾದಿಸಿದರು . ೧೯೯೯ ರಲ್ಲಿ 'ನವಿಲದನಿ' ಎಂಬ ಕವನ ಸಂಕಲನವನ್ನು ಬರೆದು ಪ್ರಕಟಿಸಿದರು. ಇದೇ ವರ್ಷದಲ್ಲಿ 'ಕೇಂದ್ರ ಸಾಹಿತ್ಯ ಅಕಾಡೆಮಿ'ಯ ಗೌರವ ಫೆಲೋಷಿಪ್‌ಗೆ ಭಾಜನರಾದರು. ೨೦೦೦ ದಲ್ಲಿ 'ಸಂಜೆ ಹಾಡು' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ಇದೇ ವರ್ಷ ಕೆ.ಎಸ್ .ನ ಅವರಿಗೆ 'ಗೊರೂರು' ಪ್ರಶಸ್ತಿಯು ಲಭಿಸಿತು. ೨೦೦೧ ರಲ್ಲಿ 'ಕೈಮರದ ನೆಳಲಲ್ಲಿ', ೨೦೦೨ ರಲ್ಲಿ 'ಎದೆ ತುಂಬ ನಕ್ಷತ್ರ' ೨೦೦೩ ರಲ್ಲಿ 'ಮೌನದಲಿ ಮಾತ ಹುಡುಕುತ್ತಾ......' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ೨೦೦೩ ರಲ್ಲಿ 'ದೀಪದ ಸಾಲಿನ ನಡುವೆ', 'ಮಲ್ಲಿಗೆಯ ಮಾಲೆ' ಸಮಗ್ರ ಕಾವ್ಯವನ್ನು, 'ಹಾಡು ಹಸೆ' ಎಂಬ ಕವನ ಸಂಕಲನವನ್ನು ಪ್ರಕಟಿಸಿದರು. ಹೀಗೆ ಕೆ. ಎಸ್. ನ ಬಡತನ ಮತ್ತು ದೃಷ್ಟಿದೋಷದ ನಡುವೆಯೂ ಹಲವು ಕೃತಿಗಳನ್ನು ಕನ್ನಡಿಗರಿಗೆ ನೀಡಿದರು. ಇಂತಹ ಧೀಮಂತ ಕವಿ ೨೦೦೩ ಡಿಸೆಂಬರ್ ೨೮ ರಂದು ಸಾಹಿತ್ಯ ಲೋಕವನ್ನು ತ್ಯಜಿಸಿದರು. ಆದರೂ ಅವರ ಕವಿತೆಗಳು ಮಾತ್ರ ಇಂದಿಗೂ. ಎಂದೆಂದಿಗೂ ಸಾಹಿತ್ಯ ಪ್ರೇಮಿಗಳ ಹೃದಯದಲ್ಲಿ ಸ್ಥಿರವಾಗಿವೆ.[೧]

---

[1] ಇಹದ ಪರಿಮಳದ ಹಾದಿ: ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು. ಸಂ. ೨೩೭-೨೪೦

ಅಧ್ಯಾಯ –೩

ಎ. ಭಾವಗೀತೆ

ಕೆ. ಎಸ್. ನ ಅವರ ಕವನಗಳು ಭಾವಗೀತೆಯ ಶೈಲಿಯನ್ನು ಹೊಂದಿದೆ. ಈ ಪ್ರಣಯಕ್ಕೆ ಸಂಬಂಧಿಸಿದಂತೆ ಅಧ್ಯಯನ ನಡೆಸುವಾಗ ಶೃಂಗಾರ ರಸವು ಬಹಳ ಪ್ರಸ್ತುತವಾಗುತ್ತದೆ. ಹೀಗಾಗಿ ರಸದ ಕುರಿತು. ರಸದ ನಿಷ್ಪತ್ತಿಯ ಕುರಿತು ಅಧ್ಯಯನ ನಡೆಸುವುದೂ ಪ್ರಮುಖವಾಗಿದೆ. 'ರಸ'ವನ್ನು ವಿವರಿಸುವಾಗ ವಿದ್ವಾಂಸರ ಅಭಿಪ್ರಾಯವೂ ಸಹ ಮುಖ್ಯವಾಗುತ್ತದೆ. ರಸದ ಪ್ರಭೇದಗಳನ್ನು ವಿವರಿಸುವುದೂ ಸಹ ಅವಶ್ಯವೆನಿಸುತ್ತದೆ. ನವೋದಯ ಕಾವ್ಯದಲ್ಲಿ ಶೃಂಗಾರದ ಬಳಕೆಯಾಗುವುದನ್ನು ಹೇಳುವಾಗ ಪ್ರಾಚೀನ ಕಾವ್ಯದ ಬಗೆಗೂ ವಿವರಿಸುವುದು ಮಹತ್ವವಾಗಿದೆ. ಈ ಎಲ್ಲ ವಿಚಾರಗಳ ಮೇಲೆ ಬೆಳಕನ್ನು ಚೆಲ್ಲಿದ ನಂತರ ಕೆ. ಎಸ್. ನ ಅವರ ಪ್ರಣಯದ ಕವನಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಸಮರ್ಪಕವೆನಿಸುತ್ತದೆ.

"Lyre (ಲೈರ್) ತಂತಿ ವಾದ್ಯದೊಡನೆ ಅಥವಾ ಇತರ ಯಾವುದೇ ವಾದ್ಯದೊಡನೆ ಹಾಡಲು ಬರುವಂತೆ ರಚಿತವಾಗಿರುವ ವೈಯಕ್ತಿಕ ಭಾವನೆಗಳನ್ನು ಅಭಿವ್ಯಕ್ತಿಸುವ ಕಿರುಗವನ ಭಾವಗೀತೆ, ಭಾವನೆಗಳು ಹೆಪ್ಪುಗಟ್ಟಿರುವಂತೆ ಇರುವ ಇಂಥಾ ಕವನವು ಸಹೃದಯಿಗಳನ್ನು ಕ್ಷಣಾರ್ಧದಲ್ಲಿ ಮನಗೆಲ್ಲುವ ಕೆಲಸವನ್ನು ಮಾಡುತ್ತದೆ. ಭಾವಗೀತೆಯಲ್ಲಿ ಒಳದನಿಯೊಂದು ಅಡಗಿರುತ್ತದೆ. ಕವಿಯು ತಾನು ಕಂಡದ್ದನ್ನು, ಕೇಳಿದ್ದನ್ನು, ಅನುಭವಿಸಿದ್ದನ್ನು ಇಂಥಾ ಗೀತೆಯಲ್ಲಿ ಅಳವಡಿಸಿರುತ್ತಾನೆ. ವಸ್ತು, ವ್ಯಕ್ತಿ, ಪ್ರಕೃತಿ, ಅನುಭವ, ಸನ್ನಿವೇಶ ಇವೆಲ್ಲವು ಭಾವಗೀತೆಯಲ್ಲಿ ಕಾಣುವ ಸಂಗತಿಗಳಾಗಿವೆ. ಪ್ರಶಂಸೆ, ಬೇಸರ, ಭಯ, ಪ್ರೀತಿ ಮುಂತಾದ ಸಂವೇದನೆಗಳನ್ನು ಬಳಸಿಕೊಂಡಿದ್ದಾರೆ. ಅನುಭವದ ನಂಬಿಕೆಯನ್ನು ಮೂಡಿಸಿ ಅಂತರಂಗವನ್ನು ಬಡಿದೇಳಿಸುವ ಕೆಲಸವನ್ನು ಮಾಡುವ ಭಾವಗೀತೆಯು ಸಾಹಿತ್ಯದ ಒಂದು ಜನಪ್ರಿಯ ಪ್ರಕಾರವಾಗಿದೆ.

ರಸ್ಕಿನ್ ಪ್ರಕಾರ– "Lyric poetry is the expression by the poets of his own feelings"-[2]

ಭಾವಗೀತೆಗಳಲ್ಲಿ ಕವಿಯ ಅಂತರಂಗವು ಅನಾವರಣಗೊಳ್ಳುತ್ತದೆ. ಅದರಲ್ಲಿ ಕವಿಯು ಬಹಳ ಆತ್ಮೀಯವಾಗಿ ಓದುಗರೊಂದಿಗೆ ಬೆರೆಯುತ್ತಾನೆ. ವಿಸ್ತಾರವಾಗಿ ಹೇಳುವಂತದ್ದನ್ನು ಸಂಕ್ಷಿಪ್ತವಾಗಿ ಹೇಳುವ ತಂತ್ರಗಾರಿಕೆ ಇಲ್ಲಿರುತ್ತದೆ. ತನ್ನ ಅನುಭವಧಾರೆಯನ್ನು ಹಂಚಿಕೊಳ್ಳುವ ಪ್ರಯತ್ನವೂ ಸಹ ಇಲ್ಲಿ ಅಡಗಿರುತ್ತದೆ. ೧೮ನೇ ಶತಮಾನದಿಂದೀಚೆಗೆ ಭಾವಗೀತೆಯು ಬಹಳ ಜನಪ್ರಿಯವಾಯಿತು.

---

[2] ಕನ್ನಡ ಸಾಹಿತ್ಯಕೋಶ – ರಾಜಪ್ಪ ದಳವಾಯಿ, ಪುಟ ಸಂ. ೮೯

ಈ ಪ್ರಕಾರವು ಕನ್ನಡದಲ್ಲಿ 'ನವೋದಯ ಕಾವ್ಯ' ಎಂದು ಹೆಸರು ಗಳಸಿದೆ. ಸರಳ, ಜಟಿಲ, ಸ್ಪಷ್ಟ , ವೈಯಕ್ತಿಕ, ಸಂಕೀರ್ಣ ಮುಂತಾದ ಭಾವನೆಗಳ ಗೊಂಚಲು ಭಾವಗೀತೆಯಲ್ಲಿ ಅಡಗಿರುತ್ತದೆ. ಆಧುನಿಕ ಜಗತ್ತಿನಲ್ಲಿ ಓದುಗರಿಗೆ ಸುಲಭವಾಗಿ ಹೃದ್ಯವಾಗಲು ಭಾವಗೀತೆಯು ಸೇತುವೆಯಾಗಿದೆ. ಮಾನವನೊಬ್ಬ ಸಹಜವಾಗಿ ತನ್ನ ಸುತ್ತ ಮುತ್ತಲಿರುವ ಇತರ ವಿಷಯಗಳ ಬಗ್ಗೆ ಆಸಕ್ತಿ ತಾಳುವಂತೆ ಮಾಡುವ ಗುಣ ಭಾವಗೀತೆಗಿದೆ. ಪಾಶ್ಚಾತ್ಯ ಕವಿಗಳಾದ ವರ್ಡ್ಸ್‌ವರ್ತ, ಕೀಟ್ಸ್, ಶೆಲ್ಲಿ, ಬೈರನ್, ಬರ್ನ್ಸ್, ನ್ಯೂಮನ್‌ನಿಂದ ಹಿಡಿದು ಕನ್ನಡ ಕವಿಗಳಾದ ಕುವೆಂಪು, ಬೇಂದ್ರೆ, ಪುತಿನ, ಕೆ. ಎಸ್. ನರಸಿಂಹಸ್ವಾಮಿ, ಜಿ.ಎಸ್.ಶಿವರುದ್ರಪ್ಪ, ಕೆ. ಎಸ್. ನಿಸಾರ ಅಹ್ಮದ್ ಇವರೆಲ್ಲ ಭಾವಗೀತೆಗಳನ್ನು ಬರೆದು ಜನಮನ್ನಣೆಯನ್ನು ಗಳಸಿದ್ದಾರೆ.

ಬಿ. ರಸದ ಪರಿಕಲ್ಪನೆ

'ರಸ' ಎಂಬ ಪದಕ್ಕೆ ಹಲವು ಅರ್ಥಗಳವೆ. ಸಂಸ್ಕೃತದಲ್ಲಿ 'ರಸ'ವೆಂದರೆ ಕಾವ್ಯ ಮತ್ತು ಕಲೆಗಳಲ್ಲಿ ಸಹೃದಯರು ಪಡೆಯುವ ವಿಶಿಷ್ಟ ಅನುಭವ. ಭರತನ ನಾಟ್ಯ ಶಾಸ್ತ್ರದಲ್ಲಿ ರಸದ ಪ್ರಸ್ತಾಪವಿದೆ. ನಗೇಂದ್ರ ಅವರು 'ರಸ' ಎಂಬ ಪರಿಕಲ್ಪನೆಯ ಬೆಳವಣಿಗೆಯ ಹಂತಗಳನ್ನು ಏಳು ಘಟ್ಟಗಳಲ್ಲಿ ಗುರುತಿಸಿದ್ದಾರೆ.

೧) ತಮ್ಮದೇ ಆದ ರುಚಿ ಮತ್ತು ಗುಣಗಳನ್ನುಳ್ಳ ವನಸ್ಪತಿಗಳ ದ್ರವ್ಯ ಎಂಬರ್ಥದಲ್ಲಿ 'ರಸ' ಪದದ ಬಳಕೆಯಾಗುತ್ತದೆ.

೨) ಲಕ್ಷಣಾವೃತ್ತಿಯಿಂದ 'ರಸ' ಶಬ್ದಕ್ಕೆ 'ಆಸ್ವಾದ' ಮತ್ತು ಊರ್ಜಾ ಎಂಬ ವಿಕಸಿತ ಅರ್ಥಗಳು ಬಳಕೆಯಲ್ಲಿ ಬಂದವು.

೩) ಸೋಮರಸದ ಅತೀ ಬಳಕೆಯಿಂದ 'ರಸ' ಎಂಬ ಪದದಲ್ಲಿ ಆನಂದ, ಮಾದಕತೆ, ತನ್ಮಯತೆ, ಚಮತ್ಕಾರ ಮೊದಲಾದ ಗುಣಗಳು ಸಮಾವೇಶಗೊಂಡವು.

೪) ಸೂಕ್ತಿರಸ ಅಥವಾ ಋಕ್ಕುಗಳ 'ರಸ' ಎಂಬ ಮತ್ತೊಂದು ವಾಣಿಯ ಚಮತ್ಕಾರವನ್ನು ನಿರ್ದೇಶಿಸಲು 'ರಸ' ಎಂಬ ಪದದ ಬಳಕೆಯಾಯಿತು.

೫) ಆತ್ಮಾನಂದ ಅಥವಾ ಬ್ರಹ್ಮಾನಂದಕ್ಕೆ ಪರ್ಯಾಯವಾಗಿ 'ರಸ' ಶಬ್ದವನ್ನು ಬಳಕೆಗೆ ತರಲಾಯಿತು.

೬) ಸೂಕ್ತಿರಸವು ಕಾವ್ಯರಸಕ್ಕೆ ಸಮಾನಾರ್ಥವಾಗಿ ಬಳಕೆಯಾಗತೊಡಗಿತು.

೭) ರಾಮಾಯಣ ಮಹಾಭಾರತಗಳ ಕಾಲದ ನಂತರದಲ್ಲಿ 'ರಸ' ಶಬ್ದದ ಅರ್ಥ ಶಾಸ್ತ್ರಿಯವಾಗಿ ವಿಕಾಸಗೊಂಡಿತು"[೩]

---

[3] ತೌಲನಿಕ ಕಾವ್ಯ ಮೀಮಾಂಸೆ ಮತ್ತು ಆಧುನಿಕ ಸಾಹಿತ್ಯ ವಿಮರ್ಶೆಯ ಮೂಲ ತತ್ವಗಳು– ಓ. ಎಲ್. ನಾಗಭೂಷಣ ಸ್ವಾಮಿ, ಪುಟ – ೮, ೯

'ರಸ'ದ ಬಳಕೆಯು ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿಯೂ ಪ್ರಮುಖವಾಗಿದೆ. ವೇದ, ಉಪನಿಷತ್ತು, ದರ್ಶನಾದಿ ಗ್ರಂಥಗಳಲ್ಲಿ ಬಂದಂತಹ ರಸವು ಕಾವ್ಯವಲಯವನ್ನು ಪ್ರವೇಶಿಸಿತು. ಭರತನು ನಾಟ್ಯಶಾಸ್ತ್ರದಲ್ಲಿ ನಿರೂಪಿಸಿದ 'ರಸ'ವು ವಿವಿಧ ರಂಗಗಳಲ್ಲಿ ವೈವಿಧ್ಯಮಯ ವ್ಯಾಪಕತೆಯನ್ನು ಪಡೆಯಿತು. ಕಾವ್ಯ ಮೀಮಾಂಸೆಯಲ್ಲಂತೂ 'ರಸ'ಕ್ಕೆ ಅಗ್ರಸ್ಥಾನ ದೊರಕಿತು.

'ರಸ' ಎಂಬ ಮಾತು ಬಹಳ ಪ್ರಾಚೀನ ಅಂದರೆ ಋಗ್ವೇದ ಸಂಹಿತೆಯಲ್ಲಿಯೇ ಇತ್ತು ಎಂಬುದಕ್ಕೆ ಆಧಾರಗಳು ದೊರಕುತ್ತವೆ. ಸನ್ನಿವೇಶಕ್ಕೆ ಅನುಗುಣವಾಗಿ ಬೇರೆ ಬೇರೆ ಅರ್ಥಗಳನ್ನು 'ರಸ' ಎಂಬ ಪದವು ನೀಡುತ್ತದೆ. 'ರಸ' ಎಂಬುದು ಧಾತು. ಇದರ ಅರ್ಥ ರುಚಿ ನೋಡುವಿಕೆ (to taste) ಎಂದು ನಾಲಗೆಗೆ 'ರಸನೆ' ಎಂದು ಬಳಸುವುದೂ ಸಹ ಇದರಿಂದಲೇ, 'ಅರ್ಷ್' ಎನ್ನುವ ಧಾತುವಿನಿಂದಲೂ 'ರಸ' ಎಂಬ ರೂಪ ಸಿದ್ಧವಾಗುತ್ತದೆ 'ಅರ್ಷ್' ಎಂದರೆ ಹರಿಯುವಿಕೆ 'to flow' ಎಂದಾಗಿರುತ್ತದೆ".[೪]

'ಅಥರ್ವವೇದದಲ್ಲೂ ರಸ ಪದದ ಬಳಕೆಯಿದೆ. ಒಂದು ಕಡೆ ಮಾಟ ಮಂತ್ರ ತಂತ್ರಾದಿಗಳು; ಇನ್ನೊಂದು ಕಡೆ ಉನ್ನತ ತಾತ್ವಿಕ ಚಿಂತನೆ' ಈ ಎರಡು ಅಂಶಗಳನ್ನು ಈ ವೇದದಲ್ಲಿ ಕಾಣಬಹುದು. ಅಂತೆಯೇ ಬ್ರಹ್ಮ, ಬ್ರಹ್ಮಾನಂದ ಎಂಬ ಅರ್ಥವೂ ಇದರೊಂದಿಗೆ ಸೇರಿಕೊಂಡಿತು.

"ಏಷಾ ಭೂತಾನಾಂ ಪೃಥಿವೀ ರಸಃ ಪೃಥಿವ್ಯಾ ಆಪಾ ರಸಃ, ಆಪಾಮೋಷಧಯೋ ರಸಃ ಓಷಧೀನಾಂ ಪುರುಷೋ ರಸಃ ಪುರುಷಸ್ಯ ವಾಗ್ ರಸಃ ವಾಚಃ ಋಗ್ ರಸಃ"[೫]

ಹೀಗೆ ರಸವು ವ್ಯಾಪಕೆಯನ್ನು ಪಡೆಯುತ್ತಾ ಹೋಗುತ್ತದೆ. ರಸೋ ವೈಸಃ ರಸಂ ಹ್ಯೇವಾಯಂ ಲಬ್ಧ್ವಾನಂದೀ ಭವತಿ – ತೈತ್ತರೀಯೋಪನಿಷತ್ತಿನಲ್ಲಿ ಬರುವ ಮಾತು [೬]
ಅಂದರೆ ರಸವನ್ನು ಸಂಪಾದಿಸಿದವನು ಆನಂದವನ್ನು ಹೊಂದುತ್ತಾನೆ. ಹೀಗೆ ರಸವು ಹಲವು ಸನ್ನಿವೇಶಗಳಲ್ಲಿ ನಾನಾರ್ಥವನ್ನು ಹೊಂದುತ್ತದೆ.

ಸಿ. ಭಾವ, ವಿಭಾವ, ಅನುಭಾವ

'ರಸ' ಎಂಬ ಶಬ್ದವನ್ನು ಕಾವ್ಯ ಮೀಮಾಂಸಕರು ಹಲವೆಡೆ ಬಳಸಿದ್ದಾರೆ. ಇದನ್ನೇ ಕಾವ್ಯರಹಸ್ಯವೆಂದೂ ಹೇಳಲಾಗಿದೆ. ಈ ರಸದ ಸ್ವರೂಪವೇನು? ಇದರ ನಿಷ್ಪತ್ತಿ ಹೇಗೆ? ಇದರ ಪ್ರಕಾರಗಳು ಯಾವುವು ಎಂಬುದರ ವಿಶದವಾದ ಪರಿಶೀಲನೆಗೆ ತೊಡಗಬೇಕಿದೆ.

'ಭಾವ'ದ ಮೂಲಾರ್ಥ 'ಇರುವಿಕೆ' ಇದರ ನಿಷ್ಪತ್ತಿಗೆ ಅನುಗುಣವಾಗಿ ಸಂಸ್ಕೃತದಲ್ಲಿ ಇದರ ಅರ್ಥಗಳೂ ಅನೇಕವಾಗಿದೆ. ಆಪಟೆಯವರು ನಿಘಂಟಿನಲ್ಲಿ ಇದಕ್ಕೆ ೩೧ ಅರ್ಥಗಳನ್ನು ಸಂಗ್ರಹಿಸಿದ್ದಾರೆ. ಸ್ಥಿತಿ, ಆಶಯ, ಇಂಗಿತ, ತಾತ್ಪರ್ಯ, ಭಾವ (ನಾಮ) ಚಿತ್ತವೃತ್ತಿ ಇತ್ಯಾದಿ.

---

[4] ತೌಲನಿಕ ಕಾವ್ಯ ಮೀಮಾಂಸೆ – ಡಾ ಎಚ್. ತಿಪ್ಪೇರುದ್ರ ಸ್ವಾಮಿ. ಪುಟ ೨೫೦

[5] ಅದೇ ಪುಟ೨೫೧

[6] ಅದೇ ಪುಟ

ಸಂಸ್ಕೃತದಲ್ಲಿ ಪ್ರೀತಿ, ಪದಾರ್ಥ, ಸಂಭಾವಿತನಾದ ಮನುಷ್ಯ ಈ ಮೊದಲಾದ ಅರ್ಥಗಳೂ ಉಂಟು ಇಷ್ಟೇ ಸಾಲದೆಂದು ಕನ್ನಡದಲ್ಲಿ ಬಂಧುವಾಚಕ ಪದವೂ ಆಗಿದೆ. ಹೀಗೆ ಕೆಲವು 'ಇರವಿ'ನಿಂದ ಹಿಡಿದು ಇರುವ ಇಲ್ಲದಿರುವ ವಸ್ತುಗಳೆಲ್ಲಕ್ಕೂ ಈ 'ಭಾವ' ಶಬ್ದವು ವಾಚಕವಾಗಬಲ್ಲದು. ಈ ಅರ್ಥಗಳ ಸಂದಣಿಯಲ್ಲಿ ನಮಗೆ ಪ್ರಕೃತವಾದದ್ದು "ಚಿತ್ತವೃತ್ತಿ" ಪ್ರೀತಿ, ಕ್ರೋಧ, ಭಯ, ಆಶ್ಚರ್ಯ, ಚಿಂತೆ, ಔತ್ಸುಕ್ಯ, ನಾಚಿಕೆ, ಹರ್ಷ, ಇಂಥವು ಚಿತ್ತವೃತ್ತಿಗಳು ಹೀಗಾಗಿ ಚಿತ್ತವೃತ್ತಿ ಸಾಮಾನ್ಯ ಅಥವಾ ಚಿತ್ತವೃತ್ತಿ ವಿಶೇಷ ಎಂಬಷ್ಟಕ್ಕೆ 'ಭಾವ' ಎಂಬ ಪದವನ್ನು ಅನ್ವಯಿಸಿಕೊಂಡಾಗ ಮುಂದಿನ ಅಧ್ಯಾಯಗಳೆಲ್ಲ ಪರಿಣಾಮಕಾರಿಯಾಗುತ್ತಾ ಹೋಗುತ್ತದೆ. –

ಕಾವ್ಯನಾಟಕಗಳ ಮೂಲವಸ್ತುವೆಲ್ಲವೂ ಲೋಕದ ಸಂಗತಿಯೇ ಆಗಿರುತ್ತದೆ. ಅದು ಕವಿ ಪ್ರತಿಭೆಯಲ್ಲಿ ರೂಪುಗೊಂಡು ಹೊರಬಿದ್ದಾಗ ಹೊಸದೊಂದು ಪ್ರಪಂಚವೇ ನಿರ್ಮಾಣವಾಗುತ್ತದೆ. ಈ ಕಲಾ ಪ್ರಪಂಚದಲ್ಲಿ 'ಭಾವ'ದ ಕಾರಣಗಳನ್ನು 'ವಿಭಾವ'ವೆಂದೂ ಕಾರ್ಯಗಳನ್ನು ಅನುಭಾವವೆಂದು ಕರೆಯುವ ಸಂಪ್ರದಾಯವಿದೆ. ರಸಾನುಭವ ಮುಖವಿಕಾಸ ಮೊದಲಾದವನ್ನು ಅನುಭಾವವೆಂಬ ಹೆಸರಿನಲ್ಲಿ ಕರೆಯಲಾಗಿದೆ. ಉದಾಹರಣೆ 'ರಸರತ್ನಾಕರ'ದಲ್ಲಿ ಭಾವದೆ ಪುಟ್ಟಿದ ರಸಮಂ । ಭಾವುಕರದನಪಿದು ಸವಿವುದೇ ಅನುಭಾವಂ' ಎಂದು ಹೇಳಲಾಗಿದೆ. [7]

ವಿಭಾವ ಎಂದು ಅವುಗಳ ಪ್ರಭಾವದ ತಾರತಮ್ಯವನ್ನು ಅನುಸರಿಸಿ ಎರಡು ಬಗೆಯಾಗಿ ವಿಂಗಡಿಸುತ್ತಾರೆ. ಭಾವವು ಆವಿರ್ಭವಿಸುವುದಕ್ಕೆ ಮೂಲಾಶ್ರಯವಾದ ಕಾರಣವೇ ಆಲಂಬನವಿಭಾವ. ಹೀಗೆ ಉದಿಸಿದ ಭಾವವನ್ನು ಪ್ರಬಲಪಡಿಸುವ ಸಾಮಗ್ರಿ ಉದ್ದೀಪನ ವಿಭಾವ. ಶಕುಂತಲೆ "ತಪೋವನ ವಿರೋಧಿಯಾದ ವಿಕಾರಕ್ಕೆ ಒಳಗಾದಳು" ಅವಳಲ್ಲಿ ಹೀಗೆ ಮೇಲಕ್ಕೆದ್ದ ರತಿಭಾವಕ್ಕೆ ದುಷ್ಯಂತನು ಆಲಂಬನ ವಿಭಾವ: ಅವನಿಲ್ಲದಿದ್ದರೆ ಈ ಭಾವ ಉಕ್ಕುತ್ತಲೇ ಇರಲಿಲ್ಲ. ಇವರಿಬ್ಬರ ಹೃದಯದಲ್ಲಿ ಪ್ರೇಮ ಸಂಚಾರವಾಗುತ್ತಲೂ ಇದನ್ನು ಆಶ್ರಮದ ನಿರಾತಂಕವಾದ ಪರಿಸರಣ ಸಖಿಯರ ಪ್ರೋತ್ಸಾಹ ನಡುನಡುವೆ ಒದಗುವ ಅಗಲಿಕೆ – ಈ ಮೊದಲಾದ ಅನೇಕ ಅಂಶಗಳು ಇನ್ನಷ್ಟು ಕೆರಳಿಸುತ್ತವೆ. ಇವೆಲ್ಲ ಉದ್ದೀಪನ ವಿಭಾವಗಳು.

"ವಿಭಾವಾನುಭಾವವ್ಯಭಿಚಾರಿಸಂಯೋಗಾದ್ರಸನಿಷ್ಪತ್ತಿಃ" –

ವಿಭಾವಗಳು ಅನುಭಾವಗಳು, ಸಂಚಾರಿಭಾವಗಳು ಇವುಗಳ ಸಂಯೋಗದಿಂದ ರಸನಿಷ್ಪತ್ತಿಯಾಗುವುದು. ಇದು ಭರತನು ಮಂಡಿಸಿದ ಪ್ರಖ್ಯಾತ ಸೂತ್ರ ಇದು ಹೇಗೆ ಎಂಬುದನ್ನು ತಿಳಿದು ಪಡಿಸಲು ಅವನು ಲೌಕಿಕ ದೃಷ್ಟಾಂತಗಳನ್ನು ಕೊಡುತ್ತಾನೆ. "ಬೆಲ್ಲ ಮೊದಲಾದ ದ್ರವ್ಯಗಳು, ಮಸಾಲೆ, ವನಸ್ಪತಿಗಳು ಇವುಗಳಿಂದ ಷಾಡವ (ಒಂದು ಬಗೆಯ ಪಾನಕ) ಮೊದಲಾದ ರಸಗಳುಂಟಾಗುವವೋ, ಹಾಗೆಯೇ ಅನೇಕ ಭಾವಗಳಿಂದ ಕೂಡಿದ ಸ್ಥಾಯಿಭಾವಗಳೂ

---

[7] ಭಾರತೀಯ ಕಾವ್ಯ ಮೀಮಾಂಸೆ ತಿ. ನಂ. ಶ್ರೀ ಪು. ಸಂ. ೨೭೪

ರಸತತ್ವವನ್ನು ಹೊಂದುತ್ತವೆ. ರಸ ಹೇಗೆ ಆಸ್ವಾದ್ಯವಾಗುತ್ತದೆ ಎಂಬುದನ್ನು ಭರತನು ಊಟದ ಸಾದೃಶ್ಯದಿಂದ ಹೀಗೆ ಹೇಳುತ್ತಾನೆ.

ಯಥಾ ಬಹುದ್ರವ್ಯಯುತೈಃ ವ್ಯಂಜನ್ಯೈರ್ಬಹುಭಿರ್ಯುತೈಃ ।
ಆಸ್ವಾದಯಂತಿ ಭುಂಜಾನಾಃ ಭಕ್ತಂ ಭಕ್ತವಿದೋ ಜನಾಃ ॥
ಭಾವಾಭಿನಯಸಂಬದ್ಧಾನ್ ಸ್ಥಾಯಿಭಾವಾಂಸ್ತಥಾಬುಧಾಃ ।
ಆಸ್ವಾದಯಂತಿ ಮನಸಾ ತಸ್ಮಾನ್ನಾಟ್ಯರಸಾಃಸ್ಮೃತಾ ॥

(ನಾಟ್ಯಶಾಸ್ತ್ರ ೬, ೩೧–೩೨)

ಹಲವು ದ್ರವ್ಯಗಳಿಂದ ಕೂಡಿದ ಅನೇಕ ವ್ಯಂಜನಗಳನ್ನು ಅನ್ನಕ್ಕೆ ಕಲಸಿಕೊಂಡು ಊಟದ ರುಚಿಯನ್ನು ಬಲ್ಲವರು ಹೇಗೆ ಊಟ ಮಾಡುತ್ತಾ ಆಸ್ವಾದಿಸುತ್ತಾರೋ, ಹಾಗೆಯೇ ಭಾವಾಭಿನಯಗಳಿಂದ ಕೂಡಿದ ಸ್ಥಾಯಿ ಭಾವಗಳನ್ನು ವಿದ್ವಾಂಸರು ಮನಸ್ಸಿನಲ್ಲಿ ಆಸ್ವಾದಿಸುತ್ತಾರೆ. ಆದ ಕಾರಣ ಇವುಗಳನ್ನು ನಾಟ್ಯರಸಗಳೆಂದು ತಿಳಿಯುತ್ತಾರೆ – ಎನ್ನುವ ಈ ಶ್ಲೋಕದಲ್ಲಿ ನಾಲಗೆಯ ರುಚಿಗೆ ರಸವನ್ನು ಹೋಲಿಸಿದ್ದಾನೆ. – [8]

ಡಿ. ರಸವನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳು

ಶಂಕುಕನ ವಿಚಾರಗಳು

"ಭರತನ ನಾಟ್ಯಶಾಸ್ತ್ರಕ್ಕೆ ವ್ಯಾಖ್ಯಾನವನ್ನು ಬರೆದ ಹಳಬರಲ್ಲಿ ಭಟ್ಟಲೊಲ್ಲಟ ಮತ್ತು ಶಂಕುಕ ಮುಖ್ಯರಾದವರು. ಶಂಕುಕನ ಅಭಿಪ್ರಾಯವನ್ನು ಅಭಿನವಭಾರತೀ' ಮತ್ತು 'ಧ್ವನ್ಯಾಲೋಕಲೋಚನ' ಹಾಗೂ 'ಕಾವ್ಯಾಪ್ರಕಾಶ'ಗಳಲ್ಲಿ ಕಾಣಬಹುದು ಇವುಗಳ ಆಧಾರದಿಂದಷ್ಟೇ ಶಂಕುಕನ ವಿಚಾರಗಳು ಸ್ಥೂಲವಾಗಿ ತಿಳಿಯುತ್ತವೆ".

ಶಂಕುಕನ ಪ್ರತಿಪಾದನೆಯಂತೆ ಸ್ಥಾಯಿ ಭಾವವು ಅನುಕರ್ತರಲ್ಲಿ ಮಾತ್ರ ಇರುತ್ತದೆ. ಅನುಕರ್ತ ಅಥವ ನಟ ಅದನ್ನು ಅಭಿನಯ ಕೌಶಲದಿಂದ ಅನುಕರಿಸುತ್ತಾನೆ. ಅವನೂ ಪಾತ್ರದ ಸ್ಥಾಯಿ ಭಾವವನ್ನು ಅನುಭವಿಸುತ್ತಿದ್ದಾನೆ ಎನಿಸುತ್ತದೆ. ಆದ್ದರಿಂದ 'ಸ್ಥಾಯಿಭಾವದ ನಾಟ್ಯಾನುಕೃತಿಯೇ ರಸಃ ವಿಭಾವ. ಅನುಭಾವ. ವ್ಯಾಭಿಚಾರೀ ಭಾವಗಳು ನಾಟ್ಯದಲ್ಲಿರುತ್ತವೆ. ಶಬ್ದಾದಿಗಳಿಂದ ಸ್ಥಾಯಿಭಾವ ಉಂಟಾಗುತ್ತದೆ. ಅಂದರೆ ಅಭಿನಯದ ಮೂಲಕವಷ್ಟೇ ಭಾವದ ಸ್ಥಾಪನೆಯಾಗುತ್ತದೆ. ಹೀಗಾಗಿ ನಟನ ಮೂಲಕ ಅನುಕರಣೆಗೊಳ್ಳುವ ಪಾತ್ರಗಳ ಸ್ಥಾಯಿ ಭಾವವನ್ನು ಸಾಮಾಜಿಕರು ಊಹಿಸಿಕೊಳ್ಳುತ್ತಾರೆ. ನಾಟಕದಲ್ಲಿ ಕವಿಯ ವಿಭಾವಾದಿಗಳನ್ನು ಹೇಗೆ ಚಿತ್ರಿಸಿರುತ್ತಾನೆಯೋ ಅದಕ್ಕೆ ಅನುಗುಣವಾಗಿ ಅನುಕರ್ತರು ವ್ಯವಹರಿಸುತ್ತಾರೆ. ಅಭಿನಯ

[8] ತೌಲನಿಕ ಕಾವ್ಯ ಮೀಮಾಂಸೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ ಪು. ಸಂ. ೩೩೮

ಕಲೆಯಲ್ಲಿನ ತರಬೇತಿಯಿಂದ ಅನುಭಾವಗಳ ಅನುಕರಣೆ ಸಾಧ್ಯವಾಗುತ್ತದೆ. ತನ್ನ ಕೃತಿಯ ಅನುಭಾವಗಳ ಆಧಾರದ ಮೇಲೆ ನಟನು ವ್ಯಭಿಚಾರಿ ಭಾವಗಳನ್ನು ಅನುಕರಿಸುತ್ತಾರೆ. ಹೀಗೆ ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳ ಅಭಿನಯವು ಕೃತ್ರಿಮವಾಗಿದ್ದರೂ ವಾಸ್ತವಿಕವೆಂದೇ ತೋರುತ್ತದೆ.

"ಅನುಕಾರ್ಯದ ವಾಸ್ತವಿಕ ಸ್ವರೂಪದ ಬಗೆಗೆ ಶಂಕುಕ ಒಂದು ಮಹತ್ವದ ಉತ್ತರವನ್ನು ನೀಡಿದ್ದಾನೆ. ಅನುಕಾರ್ಯವೆಂದರೆ ಕಾವ್ಯ ನಿಬದ್ಧರಾದ ರಾಮ, ದುಷ್ಯಂತ ಇತ್ಯಾದಿಗಳೇ ಹೊರತು ಐತಿಹಾಸಿಕವಾದ ರಾಮ, ದುಷ್ಯಂತರಲ್ಲ. ಐತಿಹಾಸಿಕ ವ್ಯಕ್ತಿಗಳು ಕವಿಯ ಪಾಲಿಗೆ ಅನುಕಾರ್ಯರಾದರೆ, ನಟನ ಮಟ್ಟಿಗೆ ಕಾವ್ಯದಲ್ಲಿ ಚಿತ್ರಿತವಾಗಿರುವ ಪಾತ್ರಗಳೇ ಅನುಕಾರ್ಯರು ಎಂದು ಅವನು ಹೇಳುತ್ತಾನೆ."

ರಸಕ್ಕೂ ಪ್ರೇಕ್ಷಕರಿಗೂ ಇರುವ ಸಂಬಂಧ ಎಂಥದ್ದು? ಶಂಕುಕನ ಅಭಿಪ್ರಾಯದಂತೆ ನಾಟ್ಯಶಾಲೆಯಲ್ಲಿ ಪ್ರದರ್ಶನಗೊಳ್ಳುವ ವಿಭಾವ, ಅನುಭಾವ ಮತ್ತು ವ್ಯಭಿಚಾರ ಭಾವಗಳ ಮೂಲಕ ಪ್ರೇಕ್ಷಕ ರಸವನ್ನು ಕಲ್ಪಿಸಿಕೊಳ್ಳುತ್ತಾನೆ. 'ಅನುಮಾನ' ಅಥವ 'ಕಲ್ಪನೆ'ಯಿಂದ ಸಹೃದಯರಿಗೆ ರಸಾನುಭವ ಅಥವ ಚಮತ್ಕಾರ ಉಂಟಾಗುತ್ತದೆ. ಅನುಕರ್ತನೇ ರಸಕ್ಕೆ ಆಧಾರ, ನಟನ ಅನುಕೃತಿಯ ಮೂಲಕ ಸಹೃದಯರು ರಸವನ್ನು ಅನುಮಾನಿಸಿಕೊಳ್ಳುತ್ತಾರೆ. ನಿಷ್ಪತ್ತಿ ಎಂದರೆ ಅನುಕೃತಿ ಎಂದೇ ಅರ್ಥ. ಪ್ರೇಕ್ಷಕರ ದೃಷ್ಟಿಯಿಂದ ನಿಷ್ಪತ್ತಿ ಎಂದರೆ ಅನುಮಿತಿ ಎಂದರ್ಥ. ಇದು ಶಂಕುಕನ ಅಭಿಪ್ರಾಯವಾಗಿದೆ.

ಭಟ್ಟನಾಯಕನ ಪ್ರತಿಪಾದನೆಗಳು : –

ಭರತನ ರಸಸೂತ್ರದ ಪ್ರಮುಖ ವ್ಯಾಖ್ಯಾನಕಾರ ಭಟ್ಟನಾಯಕ 'ಅಭಿನವಭಾರತಿ' 'ಧ್ವನ್ಯಾಲೋಕ ಲೋಚನ'ದಲ್ಲಿ ಈತನ ವಿಚಾರಗಳು ಪ್ರಸ್ತಾಪಗೊಂಡಿದೆ. ಅಭಿಧಾ, ಭಾವಕತ್ವ, ಭೋಜಕತ್ವ ಮತ್ತು ಸಾಧಾರಣೀಕರಣ ಇವು ಭಟ್ಟನಾಯಕನು ಪ್ರಸ್ತಾಪಿಸಿರುವ ಮುಖ್ಯ ಕಲ್ಪನೆಗಳು.

"ರಸವು ಪ್ರತೀಕವಾದದ್ದಲ್ಲ. ಉತ್ಪತ್ತಿಯಾದದ್ದೂ ಅಲ್ಲ. ಅಭಿವ್ಯಕ್ತವಾದದ್ದೂ ಅಲ್ಲ. ಅವನ ಪ್ರಕಾರ ರಸವು ಭೋಗ್ಯವಾದದ್ದು. ತನ್ನ ಈ ಪ್ರತಿಪಾದನೆಗೆ ಅವನು ಕಾವ್ಯದ ಮೂರು ವ್ಯಾಪಾರಗಳನ್ನು ಕಲ್ಪಿಸಿಕೊಂಡಿದ್ದಾನೆ. 'ಅಭಿಧಾ' ಎಂಬುದು ಶಬ್ದದ ಸಾಮಾನ್ಯ ಹಾಗೂ ಪ್ರಥಮ ವ್ಯಾಪಾರ ಇದರ ಮುಖಾಂತರ ಕಾವ್ಯದಲ್ಲಿನ ಶಬ್ದಾರ್ಥಗಳ ಅರಿವು ಉಂಟಾಗಿರುತ್ತದೆ. ಅಭಿಧಾ ಎಂಬುದು ಕಾವ್ಯ ಶಾಸ್ತ್ರ, ಪುರಾಣ ಇತಿಹಾಸಗಳೆಲ್ಲವುದಕ್ಕೂ ಸಮಾನವಾಗಿ ಇರುವಂಥದ್ದು"

ಭೋಜಕತ್ವವು ಸಹೃದಯನ ರಸ-ಭೋಗವನ್ನು ಸೂಚಿಸುತ್ತದೆ. ಈ ಭೋಗವು ಅನುಭವ ಮತ್ತು ಸ್ಮರಣೆಯೇ ಮೊದಲಾದ ಲೌಕಿಕ ಅನುಭವಗಳಿಗಿಂತ ವಿಲಕ್ಷಣವಾಗಿರುತ್ತದೆ. ಈ ಹೊತ್ತಿನಲ್ಲಿ ಸತ್ವೋದ್ರೇಕ ಉಂಟಾಗುವುದರಿಂದ ಸಹೃದಯನ ಮನಸ್ಸು ಆನಂದ ಮಗ್ನವಾಗುತ್ತದೆಯಾದರೂ

ಅದರಲ್ಲಿ ರಜೋಗುಣ ಮತ್ತು ತಮೋಗುಣಗಳು ಬೆರೆತಿರುವುದರಿಂದ ಈ ಸ್ಥಿತಿ ಬ್ರಹ್ಮಾಸ್ವಾದಕ್ಕೆ ಸಮಾನವಾಗಿರುತ್ತದೆ.

"ಸಾಧಾರಣೀಕರಣ ಎನ್ನುವುದು ಭಟ್ಟನಾಯಕನ ಇನ್ನೊಂದು ಮಹತ್ವದ ಕಲ್ಪನೆ. ಕವಿಯ ಲೋಕಾನುಭವಕ್ಕೆ ಕಾರಣಗಳು ಲೋಕದಲ್ಲೇ ಇರುತ್ತವೆ. ಈ ಅನುಭವದಿಂದ ಲೋಕಸಹಾಯವಾದ ಕ್ರಿಯಾಪೇಕ್ಷಿ ಭಾವಗಳು ಎಲ್ಲರ ಮನಸ್ಸಿನಲ್ಲೂ ಉಂಟಾಗುತ್ತದೆ. ಆದರೆ ಕಾವ್ಯಾನುಭವ ನಮ್ಮಲ್ಲಿ ಉಂಟುಮಾಡುವ ಭಾವಗಳು ಕ್ರಿಯಾಪೇಕ್ಷಿಯಾಗಿರುವುದಿಲ್ಲ. ಈತನ ಪ್ರಕಾರ ಕವಿಯು ಲೋಕಾನುಭವವನ್ನು ಕಾವ್ಯದಲ್ಲಿ ನಿರೂಪಿಸುವಾಗ ಅನುಭವಕ್ಕೆ ಕಾರಣವಾದ ವಿಭಾವ, ಅನುಭವದ ಕಾರ್ಯರೂಪವಾದ ಅನುಭಾವ, ಅನುಭವದ ಸಹಚರಿಗಳಾದ ವ್ಯಭಿಚಾರ ಭಾವ ಇವೆಲ್ಲವೂ 'ಸಾಧಾರಣೀಕರಣ'ಕ್ಕೆ ಒಳಗಾಗುತ್ತವೆ. ಈ ಸಾಧಾರಣೀಕರಣಗೊಳ್ಳುವ ಪ್ರಕ್ರಿಯೆಯನ್ನು ಭಟ್ಟನಾಯಕನು ಭಾವಕತ್ವವೆಂದು ಕರೆದಿದ್ದಾನೆ".

ಅಭಿನವ ಗುಪ್ತನ ವಿಚಾರಗಳು : –

ಭಾವಗಳು ನಾಟಕ ಅರ್ಥದ ಕಾವ್ಯದ ಉಪಕರಣಗಳ ಮೂಲಕ ಸಾಧಾರಣೀಕೃತವಾಗಿ ಆಸ್ವಾದ್ಯ ಅಥವ ಸುಖಮಯ ಪ್ರತೀತಿಯ ವಿಷಯಗಳಾಗಿ ಬಿಡುತ್ತವೆ. ಈ ಆಸ್ವಾದ್ಯಭಾವ ಹಾಗೂ ಅದರ ಸುಖಮಯ ಪ್ರತೀತಿಯೇ ರಸ. ರಸಾಸ್ವಾದನೆಯಲ್ಲಿ ಸಹೃದಯನ ಆತ್ಮವು ಉಪೇಕ್ಷಿತವಾಗಿರುವುದಿಲ್ಲ. ವಿಶೇಷ ರೂಪದಲ್ಲಿ ಉಲ್ಲೇಖಿತವಾಗಿರುವುದಿಲ್ಲ. ಅಂದರೆ ಸಹೃದಯನ ಆತ್ಮಕ್ಕೆ ಮಾತ್ರವೇ ರಸ ಪ್ರತೀತಿ ಉಂಟಾಗಿರುತ್ತದೆ. ಪ್ರತಿಯೊಂದು ವ್ಯಾಪಾರಕ್ಕೂ ಮೂರು ಅಂಗಗಳಿರುತ್ತವೆ. ಕರಣ. ಫಲ ಮತ್ತು ಇವೆರಡರ ನಡುವಿನ ನಿರ್ವಹಣೆ. ಸಾಧಾರಣೀಕರಣವು ಕಾವ್ಯಾವ್ಯಾಪಾರದ ಫಲ. ಸೂಕ್ತ ಗುಣಾಲಂಕಾರಗಳ ಸಮಾವೇಶವೇ ನಿರ್ವಹಣೆ. ಧ್ವನಿ ಅಥವಾ ಶಬ್ದಾರ್ಥದ ವ್ಯಂಜನಾ ಶಕ್ತಿಯೇ ಕರಣ. ರಸವು ಬ್ರಹ್ಮಾಸ್ವಾದಕ್ಕೆ ಸಮಾನವಾದದ್ದು, ಆಸ್ವಾದಾತ್ಮಕವಾದ ಮತ್ತು ನಿರ್ವಿಘ್ನವಾದ ಪ್ರತೀತಿಯಿಂದ ಗ್ರಾಹ್ಯವಾಗುವ ಸ್ಥಾಯಿ ಭಾವವೇ ರಸ. [೯]

[9] ತೌಲನಿಕ ಕಾವ್ಯ ಮೀಮಾಂಸೆ ಮತ್ತು ಆಧುನಿಕ ಸಾಹಿತ್ಯ ವಿಮರ್ಶೆಯ ಮೂಲತತ್ವಗಳು – ಓ. ಎಲ್. ನಾಗಭೂಷಣಸ್ವಾಮಿ.

ಪಾಶ್ಚಿಮಾತ್ಯ ಸಾಹಿತಿಗಳ ಕಲ್ಪನೆ : –

ಪ್ಲೇಟೋವಿನ ಕೃತಿ ರಿಪಬ್ಲಿಕ್ ಆದರ್ಶ ರಾಜ್ಯದ ಕಲ್ಪನೆ – ಆದರ್ಶ ರಾಜ್ಯದಲ್ಲಿ ಕವಿಗಳಿಗೆ ಸ್ಥಾನವಿಲ್ಲ.

'ಅಯಾನ್' ಪ್ಲೇಟೋವಿನ ಮತ್ತೊಂದು ಕೃತಿ. 'ಸಂಜ್ಞಾ' ಅಥವಾ 'ಭಾವನಾ ಸಿದ್ಧಾಂತ' – ಸೌಂದರ್ಯ' ಮತ್ತು ಪ್ರೇಮಗಳೊಡನೆ ಅಸ್ಪಷ್ಟ ಸಂಬಂಧದಲ್ಲಿ ಬಹುತೇಕ ಪ್ರಕಟಗೊಂಡಿದೆ. ಪ್ಲೆಟೋವಿನ ಸಂವಾದಗಳಲ್ಲಿ 'ಸುಂದರ' ಎಂಬ ಪದ ನೈಸರ್ಗಿಕ ವಸ್ತುಗಳು ಕಲಾವಸ್ತುಗಳು, ಸಂಸ್ಥೆಗಳು ಮತ್ತು ಭಾವನೆಗಳು ಮುಂತಾದ ವಿಷಯಗಳಿಗೆ ಸಂಬಂಧಪಟ್ಟಿದೆ.

ಅರಿಸ್ಟಾಟಲ್ : ಪಾಶ್ಚಾತ್ಯ ಮೀಮಾಂಸೆಯ ಆದ್ಯ ಪ್ರವರ್ತಕ ಇವನ ಕೃತಿ 'Poetics' ಮತ್ತು 'Rheterics' ಅನುಕರಣತತ್ವ ಮತ್ತು ಶೋಧನಾತತ್ವ ಇವು ಇವನು ಪ್ರತಿಪಾದಿಸಿದ ತತ್ವಗಳಾಗಿದೆ. 'ಅಲಂಕಾರವಾದ' ಎಂಬ ಶಬ್ದವನ್ನು ಪ್ರಯೋಗಿಸಿದ ಪ್ರಖ್ಯಾತ ಸಾಹಿತಿ ಅರಿಸ್ಟಾಟಲ್. "ಕಾವ್ಯವೆಲ್ಲ ಅನುಕರಣೆಯೇ ಆದರೂ ಅನುಕರಣೆಯ ವಸ್ತು. ವಿಧಾನ ಮತ್ತು ರೂಪಗಳು ಬೇರೆ ಬೇರೆಯಾದ್ದರಿಂದ ಈ ಪ್ರಕಾರಗಳು ಭಿನ್ನವಾಗಿ ಕಾಣುತ್ತವೆ" ಎಂದು ಅರಿಸ್ಟಾಟಲ್ ಹೇಳುತ್ತಾನೆ. 'ಅನುಕರಣೆ' ಎನ್ನುವುದು ಮನುಷ್ಯ ಪ್ರವೃತ್ತಿ ಮತ್ತು ಸಾಹಿತ್ಯದ ಒಂದು ಪ್ರಮುಖ ಅಂಶ. ಅನುಕರಣೆಯ ವಸ್ತು, ವಿಧಾನ ಮತ್ತು ರೂಪಗಳನ್ನು ಅನುಕರಿಸಿ ಕಾವ್ಯದ ಪ್ರಕಾರಗಳು ನಿರ್ಮಾಣಗೊಳ್ಳುತ್ತವೆ. ಗಂಭೀರ ನಾಟಕವು ತನ್ನ ಕೆಥಾರ್ಸಿಸ್‌ನಿಂದಾಗಿ ಮನುಷ್ಯನಿಗೆ ಉಪಯುಕ್ತವಾದದ್ದು. ಸಾಹಿತ್ಯವನ್ನು ಸಾವಯವ ಕೃತಿ ಎಂದು ಪರಿಗಣಿಸಬೇಕು. ಸಾಹಿತ್ಯದ ಸತ್ಯ ಸ್ವಭಾವತಃ ಚರಿತ್ರೆಯ ಅಥವ ತತ್ವಶಾಸ್ತ್ರದ ಸತ್ಯಕ್ಕಿಂತ ಭಿನ್ನವಾಗಿದೆ.

ಹೊರೇಸ್ : (art poetica) – 'ಕಾವ್ಯಕಲೆ' ಈತನು ರಚಿಸಿದ ಗ್ರಂಥವಾಗಿದೆ. 'ಸಮ್ಯಕಜ್ಞಾನ' ಅಥವಾ 'ಸತ್‌ವಿವೇಕವೇ ಸತ್ಕಾವ್ಯದ ಮೂಲ ಮತ್ತು ಆಧಾರ'ವೆಂಬುದು ಈತನ ಸಿದ್ಧಾಂತವಾಗಿದೆ. ಅರಿಸ್ಟಾಟಲನ ನಂತರ ಗಮನ ಸೆಳೆಯುವಂಥ ಸಿದ್ಧಾಂತಿಯೆಂದರೆ ಹೊರೇಸ್. ಭಾವಗೀತೆ ರಚಿಸಿದ ಪ್ರಖ್ಯಾತ ಕವಿ ಹೊರೇಸ್. 'ಎಪಿಸ್ಟೋಲಾ ಅಂಡ್ ಪಿಸೋನೆಸ್' ಇವನ ಅಂತ್ಯಕಾಲದಲ್ಲಿ ರಚಿತವಾದ ಸುಂದರ ಕೃತಿ. ಹೋಮರ್‌ನ ಕೃತಿಗಳ ಬಗ್ಗೆ ಹೊರೇಸ್‌ನ ಅಭಿಪ್ರಾಯ ಇಂತಿದೆ. "ಹೋಮರ್‌ನ ಕೃತಿಗಳು ಸದಾ ನಿನ್ನ ಅಭ್ಯಾಸ ಮತ್ತು ಆನಂದಗಳಾಗಿರಲಿ. ಹಗಲಿನಲ್ಲಿ ಅದನ್ನು ಓದು, ರಾತ್ರಿಯಲ್ಲಿ ಮನನ ಮಾಡು" ಎನ್ನುತ್ತಾನೆ. ಐಕ್ಯತೆ ಮತ್ತು ಸರಳತೆ ಎಂಬ ಪದಗಳನ್ನು ಬಳಸಿದ ಮೊದಲಿಗನೆಂದರೆ ಹೊರೇಸ್, ಸಂಪ್ರದಾಯ ಪ್ರತಿಭೆ ಮತ್ತು ಕಲಾ ನಿಯಮವನ್ನು ಈತನು ಸಾಹಿತ್ಯದಲ್ಲಿ ಬಳಸಿದ್ದಾನೆ.

ಸ್ವೋಪಜ್ಞತೆ ಮತ್ತು ಮಾದರಿ ಅನುಕರಣೆಗಳ ನಡುವೆ ಹಿಂದೆ ಸಮತೋಲನವನ್ನು ಕವಿಯಾದವನು ಕಂಡುಕೊಳ್ಳಬೇಕೆಂಬುದು ಹೊರೇಸ್‌ನ ಆಶಯ. ಸ್ಪಷ್ಟತೆ ಮತ್ತು ಸುಸಂಬದ್ಧತೆಗಳು

ಲಭಿಸುವವರೆಗೂ ಕಾವ್ಯದ ಸಾಲುಗಳನ್ನು ತಿದ್ದಿ ಪರಿಷ್ಕರಿಸಬೇಕು. ಈ ಪರಿಷ್ಕಾರಕ್ಕೆ ಬೇಕಾದ ವಿವೇಕವು ಶಿಸ್ತು ಮತ್ತು ಆತ್ಮ ವಿಮರ್ಶೆಯಿಂದ ದೊರೆಯುತ್ತದೆ ಎಂದು ಹೊರೇಸ್ ಹೇಳಿದ್ದಾನೆ. ಸಾಹಿತ್ಯ ರಚನೆಯಲ್ಲಿ ನಿಸರ್ಗ ಸಹಜ (ನೇಚರ್) ಮತ್ತು ಕಲೆ (ಆರ್ಟ) ಗಳ ಸಂಬಂಧವನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾನೆ.

ಲಾಂಜಿನಸ್ : ಪೇರಿಹಾಪ್ ಸಾಸ್ ಅಥವಾ ಆನ್ ದಿ ಸಬ್ಲೈಮ (on the sublime) – ಭವ್ಯತೆಯನ್ನು ಕುರಿತು ಪ್ರಬಂಧವನ್ನು ರಚಿಸಿದ್ದಾನೆ. ಕನ್ನಡದಲ್ಲಿ ನವೋದಯ ವಿಮರ್ಶೆಯಲ್ಲಿ ಬಳಕೆಯಾಗಿರುವ ಭವ್ಯತೆ ಅನ್ನುವ ಪದಕ್ಕೆ ಇರುವ ಅರ್ಥಗಳು ಇಲ್ಲಿ ಪೂರ್ಣವಾಗಿ ಹೊಂದುವುದಿಲ್ಲ. ಸಬ್ಲೈಮ್ ಅನ್ನುವುದು ಒಂದು ಬಗೆಯ ಉನ್ನತಗೊಳಿಸಲ್ಪಟ್ಟ ಭಾಷೆಯನ್ನು ಸೂಚಿಸುತ್ತದೆ. ವಿಶಿಷ್ಟ ಅಭಿವ್ಯಕ್ತಿ ಮತ್ತು ವಿಶಿಷ್ಟ ಶ್ರೇಷ್ಠತೆಯನ್ನು ಭವ್ಯತೆ ಎಂದು ಕರೆಯುತ್ತಾನೆ. ಓದುಗರ ಮನವೊಲಿಸುವುದಕ್ಕಿಂತ ಅವರನ್ನು ಪರವಶಗೊಳಿಸುವಂಥದ್ದೇ ಉಜ್ಜೀತವಾದ ಭಾಷೆ ಎಂಬುದು ಈತನ ವಾದವಾಗಿದೆ. ಸಕಾಲದಲ್ಲಿ ಮಿಂಚಿ ತನ್ನೆದುರಿಗಿನದೆಲ್ಲವನ್ನು ಬೆಳಗುವ ಮಿಂಚಿನಂತೆ, ಓದುಗರ ಮನಸ್ಸನ್ನು ಕೋರೈಸುವುದೇ ಭವ್ಯತೆ ಎಂಬುದು ಲಾಂಜೈನಸ್‌ನ ಅಭಿಪ್ರಾಯ "ನಮ್ಮನ್ನು ಆನಂದದಿಂದ ತುಂಬುವ, ನಾವು ಕೇಳಿದಮಾತನ್ನು ನಾವೇ ಆಡಿದ್ದು ಅನ್ನಿಸುವಂತೆ ಮಾಡುವ ಗುಣ, ಎಲ್ಲರನ್ನೂ ಎಲ್ಲ ಕಾಲದಲ್ಲೂ ಆನಂದಗೊಳಿಸಬಲ್ಲದ್ದು ಯಾವುದೋ ಅದೇ ನಿಜವಾಗಿ ಸುಂದರವಾದದ್ದು ಮತ್ತು ಭವ್ಯವಾದದ್ದು" ಇದು ಲಾಂಜೈನಸ್‌ನ ಪ್ರತಿಪಾದನೆಯಲ್ಲಿ ಪರಿಗಣಿಸಬೇಕಾದ ಅಂಶ.

ಬೆನಡಿಟ್ಟೋ ಕ್ರೋಚೆ : ಪ್ರೌಢ ಸಾಹಿತ್ಯ ಮಾರ್ಗದ ಸಿದ್ಧಾಂತಗಳನ್ನೊಳಗೊಂಡು ನವೀನ ಸೌಂದರ್ಯೋಪಾಸಕ ತತ್ವಜ್ಞಾನಿಯೆ ಬೆನಡಿಟ್ಟೋ ಕ್ರೋಚೆ. Aesthestic ಈತನ ಕೃತಿ. ಸೌಂದರ್ಯ ಶಾಸ್ತ್ರದ ಪ್ರತಿಪಾದಕನಾದ ಈತನು ಅಂತರ್‌ದೃಷ್ಟಿಯ ನಾಲ್ಕು ಶಕ್ತಿಗಳನ್ನು ಗುರುತಿಸಿದ್ದಾನೆ. ೧) ಗ್ರಹಣಶಕ್ತಿ, ೨) ಸಂವೇದನೆ, ೩) ಸಂಬಂಧ, ೪) ನಿರೂಪಣೆ Philisophy of the spirit ಈತನ ಇನ್ನೊಂದು ಕೃತಿ.

ವರ್ಡ್ಸ್‌ವರ್ತ್ : ನಿಸರ್ಗ ಕವಿ "The poetry is spontaneous overflow of powerful Feelings" Recollection Tranquility ಶಕ್ತಿಯುತ ಭಾವನೆಗಳ ಸ್ವಚ್ಛಂದ ಒಕ್ಕೂಟವೇ ಕಾವ್ಯ. ರೋಮಾಂಟಿಕ್ ಇಂಗ್ಲೀಷ್ ಸಾಹಿತ್ಯ ೧೭೯೮ ರಿಂದ ೧೮೩೨ ರವರೆಗಿನ ಅವಧಿಯನ್ನು ರೋಮಾಂಟಿಕ್ ಸಾಹಿತ್ಯ ಕಾಲವೆಂದು ಗುರುತಿಸುವರು. ಕಾವ್ಯ ಭಾಷೆಯ ಸ್ವರೂಪ, ಕಲ್ಪನೆ ಮತ್ತು ಪ್ರತಿಭೆಗಳ ಸ್ವರೂಪ. ವೈಚಾರಿಕತೆಗಿಂತ ಉತ್ಸಾಹ ಮತ್ತು ಸ್ಫೂರ್ತಿಗಳಿಗೆ ಮನ್ನಣೆ, ವಿಜ್ಞಾನದ ಧೋರಣೆಗಳ ವಿರೋಧ, ವೈಯಕ್ತಿಕತೆಗೆ ಮನ್ನಣೆ, ನಾಗರಿಕತೆ ಮತ್ತು ನೈಸರ್ಗಿಕತೆಗಳ ದ್ವಂದ್ವ ಇವು ರೋಮಾಂಟಿಕ್ ಸಾಹಿತ್ಯದ ಪ್ರಮುಖ ಅಂಶಗಳಾಗಿವೆ. ಈ ರೋಮಾಂಟಿಕ್ ಸಾಹಿತ್ಯದ ಸಾಹಿತಿಗಳಲ್ಲಿ ಪ್ರಮುಖ

ಹೆಸರೇ, ವಿಲಿಯಂ ವರ್ಡ್ಸ್‌ವರ್ತ್. ಸಾಹಿತ್ಯವು ಕನ್ನಡಿಯಲ್ಲ. ಬೆಳಕು ಬೀರುವ ದೀಪ ಎಂಬ ರೀತಿಯ ರೂಪಕಕ್ಕೆ ವರ್ಡ್ಸ್‌ವರ್ತ್ ಅವರಿಂದಾಗಿ ಪ್ರಾಮುಖ್ಯತೆ ದೊರೆಯಿತು. ಕವಿಯ ಧ್ಯಾನಶೀಲತೆಯಲ್ಲಿ ನಿರ್ದಿಷ್ಟ ಪ್ರಕ್ರಿಯೆಗಳು ಸಂಭವಿಸಿ ಶಾಂತತೆ ಮಾಯವಾಗಿ, ಧ್ಯಾನಕ್ಕೆ ಕಾರಣವಾಗಿದ್ದ ಭಾವನೆಗೆ ಸರಿಸಮವಾದ ಭಾವ ಮರುಗೊಳಿಸಿ ಅದೇ ಮನಸ್ಸನ್ನು ತುಂಬಿಕೊಳ್ಳುತ್ತದೆ. ಈ ಸ್ಥಿತಿಯಲ್ಲಿ ಯಶಸ್ವಿಯಾದ ರಚನೆ ತೊಡಗುತ್ತದೆ ಎಂದು ವರ್ಡ್ಸ್‌ವರ್ತ್ ಪ್ರತಿಪಾದಿಸಿದ್ದಾನೆ. ವರ್ಡ್ಸ್‌ವರ್ತ್ ಮತ್ತು ಕಾಲ್‌ರಿಜ್ ತಮ್ಮ ಕವಿತೆಗಳನ್ನು ಲಿರಿಕಲ್ ಬ್ಯಾಲಡ್ ಎಂಬ ಹೆಸರಿನಿಂದ ಪ್ರಕಟಿಸಿರುತ್ತಾರೆ.

ಕಾಲ್‌ರಿಜ್ : ಈತನು ಬರೆದ ಕೃತಿ 'ಬಯಾಗ್ರಾಫಿಯಾ ಲಿಟರೇರಿಯಾ' ಸೃಜನಶೀಲತೆಯ ಪ್ರಕ್ರಿಯೆ ಈತನ ಆಸಕ್ತಿಯ ವಿಷಯ ಪ್ರತಿಭಾ ಸಿದ್ಧಾಂತಕ್ಕೆ ಮಹತ್ವದ ಕೊಡುಗೆ ನೀಡಿದ್ದಾನೆ. ಸೃಜನಶೀಲತೆ ಮತ್ತು ಸೌಂದರ್ಯ ಸ್ವರೂಪದ ಸಂಬಂಧವನ್ನು ವಿವೇಚಿಸಿದ್ದಾನೆ. ಪ್ರತಿಭೆಯೊಂದು ಮಾನಸಿಕ ಶಕ್ತಿ ಕವಿಯ ಹೃದಯ ಮತ್ತು ಪ್ರಜ್ಞೆಗಳು ಪ್ರಕೃತಿಯ ಉದಾತ್ತ ಕಾಣ್ಕೆಗಳೊಡನೆ ಅತ್ಯಂತ ನಿಕಟವಾಗಿ ಬೆರೆಯಬೇಕು, ಒಂದಾಗಬೇಕು" ಎಂದು ಹೇಳಿದ್ದಾನೆ. ಇಮ್ಯಾಜಿನೇಶನ್ ಮತ್ತು ಫ್ಯಾನ್ಸಿ (ಕಲ್ಪನೆ ಮತ್ತು ಪ್ರತಿಭೆ) ಭಿನ್ನವಾದ ಮಾನಸಿಕ ಪ್ರಕ್ರಿಯೆಗಳೆಂದು ಗುರುತಿಸಿದವರಲ್ಲಿ ಕಾಲ್‌ರಿಜ್ ಪ್ರಮುಖನಾದವನು. ಸಂಸ್ಕೃತಕಾವ್ಯ ಮೀಮಾಂಸೆಯಲ್ಲಿ ಬರುವ 'ನವನವೋನ್ಮೇಶಶಾಲಿನೀ ಪ್ರತಿಭಾ' ಮತ್ತು 'ನವನವೋಲ್ಲೇಖಶಾಲಿನೀ ಪ್ರತಿಭಾ' ಇವು ಇಮ್ಯಾಜಿನೇಶನ್ (ಪ್ರತಿಭೆ)ಗೆ ಸಂವಾದಿಯಾಗಿದೆ ಎಂದು ತೀ. ನಂ. ಶ್ರೀ ಯವರು ಪ್ರತಿಪಾದಿಸಿದ್ದಾರೆ.

ಐ. ಎ. ರಿಚರ್ಡ್ಸ್ : 'ಪ್ರಾಯೋಗಿಕ ವಿಮರ್ಶೆಯ ಪಿತಾಮಹ' ಎಂದೇ ಹೆಸರಾಗಿರುವ ಇವನು 'Principales of literary Criticism' 'Practical Criticism' 'Science and poetry' The meaning of meaning ಎಂಬ ಕೃತಿಗಳನ್ನು ರಚಿಸಿದ್ದಾನೆ. ಕವಿಯ ಪಾತ್ರವನ್ನು ಗೌಣವಾಗಿಸಿ ಕೃತಿಗೆ ಪ್ರಾಮುಖ್ಯತೆಯನ್ನು ನೀಡಿದ್ದಾನೆ. ಕೃತಿಯನ್ನು ಮುಖ್ಯವಾಗಿ ಭಾಷಿಕವಾದ ರಚನೆ ಎಂದುಪರಿಗಣಿಸುವ ಪ್ರವೃತ್ತಿಗೆ ಇವನ ಚಿಂತನೆಗಳು ಚಾಲನೆ ನೀಡಿದವು. ನಮ್ಮ ವಿಮರ್ಶೆಯು ಮುಖ್ಯವಾಗಿ ಕೃತಿ ಕೇಂದ್ರಿತವಾಗಿ ಬೆಳೆಯಿತು. ಸೌಂದರ್ಯ ತತ್ವಕ್ಕೆ ಮಹತ್ವವನ್ನು ನೀಡಿರುವ ಈತನ ಹೇಳಿಕೆ ಇಂತಿದೆ. ಭಾವೋದ್ವೇಗಗಳನ್ನು ಕೆರಳಿಸುವುದೇ ಸೌಂದರ್ಯ, ಆನಂದವನ್ನು ಉಂಟು ಮಾಡುವುದೆಲ್ಲ ಸೌಂದರ್ಯ ಎಂದೂ ಅರ್ಥೈಸಬಹುದು.

ಸಿ. ಡಿ. ಲೂಯಿ : ಭಾವಗೀತೆಯ ಕವಿ ಮತ್ತು ವಿಮರ್ಶಕನೂ ಹೌದು ಕಾವ್ಯ ಪ್ರತಿಮೆ ಮತ್ತು ಪ್ರಭೇದಗಳನ್ನು ಕುರಿತು ದೀರ್ಘ ವಿವರಣೆ 'Poetic Image' ಎಂಬ ಕೃತಿಯಲ್ಲಿ ಕಾಣಬಹುದಾಗಿದೆ. ಕಾದಂಬರಿಕಾರನಾಗಿ ಮೂರು ಪ್ರಖ್ಯಾತ ಕಾದಂಬರಿಯನ್ನು ರಚಿಸಿರುತ್ತಾನೆ. 'Friendly', 'Trace starting point', 'Child of misfortune'.

ಟಿ. ಎಸ್. ಎಲಿಯಟ್ : ಕೃತಿಗಳು 'Traditional and individual talent', 'Theory of impersonality' (ವ್ಯಕ್ತಿತ್ವ ನಿರಸನ) ಸಾಹಿತ್ಯ ಚಿಂತನೆಗಳು ಕವಿಯ ಕಲ್ಪನೆಯನ್ನು ಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಲು ಪ್ರಯತ್ನಿಸಿದವು. ಎಲಿಯಟ್ ಕವಿಯನ್ನು ಅವನು ಬಳಸುವ ಭಾಷೆ ಮತ್ತು ಪರಂಪರೆಗಳ ಹಿನ್ನೆಲೆಯನ್ನು ವ್ಯಾಖ್ಯಾನಿಸಿದ ಪರಂಪರೆಗೆ ಶರಣಾಗಿ ತನ್ನತನವನ್ನು ನೀಗಿಕೊಂಡಾಗಲಷ್ಟೇ ಕವಿ ಮಹತ್ವದ್ದನ್ನು ಸಾಧಿಸಬಲ್ಲ ಎಂದು ಹೇಳುತ್ತಾನೆ. ಸೃಜನ ಶೀಲವಾಗಿರುವ ಕವಿ ವ್ಯಕ್ತಿತ್ವಕ್ಕೂ ಅವನ ಖಾಸಗೀ ವ್ಯಕ್ತಿತ್ವಕ್ಕೂ ಅಂತರವಿರುತ್ತದೆ. ಕಾವ್ಯವೆಂದರೆ ಭಾವನೆಗಳ ಅಭಿವ್ಯಕ್ತಿಯಲ್ಲ. ಕವಿಗೆ ಇರುವುದು ಮಾಧ್ಯಮ ಮಾತ್ರ. ಮಾಧ್ಯಮದ ಸಾಧ್ಯತೆಗಳನ್ನು ಸಾಕ್ಷಾತ್ಕರಿಸುವುದೇ ಉದ್ಯಮ ಎಂದು ಈತನು ಹೇಳುತ್ತಾನೆ. [೧೦]

ಇ. ರೀತಿ – ಮಾರ್ಗ – ಶೈಲಿಯ ಬಗ್ಗೆ ಒಂದು ಅಧ್ಯಯನ : –

ವಾಮನ – "ರೀತಿರಾತ್ಮಾ ಕಾವ್ಯಸ್ಯ" ಎನ್ನುತ್ತಾನೆ. ಈ ವಿಚಾರವು ಅಲಂಕಾರಿಕರಿಗೆ ಕಾವ್ಯತತ್ವ ವಿವೇಚನೆಯಲ್ಲಿ ಹೊಸ ಸಾಧ್ಯತೆಗಳನ್ನು ತಂದುಕೊಟ್ಟಿತು. ಈ ವೇಳೆಗಾಗಲೇ ಭಾಮಹ ಅನುಭವದ ಅಭಿವ್ಯಕ್ತಿಯಲ್ಲಿ ಅಲಂಕಾರಗಳ ಅನಿವಾರ್ಯತೆಯನ್ನು ಎತ್ತಿ ಹಿಡಿದಿದ್ದ. ಭಾಷೆಯ ವಿಶಿಷ್ಟ ಪದ ರಚನಾ ವಿನ್ಯಾಸವೇ ಕಾವ್ಯದ ಸಾರಸರ್ವಸ್ವ ಎಂಬುದು ವಾಮನನ ವಿಚಾರ.

ಕಾವ್ಯಕ್ಕೆ ಆತ್ಮವೊಂದಿದೆ ಎಂದು ವಾಮನ ಹೇಳಿದರೆ, ಭಾಮಹ ಅಲಂಕಾರಗಳ ಅಗತ್ಯವನ್ನು ಒತ್ತಿ ಹೇಳಿದ್ದಾನೆ. ದಂಡಿ ಕಾವ್ಯದಲ್ಲಿ ಗುಣಗಳ ಮಹತ್ವವನ್ನು ಎತ್ತಿ ಹಿಡಿದಿದ್ದಾನೆ. "ರೀತಿ ಕೃತಿಗೊಪ್ಪುವ ಮೆಯ್" ಎಂದು ನಾಗವರ್ಮ ಹೇಳಿದ್ದಾನೆ. ದಂಡಿ ಗುಣಗಳನ್ನು ವಿಶಾಲವಾದ ಅರ್ಥದಲ್ಲಿ ಅಲಂಕಾರಗಳೆಂದೇ ಕರೆಯುತ್ತಾನೆ. ಭಾಮಹ-ದಂಡಿ ಇವರ ಕಾಲಕ್ಕೆ ಬರವಣಿಗೆಯ ವಿಧಾನಗಳು ಎರಡೇ ಆಗಿದ್ದವು. ವೈದರ್ಭೀ ಮತ್ತು ಗೌಡೀ.

---

[10] ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯ ಪಕ್ಷಿನೋಟ, ಸಂಗ್ರಹಾನುವಾದ ಪ್ರೊ.ಜಿ.ಶಂಕರಯ್ಯ

ವೈದರ್ಭೀ ಶ್ರೇಷ್ಠವಾದ ಬರವಣಿಗೆಯಾಗಿ, ಗೌಡೀ ಅಷ್ಟೇನೂ ಶ್ರೇಷ್ಠವಲ್ಲದ ಬರವಣಿಗೆ ಎಂದು ಹೇಳಲಾಗುತ್ತಿತ್ತು.

ಪಾಶ್ಚಿಮಾತ್ಯ ಕಾವ್ಯ ಮೀಮಾಂಸೆಯಲ್ಲಿಯೂ ಮೊದಲಿಗೆ ಎರಡೇ ಶೈಲಿಗಳನ್ನು ಕುರಿತು ಚರ್ಚೆ ನಡೆದಿತ್ತು. "ಅರಿಸ್ಟಾಟಲ್‌ನು ಹೇಳುವುದು ಎರಡೇ ಶೈಲಿಗಳು. ಒಂದು ಒಳ್ಳೆಯದು, ಮತ್ತೊಂದು ಒಳ್ಳೆಯದಲ್ಲದ್ದು. ಸರಳತೆ, ಸುಕುಮಾರತೆ, ಓಜಸ್ಸು ಒಳ್ಳೆಯ ಕಾವ್ಯದ ಗುಣವಾದರೆ; ಒಳ್ಳೆಯದಲ್ಲದ್ದು, ಜಡವಾದದ್ದು ದಂಡಿಯು ಹೇಳುವ ಗೌಡೀ ಮಾರ್ಗವನ್ನು ಹೋಲುವಂತದ್ದಾಗಿದೆ. ರೋಮನ್ ಸಾಹಿತ್ಯ ವಿಮರ್ಶೆಯಲ್ಲಿ ಸಿಸಿರೋ ಎರಡು ಶೈಲಿಗಳನ್ನು ಪ್ರಸ್ತಾಪಿಸುತ್ತಾನೆ. ಒಂದು ವರ್ಣರಂಜಿತವಾದ, ಅಲಂಕಾರ ಪ್ರಚುರವಾದ ಏಶಿಯಾಟಿಕ್ (ಅಥವಾ ಸ್ಥೂಲವಾಗಿ ಪೌರ್ವಾತ್ಯ) ಮತ್ತೊಂದು ಹಿತಮಿತವಾದ. ವಿಶೇಷ ಬಿಗಿಯಾದ ಆಟ್ಟಿಕ್ (ಅಥವಾ ಗ್ರೀಕ್) ಮನುಷ್ಯ ಸ್ವಭಾವವನ್ನು ನಾವು ಸ್ಥೂಲವಾಗಿ ಗಣನೆಗೆ ತೆಗೆದುಕೊಂಡಲ್ಲಿ ಎರಡು ಮುಖ್ಯ ಜಾತಿಗಳು ಕಂಡು ಬರುತ್ತವೆ. ಪ್ರತಿಯೊಬ್ಬನದೂ ಸರಳ ಸ್ವಭಾವ ಆಡಂಬರದ ಸ್ವಭಾವ. ಅದರಂತೆ ಶೈಲಿಯೂ ಎರಡು ವಿಧ, ಸರಳ, ಸಾಲಂಕೃತ. ಕಾವ್ಯಭಿವ್ಯಕ್ತಿಯನ್ನು ಪರಿಶೀಲಿಸಿದರೆ, ಕಡೆಗೆ ನಿಲ್ಲುವುದು ಎರಡೇ ರೀತಿ ಸರಳವಾದದು, ಅಕ್ಷರ ಡಂಬರತೆಯಿಂದ ಕೂಡಿದ್ದು; ಸಾಧಾರಣ, ಉದಾತ್ತ; ನಿರಾಲಂಕೃತ ಮತ್ತು ಸಾಲಂಕೃತ ಮೊದಲನೆಯದಯ ಸ್ವಭಾವೋಕ್ತಿ ಹಾಗೂ ರಸೋಕ್ತಿಯಾದರೆ, ಎರಡನೇಯದು ವಕ್ರೋಕ್ತಿ".[೧೧].

[11] ಕಾವ್ಯಾರ್ಥ ಚಿಂತನ – ಡಾ । ಜಿ. ಎಸ್. ಶಿವರುದ್ರಪ್ಪ, ೧ ಪು. ಸಂ. ೧೨೩- ೧೨೪.

ಅಧ್ಯಾಯ – ೪

ರಸದ ಪ್ರಭೇದಗಳು

ಎಲ್ಲ ರಸಗಳ ಸತ್ವವು ಒಂದೇ ಆಗಿದ್ದರೂ ವಿಭಿನ್ನ ಸನ್ನಿವೇಶದಲ್ಲಿ ಒಂದೊಂದು ಅನುಭವವನ್ನು ನೀಡುತ್ತದೆ. ಮರದ ಜಾತಿ ಒಂದೇ ಆಗಿದ್ದರೂ ಒಂದೊಂದು ಹಣ್ಣು ಒಂದೊಂದು ರೀತಿಯ ಸಿಹಿಯನ್ನು ಹೊಂದಿರುತ್ತದೆ. ಭರತನು ಎಂಟು ರಸಗಳನ್ನು ನಾಟ್ಯಶಾಸ್ತ್ರದಲ್ಲಿ ವಿಂಗಡಿಸಿದ್ದಾನೆ.

ಶೃಂಗಾರ ಹಾಸ್ಯ ಕರುಣಾ ರೌದ್ರ ವೀರ ಭಯಾನಕಾಃ ।
ಬೀಭತ್ಸಾದ್ಭುತ ಸಂಜ್ಞಾ ಚೇತ್ಯಷ್ಟೌ ನಾಟ್ಯೇ ರಸಾಃ ಸ್ಮೃತಾಃ ॥

(ನಾಟ್ಯಶಾಸ್ತ್ರ ೬.೧೫)

"ಈ ಎಂಟು ರಸಗಳಿಗೆ ಎಂಟು ಸ್ಥಾಯಿ ಭಾವಗಳನ್ನು ಭರತನು ನಿರೂಪಿಸುತ್ತಾನೆ. ಶೃಂಗಾರಕ್ಕೆ ಸ್ಥಾಯಿಭಾವ ರತಿ ಹಾಸ್ಯಕ್ಕೆ ಹಾಸ. ಕರುಣಕ್ಕೆ ಶೋಕ. ರೌದ್ರಕ್ಕೆ ಕ್ರೋಧ. ವೀರಕ್ಕೆ ಉತ್ಸಾಹ. ಭಯಾನಕಕ್ಕೆ ಭಯ. ಬೀಭತ್ಸಕ್ಕೆ ಜುಗುಪ್ಸೆ, ಅದ್ಭುತಕ್ಕೆ ವಿಸ್ಮಯ ಎಂದು ಭರತನು ವಿಂಗಡಿಸಿದ್ದಾನೆ"...

<u>ಹಾಸ್ಯರಸ</u> : ಸನ್ನಿವೇಶದಲ್ಲಿ, ಸ್ವಭಾವದಲ್ಲಿ ಮಾತುಕತೆಯಲ್ಲಿ ಎಲ್ಲಾದರೂ ಉಕ್ಕಬಹುದಾದದ್ದು ಹಾಸ್ಯ ಮೃದು ಹಾಸ್ಯ. ಕಟು ಹಾಸ್ಯ, ಕುತ್ಸಿತ ಹಾಸ್ಯ ಹೀಗೆ ಹಾಸ್ಯವು ಬಹುರೂಪಿಯಾಗಿದೆ. ಭರತನು "ವಿಕಾರವಾದ ಅನ್ಯರ ವೇಷಾಲಂಕಾರಗಳು ನಾಚಿಗೇಡಿನ ಸ್ವಭಾವ. ವಿಷಯ ಚಾಪಲ್ಯ. ಕುಚೇಷ್ಟೆ ಮೊದಲಾದ ವಿಭಾವಗಳಿಂದ ಹಾಸ್ಯವು ಉದಿಸುತ್ತದೆ ಎಂದು ಹೇಳುತ್ತಾನೆ. ಹಾಸ್ಯದಲ್ಲಿ ಆತ್ಮಸ್ಥ. ಪರಸ್ಥ ಎಂಬ ಎರಡು ಬಗೆಯನ್ನು ಗುರುತಿಸುತ್ತಾನೆ.

ತಾನೇ ನಗುವುದು ಆತ್ಮಸ್ಥ; ಅನ್ಯರನ್ನು ನಗಿಸುವುದು ಪರಸ್ಥ ಎಂದು ಹೇಳಿ ಕೆಲವು 'ಆನುವಂಶ್ಯ'ವಾದ ಆರ್ಯೆಗಳನ್ನು ಉದಾಹರಿಸುತ್ತಾನೆ. ಸ್ಮಿತಮಥ ಹಸಿತಂ ವಿಹಸಿತಮುಪಹಸಿತಂ ಚಾಪಹಸಿತಮತಿಹಸಿತಂ
ದ್ವೌದ್ವೌ ಭೇದೌ ಸ್ಯಾತಾಮುತಮಧ್ಯಾಧಮ ಪ್ರಕೃತಾ ॥ .
ಹಾಸ್ಯದಲ್ಲಿ ಆರುವಿಧವನ್ನು ಭರತನು ಹೇಳಿದ್ದಾನೆ. ಉತ್ತಮ ಸ್ವಭಾವದವರಲ್ಲಿ ಸ್ಮಿತಹಸಿತ. ಮಧ್ಯಮ ಪ್ರಕೃತಿಯವರಲ್ಲಿ ಅಪಹಸಿತ ಅತಿಹಸಿತಗಳು ಕಾಣಿಸುತ್ತವೆ.

"ಭರತನು 'ಶೃಂಗಾರಾನುಕೃತಿರ್ಯಾತು ಸ ಹಾಸ್ಯಸ್ತು ಪ್ರಕೀರ್ತಿತಃ (ನಾಟ್ಯಶಾಸ್ತ್ರ ೬.೪೦) ಶೃಂಗಾರದ ಅನುಕರಣವೇ ಹಾಸ್ಯ ಎಂದು ಹೇಳುತ್ತಾನೆ. ಅಭಿನವ ಗುಪ್ತನು ತನ್ನ ವ್ಯಾಖ್ಯಾನದಲ್ಲಿ ಅನೌಚಿತ್ಯವೇ ಹಾಸ್ಯದ ಮೂಲ" ಎಂದು ಪ್ರತಿಪಾದಿಸಿದ್ದಾನೆ.

ಕರುಣ ರಸಕ್ಕೆ 'ಶೋಕವು' ಸ್ಥಾಯಿಯಾಗಿದೆ. ಇಲ್ಲಿ ಹೃದಯದ ಸಂವೇದನೆಯೇ ಬಲವಾಗಿರುತ್ತದೆ. ಇನ್ನೊಬ್ಬರಿಗೆ ದುಃಖ ಬಂದಾಗ ನಾವು ತೋರಿಸುವ ಕರುಣೆಯು ಕರುಣರಸವಲ್ಲ.

"ಪ್ರಿಯತಮ ಪ್ರಿಯತಮೆಗೆ ಒದಗಿದ ನಿರಂತರವಾದ ಅಗಲುವಿಕೆ ಕರುಣ ರಸದ ಒಂದು ವಸ್ತುವಾಗಿದೆ. ವಿಪ್ರಲಂಭವು 'ಸಾಪೇಕ್ಷ ಭಾವವೆಂದೂ ಕರುಣವು ನಿರಪೇಕ್ಷ ಭಾವ'ವೆಂದು ಭರತನು ನಿರೂಪಿಸುತ್ತಾನೆ".....

ಇಲ್ಲಿ 'ಸಾಪೇಕ್ಷ'ವೆಂದರೆ ಅವಲಂಬನದಿಂದ ಕೂಡಿರುವಂಥದ್ದು. ನಿರಪೇಕ್ಷವೆಂದರೆ ಅವಲಂಬನದಿಂದ ರಹಿತವಾದದ್ದು. ವಿಪ್ರಲಂಭಕ್ಕೂ ಕರುಣಕ್ಕೂ ಇರುವ ಸೂಕ್ಷ್ಮತೆಯನ್ನು ಲಾಕ್ಷಣಿಕರು ಈ ರೀತಿ ಗುರುತಿಸುತ್ತಾರೆ. ಪ್ರಿಯಕರ ಅಥವಾ ಪ್ರಿಯತಮೆಯರಲ್ಲಿ ಒಬ್ಬರಿಗೆ ಮರಣವುಂಟಾದ ಬಳಿಕ ವಿಯೋಗಧಿಂದ ವಿಲಾಪವುಂಟಾಗುತ್ತದೆ. ಈ ವಿಲಾಪವೇ ಕರುಣ ರಸವೆಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಬಾಣನ 'ಕಾದಂಬರಿ'ಯಲ್ಲಿ ಚಂದ್ರಾಪೀಡನು ಪ್ರಾಣ ತ್ಯಾಗ ಮಾಡುತ್ತಾನೆ. ಜನ್ಮಾಂತರ ಹೊಂದಿ ಮತ್ತೆ ಪುನರ್ಜನ್ಮ ಪಡೆದು ಕಾದಂಬರಿಯನ್ನು ಪಡೆಯುತ್ತಾನೆ.

ಮಹಾಶ್ವೇತೆ ಪುಂಡರೀಕರ ವೃತ್ತಾಂತ ಇನ್ನೂ ಅಪೂರ್ವವಾಗಿದೆ. ಪುಂಡರೀಕನು ಸಾವನ್ನು ಹೊಂದಿ ಜನ್ಮಾಂತರ ಹೊಂದಿ ಮಹಾಶ್ವೇತೆಯನ್ನು ಬಯಸಿ ಬರುತ್ತಾನೆ. ಆದರೆ ಆಕೆಗೆ ಅವನು ಯಾರೆಂದು ತಿಳಿಯುವುದಿಲ್ಲ. ಶಪಿಸಿ ಬಿಡುತ್ತಾಳೆ. ಕಥೆಯ ಅಂತ್ಯದಲ್ಲಿ ಇವರು ಪರಸ್ಪರ ಸಮಾಗಮ ಹೊಂದುತ್ತಾರೆ. ಅಂದರೆ ಕಾದಂಬರಿಯಂತೆ ಇವಳಿಗೂ ಪ್ರಿಯನು ಮತ್ತೆ ದೊರೆತನು. ಹೀಗಾಗಿ ಕರುಣ ರಸಕ್ಕೆ ವಿಪ್ರಲಂಭ ಶೃಂಗಾರಕ್ಕೂ ಪರಸ್ಪರ ಸಾಮ್ಯತೆಯಿದೆ.

"ಯೂನೋರೇಕತರಸ್ಮಿನ್ ಗತವತಿ ಲೋಕಾಂತರಂ ಪುನರ್ಲಭ್ಯೇ ।
ವಿಮನಾಯತೇ ಯದೇಕಃ ತದಾಭವೇತ್ ಕರುಣಾವಿಪ್ರಲಂಭಾಖ್ಯಃ" ॥

ಯುವಕರಲ್ಲಿ (ಪ್ರಿಯ) ಒಬ್ಬನು(ಳು) ಲೋಕಾಂತರಕ್ಕೆ ನಡೆದರೂ ಮತ್ತೆ ದೊರೆಯುವಂತಿದ್ದರೆ ಇನ್ನೊಬ್ಬನು (ಳು) ಉಮ್ಮಳಿಸುವಾಗ ಕರುಣ ವಿಪ್ರಲಂಭವಾಗುವುದು. ಕರುಣ ರಸವು ಬಹಳ ಮನಮೋಹಕವಾದ ರಸ. ಇದರ ಅನುಭವದ ಹಂತದಲ್ಲಿ ಹೃದಯವು ಕರಗುವುದರಿಂದ ಭವಭೂತಿ "ಕರಣವೊಂದೇ ರಸ" ಎಂದು ಬಲವಾಗಿ ಪ್ರತಿಪಾದಿಸಿದ್ದಾನೆ.

ರೌದ್ರ ರಸವು ನವರಸದಲ್ಲಿ ಒಂದು ಇದಕ್ಕೆ ಸ್ಥಾಯಿ ಕ್ರೋಧ. ಕ್ರೋಧವು ಕೆಲವರಲ್ಲಿ ಬೇಗ ಉದ್ರೇಕವಾಗುತ್ತದೆ. ಕೆಲವರು ಸ್ವಭಾವತಃ ಕೋಪಶೀಲರಾಗಿರುತ್ತಾರೆ. ಅನ್ಯಾಯವೇನಾದರೂ ಕಂಡು ಬಂದರೆ ವೈರಿಯ ರಕ್ತವನ್ನು ಗಟಗಟ ಕುಡಿಯುವಷ್ಟು ಕೋಪತಾಳುತ್ತಾರೆ. ಮಹಾ ಭಾರತದ ಪ್ರಸಂಗವೊಂದರಲ್ಲಿ ದುಶ್ಯಾಸನನು ದ್ರೌಪದಿಗೆ ವೆಸಗಿದ ಅವಮಾನವನ್ನು ಭೀಮನು ಕಣ್ಣಾರೆ ಕಾಣುತ್ತಾನೆ. ಅಣ್ಣನ ಮಾತನ್ನು ಮೀರಲಾಗದೇ, ಸ್ಥಳದಲ್ಲಿಯೇ ವೈರಿಯ ಮೇಲೆ ಪ್ರತೀಕಾರವನ್ನು

ತಾಳಲಾಗದೇ, ಆತನು ಮಾಡುವ ರಕ್ತವನ್ನು ಕುಡಿಯುವ ಪ್ರತಿಜ್ಞೆಯು ರೌದ್ರರಸವನ್ನು ಪ್ರತಿನಿಧಿಸುತ್ತದೆ.

'ವೀರ ರಸ'ಕ್ಕೆ ಸ್ಥಾಯಿಭಾವ ಉತ್ಸಾಹ, ತ್ಯಾಗ, ಸನ್ಮಾರ್ಗ ಪ್ರವೃತ್ತಿ, ಪರೋಪಕಾರದ ಸಂದರ್ಭದಲ್ಲಿ ಉತ್ಸಾಹವು ಜಾಗೃತವಾಗುತ್ತದೆ. ಭರತನು ದಾನವೀರ, ಧರ್ಮವೀರ, ಯುದ್ಧವೀರ ಎಂದು ವೀರರಸವನ್ನು ಮೂರು ಬಗೆಗಳಲ್ಲಿ ವಿಂಗಡಿಸಿದ್ದಾನೆ". ಪಂಪ ಭಾರತದಲ್ಲಿ ಅರ್ಜುನನು ಯುದ್ಧವೀರನಾಗಿ ಕಂಡರೆ, ಕರ್ಣನು ದಾನವೀರ, ಧರ್ಮರಾಯನು ಧರ್ಮವೀರನಾಗಿ ಕಾಣುತ್ತಾನೆ.[12]

ಭಯವು ಮಾನವನ ಸಹಜ ಪ್ರವೃತ್ತಿಗಳಲ್ಲಿ ಒಂದು. ಹೀಗಾಗಿ ನವರಸಗಳಲ್ಲಿ ಭಯಾನಕ ಒಂದು ಸ್ಥಾನ. ಭಯಾನಕದ ಸ್ಥಾಯಿ ಭಾವ ಭಯ. ಒಂದಲ್ಲ ಒಂದು ಕಾರಣಕ್ಕಾಗಿ ಭಯವು ಮಾನವನನ್ನು ಆವರಿಸುತ್ತದೆ. ಪ್ರಕೃತಿ ಪ್ರಕೋಪಗಳ ನಡುವೆ ಬಾಳುವವರಿಗೆ ಸದಾ ಭಯವೆಂಬುದು ಇದ್ದೇ ಇರುತ್ತದೆ. ಭಯಾನಕದ ಬಗ್ಗೆ ಸಾಳ್ವ ಹೀಗೆ ಹೇಳಿದ್ದಾನೆ...

"ರಿಪುಸರ್ಪ ಪಿಶಾಚಭೂತಾಬಿ ಶೂನ್ಯಗ್ರಹಾರಣ್ಯಗಮನಾದಿ ವ್ಯಾಳ ಮೃಗಾದಿಯಾಲಂಬನ ವಿಭಾವಂ ತದ್ವಿಕೃತಸ್ವರ ಶ್ರವಣ ತದಾಲೋಚನ ಸ್ವಜನವಧ ಬಂಧಾದಿದರ್ಶನ ಶ್ರವಣ ಮುದ್ದೀಪನ ವಿಭಾವಂ"

ಇವೆಲ್ಲವುಗಳಿಂದ ಆಸ್ವಾದ್ಯವಾದ ಭಯವೇ ಭಯಾನಕ ರಸ.

<u>ಬೀಭತ್ಸ</u> : ಕಾವ್ಯದಲ್ಲಿ ಅಲ್ಲಲ್ಲಿ ಮಿಂಚಿ ಕಾಂತಿಯನ್ನು ಹೆಚ್ಚಿಸುವ ರಸ ಬೀಭತ್ಸ. ಇದರ ಸ್ಥಾಯಿಭಾವ ಜುಗುಪ್ಸೆ.

"ಜುಗುಪ್ಸಿತ ಶರೀರದರ್ಶನ ಶ್ರವಣಾದಿ ಆಲಂಬನ ವಿಭಾವಂಃ ಪೂತಿಗಂಧ ಕ್ರಿಮಿಕೀಟಾದಿಯಯುದ್ದೀಪನ ವಿಭಾವಂ ಎಂದು ಸಾಳ್ವ ಹೇಳಿದ್ದಾನೆ."

ಉದ್ವೇಗ ಬಹಳವಾದಾಗ ಅದು ಜುಗುಪ್ಸೆಯಾಗಿ ಪರಿವರ್ತನೆ ಆಗುತ್ತದೆ.

ಇದರಲ್ಲಿ ಜುಗುಪ್ಸಿತ ಬೀಭತ್ಸ ಹಾಗೂ ವಿರಕ್ತಿ ಬೀಭತ್ಸವೆಂಬ ಎರಡು ಬಗೆಗಳುಂಟು.

ಕುಡುಬಿಲ್ಲು ಬಾಗಿದ ಮೆಯ್ಯ
ತೊನ್ನ ಬೆಳ್ಗಲೆವಿಡಿದ ಕರ್ರನೆಯ ಕುಬ್ಜತೆಯ
ಗೂಳಿ ಹಿಣಿಲಿನವೋಲು ಗೂನುವುಬ್ಬಿದ ಬೆನ್ನ........

[12] ಭಾರತೀಯ ಕಾವ್ಯ ಮೀಮಾಂಸೆ, ತೀ.ನಂ.ಶ್ರೀಕಂಠಯ್ಯ. ಪುಟ ೨೯೭

ಕುವೆಂಪು (ರಾಮಾಯಣ ದರ್ಶನ ೧–೫೪೪ ರಿಂದ ೫೫೩ ಸಾಲು) ಇದರಲ್ಲಿ

ಜುಗುಪ್ಸಿತ ಬೀಭತ್ಸದ ಕಲ್ಪನೆಯಿದೆ:

ಪರಿದ ತಲೆ ಬಿಟ್ಟ ಬಾಯ್ ನಸು

ಮುರಿದ ಕೊರಲ್ ಮುಗುಳ್ಳಕಣ್ಣಾಳಾರುಣಜಲದಿಂ" ।

(ರನ್ನ – ಗದಾಯುದ್ಧ ೮–೨೫)

ಇಲ್ಲಿ ವಿರಕ್ತಿ ಬೀಭತ್ಸವಿದೆ.

<u>**ಅದ್ಭುತ**</u> : ಭರತನು ಹೇಳಿದ ಎಂಟು ರಸಗಳಲ್ಲಿ ಕೊನೆಯದು ಅದ್ಭುತ ರಸ. ಇದರ ಸ್ಥಾಯಿ ವಿಸ್ಮಯ ದಿವ್ಯದರ್ಶನೇಪ್ಸಿತ ಮನೋರಂಥಾವಾಪ್ತಿದೇವಕುಲಾದಿಗಮನ ಮುಪವನ ಸಭಾಮಾಯಾ ವಿಮಾನೇಂದ್ರ ಜಾಲಾತಿಶಯ ಚಿತ್ರಕರ್ಮಾದಿಯಾಲಂಬನ ವಿಭಾವಂ: ತ್ವದಭಿನಯಸ್ತೋತ್ರವ್ಯಾವರ್ಣನ ಚಿಂತಾದಿಯುದ್ದೀಪನ ವಿಭಾವಂ ॥ ಎಂದು ಸಾಳ್ವನು ಇದರ ವಿಭಾವ ಮತ್ತು ಅದಕ್ಕೆ ಅನುಗುಣವಾದ ಅನುಭಾವಾದಿಗಳನ್ನು ಹೇಳಿದ್ದಾನೆ. ಮಾನವನು ಜನ್ಮತಃ ಕುತೂಹಲ ಸ್ವಭಾವದವನು ಈ ಕುತೂಹಲವು ವಿಸ್ಮಯವಾಗಿ ಪರಿವರ್ತಿತವಾಗುತ್ತದೆ. ವಿಸ್ಮಯಕ್ಕೆ ಕಾರಣವಾದುದೆಲ್ಲ ಅದ್ಭುತ ರಸದ ವಲಯದಲ್ಲಿ ಇರುತ್ತದೆ. ಕಾವ್ಯ ಎಲ್ಲೆಲ್ಲಿ ಮಹೋನ್ನತಿಯನ್ನು ಪಡೆದಿರುತ್ತದೆಯೋ ಅಲ್ಲೆಲ್ಲ ವಿಸ್ಮಯವು ಕಾಣುತ್ತದೆ.

<u>**ಶಾಂತರಸ**</u> : "ಇದುವರೆಗಿನ ಶೋಧನೆಗಳಿಂದ ಹೇಳುವುದಾದರೆ ಭರತನ ನಾಟ್ಯಶಾಸ್ತ್ರದಲ್ಲಿ ಪ್ರತಿಪಾದಿತವಾಗಿರುವ ರಸಗಳು ಒಟ್ಟು ಎಂಟು ಒಂಬತ್ತನೆಯದಾಗಿ ಶಾಂತರಸವನ್ನು ಹೇಳುವ ಭಾಗವು ಕೆಲವು ಮಾತೃಕೆಗಳಲ್ಲಿ ಕಂಡುಬರುತ್ತದೆ. ಲಾಕ್ಷಣಿಕರು ಇದನ್ನು ಪ್ರಕ್ಷಿಪ್ತವೆಂದೇ ಕರೆಯುತ್ತಾರೆ. ಉದ್ಭಟನು 'ಕಾವ್ಯಾಲಂಕಾರ ಸಾರ ಸಂಗ್ರಹ'ದಲ್ಲಿ ಶಾಂತರಸದ ಉಲ್ಲೇಖವಿದೆ. ರುದ್ರಟನು ಮಾತ್ರ ಶಾಂತರಸವನ್ನು ಉಲ್ಲೇಖಿಸಿದ್ದಲ್ಲದೇ ಅದಕ್ಕೆ ಸ್ಥಾಯಿಯನ್ನು ನಿರೂಪಿಸಿದ್ದಾನೆ. ಅವನ ಪ್ರಕಾರ ಶಾಂತರಸಕ್ಕೆ ಸಮ್ಯಗ್ಜ್ಞಾನವು ಸ್ಥಾಯಿ".

"ಶಾಂತ ರಸವಲ್ಲವೆಂದು ವಾದಿಸುವವರೂ ಇದ್ದಾರೆ. ರಾಗದ್ವೇಷಗಳಿಗೆ ಕಾರಣಗಳಾದ ಅಜ್ಞಾನ ಅವಿದ್ಯೆಗಳು ಬಹುಜನರ ಸಾಮಾನ್ಯ ಮನಃಸ್ಥಿತಿಗೆ ಕಾರಣವಾಗಿ ಅಲ್ಲಿ ಎಂಟು ಸ್ಥಾಯಿಭಾವಗಳನ್ನು ಮಾತ್ರ ಉಂಟು ಮಾಡುತ್ತದೆ. ಇವೆಲ್ಲವುಗಳ ನಿರಸನವೇ ಶಮಂ ಆದ್ದರಿಂದ 'ಶಮ' ಇತರ ಸ್ಥಾಯಿಭಾವಗಳಂತಾಗುವುದಿಲ್ಲ. ಆಸ್ವಾದನೆಗೆ ಶಾಂತರಸವು ಕಷ್ಟಸಾಧ್ಯವಾಗಿದೆ ಎಂದು ಶಾಂತವನ್ನು ವಿರೋಧಿಸುವವರು ಹೇಳುತ್ತಾರೆ.

ಮಹಾಭಾರತದ ಪ್ರಧಾನ ರಸವೇ ಶಾಂತರಸವೆಂದು ಆನಂದ ವರ್ಧನನು ಪ್ರತಿಪಾದಿಸಿದ್ದಾನೆ.[೧೩]

(ಧ್ವನ್ಯಾಲೋಕ ಪು ೧೭೩ - ೮)

ಒಟ್ಟಿನಲ್ಲಿ ನವರಸಗಳಲ್ಲಿ ಶಾಂತರಸವೂ ಸಹ ಪ್ರಧಾನರಸವಾಗಿದೆ.

ಎ. ಶೃಂಗಾರ ರಸ

ಭರತನು ನಾಟ್ಯಶಾಸ್ತ್ರದಲ್ಲಿ ಶೃಂಗಾರ ರಸಕ್ಕೆ ಅಗ್ರಸ್ಥಾನವನ್ನು ನೀಡಿದ್ದಾನೆ. ಶೃಂಗಾರ ರಸಕ್ಕೆ ಸ್ಥಾಯಿ 'ರತಿ' ಗಂಡು-ಹೆಣ್ಣಿನ ಪರಸ್ಪರ ಪ್ರೇಮವೇ ರತಿ. ಪ್ರಾಣಿ ಪಕ್ಷಿಗಳಲ್ಲೂ ಸಹ ಇಂಥಾ ಆಕರ್ಷಣೆ ಇದ್ದೇ ಇದೆ.

ಓದುವವರ ಮನಸ್ಸಿಗೆ ಆನಂದವನ್ನುಂಟು ಮಾಡುವುದೇ ಕಾವ್ಯದ ಮುಖ್ಯ ಉದ್ದೇಶ. "ವಾಕ್ಯಂ ರಸಾತ್ಮಕಂ ಕಾವ್ಯಂ" ಎಂದು ಅಲಂಕಾರಿಕರು ಹೇಳುತ್ತಾರೆ. ಕಾಳಿದಾಸನು 'ಶೃಂಗಾರ ಕವಿ' ಎಂದೇ ಬಿರುದಾಂಕಿತನಾಗಿದ್ದಾನೆ. ಕುಮಾರಸಂಭವ, ಮೇಘದೂತ, ಮಾಲವಿಕಾಗ್ನಿ ಮಿತ್ರ, ಅಭಿಜ್ಞಾನ ಶಾಕುಂತಲಾ ಕೃತಿಗಳಲ್ಲಿ ಶೃಂಗಾರವು ಹಾಸು ಹೊಕ್ಕಾಗಿದೆ. 'ಕುಮಾರ ಸಂಭವ'ದಲ್ಲಿ ಶೃಂಗಾರವು ಒಂದು ಉನ್ನತ ಸ್ಥಾನವನ್ನು ಪಡೆದಿದೆ. ವಿಪ್ರಲಂಭ ಹಾಗೂ ಸಪ್ರಲಂಭ ಶೃಂಗಾರದ ವರ್ಣನೆಯನ್ನು ಮಾಡುವಾಗ ಕವಿ ಕಾಳಿದಾಸನು ಅಪಾರ ಜಾಣ್ಮೆಯನ್ನು ಮೆರೆದಿದ್ದಾನೆ. 'ಮೇಘ ಸಂದೇಶ'ದಲ್ಲಿ ಪ್ರಣಯಿಗಳ ಮನೋವ್ಯಥೆಯು ಹಲವೆಡೆ ಅಸದೃಶ ರೀತಿಯಲ್ಲಿ ಹಾಡಲ್ಪಟ್ಟಿದೆ. ಇವನ ಕಾವ್ಯದುದ್ದಕ್ಕೂ ನಾಯಕ ನಾಯಕಿಯರ ಪ್ರಣಯವು ಎದ್ದು ಕಾಣುತ್ತದೆ. ಶಿವ, ರಾಮ, ಯಕ್ಷ, ಅಜ ಇವರುಗಳೇ ಕಾಳಿದಾಸನ ಕಾವ್ಯಗಳಲ್ಲಿ ಬರುವ ನಾಯಕರು ಪಾರ್ವತಿ, ಸೀತೆ, ಯಕ್ಷಪತ್ನಿ, ಇಂದುಮತಿ ಇವರುಗಳು ನಾಯಕಿಯವರು ನಾಯಕ ನಾಯಕಿಯರು ರೂಪ, ಕುಲ, ವಯಸ್ಸಿನಲ್ಲಿ ಪರಸ್ಪರ ಅನುರೂಪರಾಗಿರುತ್ತಾರೆ.

ಕುಲೇನ ಕಾಂತ್ಯಾವಯಸಾನವೇನ
ಗಣೈಶ್ಚ ತೈಸ್ತೈರ್ವಿನಯ ಪ್ರಧಾನೈಃ ।
ತ್ವ ಮಾತ್ಮನಸ್ತುಲ್ಯಮ ಮುಂವೃಣೀಷ್ವ
ರತ್ನಂ ಸಮಾಗಚ್ಛತು ಕಾಂಚನೇನ ॥ [೧೪]

ವಧುವು ತನಗೆ ಸಮಾನವಾದ ಗುಣಗಳನ್ನುಳ್ಳ ಅನುರೂಪನಾದ ವರನನ್ನ ಮದುವೆಯಾದರೆ ರತ್ನವು ಬಂಗಾರದೊಡನೆ ಸೇರಿ ಶೋಭಿಸಿದಂತಾಗುತ್ತದೆ ಎಂಬುದು ಕಾಳಿದಾಸನ ಅಭಿಪ್ರಾಯ. ಶೃಂಗಾರ ಬೆಳವಣಿಗೆಯ ಹಂತದಲ್ಲಿ ಕಾಳಿದಾಸನು ಅಪೂರ್ವವಾದ ಚಮತ್ಕಾರವನ್ನು ತೋರುತ್ತಾನೆ. ಶಿವ-

---

[13] ತೌಲನಿಕ ಕಾವ್ಯಮೀಮಾಂಸೆ: ಡಾ ॥ ಎಚ್. ತಿಪ್ಪೇರುದ್ರಸ್ವಾಮಿ ಪು. ಸಂ. ೪೦೮-೪೧೯

[14] ಕಾಳಿದಾಸನ ಕಾವ್ಯಗಳು,ಎಸ್. ರಾಮಚಂದ್ರ ರಾವ್. ಪುಟ ೭

ಪಾರ್ವತಿಯರಲ್ಲಿ ಪ್ರೇಮ ಅಂಕುರಿಸಿ ಬೆಳೆಯುವುದು ಪವಿತ್ರ ಮತ್ತು ಶಾಂತವಾದ ಗಿರಿವನ ಪ್ರದೇಶಗಳಲ್ಲಿ ಎಲ್ಲಿಯೂ ಕಾಳಿದಾಸನು ಅನುಚಿತವಾದ ಸನ್ನಿವೇಶಗಳಲ್ಲಿ ಕಲ್ಪಿಸಿಕೊಳ್ಳುವುದಿಲ್ಲ. ನಾಯಕ - ನಾಯಕೆಯರು ಒಬ್ಬರನೊಬ್ಬರು ನೋಡಿದ ಕ್ಷಣವೇ ಇಬ್ಬರಲ್ಲಿಯೂ ಪ್ರಣಯ ಭಾವವು ಅಂಕುರವಾಯಿತೆಂದು ಹೇಳುತ್ತಾನೆ. ಶಕುಂತಲೆಯನ್ನು ಕಂಡೊಡನೆಯೇ ದುಷ್ಯಂತನ ಅಂತಃಕರಣವು ಆಕೆಯನ್ನು ಬಯಸುತ್ತದೆ. ಪುರೂರುವನನ್ನು ನೋಡಿದೊಡನೆ ಊರ್ವಶಿ ಮನಸ್ಸು ಚಲಿಸುತ್ತದೆ. ಪಾರ್ವತಿಯನ್ನು ಕಂಡು ಶಿವನೂ, ಇಂದುಮತಿಯನ್ನು ಕಂಡು ಅಜನು ಪರಸ್ಪರ ಮೋಹಗೊಳ್ಳುತ್ತಾರೆ. ಹಿಮಾಲಯದ ಬಳಿ ನಿಂತಿದ್ದ ಪಾರ್ವತಿಯನ್ನು ನೋಡಿ ಅವಳಿಗೆ ನಾರದನು ಶಿವನ ಅರ್ಧಾಂಗಿಯೇ ಪಾರ್ವತಿ ಎಂದು ತಿಳಿಸಿದನು. ಅಲ್ಲಿಂದ ಪಾರ್ವತಿಯು ಶಿವನೇ ತನ್ನ ಪತಿಯೆಂದು ನಿಶ್ಚಯಿಸಿದಳು. ತನ್ನ ಸಖಿಯಾದ ಸುನಂದೆ ತೋರಿಸಿದ ಅನೇಕ ರಾಜರನ್ನು ಇಂದುಮತಿ ತಿರಸ್ಕರಿಸಿದಳು. ಆದರೆ ಅಜನನ್ನು ನೋಡಿದಾಕ್ಷಣ ತನ್ನ ಪ್ರೇಮ ಪೂರಿತ ದೃಷ್ಟಿಯನ್ನು ಅವರ ಮೇಲೆ ಬೀರಿದಳು. ಪ್ರಣಯಿಗಳ ಮನಸ್ಸಿನಲ್ಲಿ ಶೃಂಗಾರದ ಭಾವದ ಅನಾವರಣವನ್ನು ಕಾಳಿದಾಸನು ಚೆನ್ನಾಗಿ ಮಾಡಿದ್ದಾನೆ :

ತಥಾಗತಾಯಾಂ ಪರಿಹಾಸ ಪೂರ್ವಂ
ಶಖ್ಯಾಂ ಸಖೀ ವೇತ್ರಬೃದಾಬಭಾಷೇ ।
ಆರ್ಯೇವ್ರಜಾಮೋಽನ್ಯತಂ ಇತ್ಯಥೈನಾಂ
ಮಧೂರಸೂಯಾ ಕುಟಿಲಂದದರ್ಶ ॥ (ರಘು ೬-೮೨) [೧೫]

ಇಂದುಮತಿ ಅಜನಲ್ಲಿ ಮೋಹಗೊಂಡಳು. ಇದನ್ನರಿತ ಸಖಿ ಸುನಂದೆ ಪರಿಹಾಸಕ್ಕಾಗಿ "ಸಖಿ, ಬೇರೆಡೆಗೆ ಸಾರುವ" ಎನ್ನಲಾಗಿ ಇಂದುಮತಿ ಸುನಂದೆಯನ್ನು ವಕ್ರವಾದ ದೃಷ್ಟಿಯಿಂ ನೋಡಿದಳಂತೆ. ಯಕ್ಷನು ಪತ್ನಿಯನ್ನು ಅಗಲಿ ಹೋಗುವಾಗ ಅವಳ ಸ್ಥಿತಿ ಚಿಂತಾಜನಕವಾಗುತ್ತದೆ. ಹಿಮದ ಹೊಡೆತಕ್ಕೆ ಸಿಕ್ಕಿದ ಕಮಲದಂತೆ ಆಕೆಯ ಮುಖದ ಛಾಯೆ ಬದಲಾಯಿತು. ಅತ್ತೂ ಅತ್ತೂ ಅವಳ ನೇತ್ರಗಳು ಬಾತು ಹೋದವು. ನಲ್ಲನನ್ನೇ ಸದಾ ದುಃಖಿತ ವದನಳಾಗಿ ಚಿಂತಿಸುತ್ತಿರುವಳು. ಅದನ್ನು ಕಾಳಿದಾಸನು ಹೀಗೆ ವರ್ಣಿಸಿದ್ದಾನೆ;

ಸಾಸಂನ್ಯಸ್ತಾಭರಣಮಬಲಾ ಪೇಶಲಂ ಧಾರಯಂತೀ
ಶಯ್ಯೋತ್ಸಂಗೇ ಸಹಿತ ಮಕಸಕೃದ್ದುಃಖದುಃಖೇನ ಗಾತ್ರಮ್ ।
ತ್ವಾಮಸ್ಯಸ್ರಂ ನವಜಿಲಮಯಂ ಮೋಚಯಿಷ್ಯತ್ಯವಶ್ಯಂ
ಪ್ರಾಯಃ ಸರ್ವೋಽಭವತಿ ಕರುಣಾವೃತ್ತಿ ರಾರ್ದ್ರಾಂರಾತ್ಮಾ ॥ [೧೬]
(ಉ. ಮೇ. ೩೩)

[15] ಕಾಳಿದಾಸನ ಕಾವ್ಯಗಳು,ಎಸ್. ರಾಮಚಂದ್ರ ರಾವ್. ಪುಟ ೭

[16] ಅದೇ ಪುಟ ೯

ಪತಿಯಿಂದ ಅಗಲಿದ ಯಕ್ಷಪತ್ನಿಯ ಶೋಚನಿಯ ಸ್ಥಿತಿಯನ್ನು ನೋಡಿ, ಅಚೇತನ ವಸ್ತುವಾದ ಮೇಘವೂ ಸಹ ಕಣ್ಣೀರಿಟ್ಟಿತಂತೆ ಈ ಸ್ಥಿತಿಗೆ ಬರಲು ಆಕೆಗೆ ಪತಿಯ ಮೇಲಿರುವ ಪ್ರೇಮವೇ ಕಾರಣ.

ಈ ಹಿಂದೆ ಹೇಳಿದಂತೆ ಶೃಂಗಾರದಲ್ಲಿ ಸಪ್ರಲಂಭ (ಸಂಭೋಗ) ಶೃಂಗಾರ ಹಾಗೂ ವಿಪ್ರಲಂಭ ಶೃಂಗಾರವೆಂದು ಎರಡು ಬಗೆ. ಪ್ರಿಯರು ಪರಸ್ಪರ ಸೇರುವಂತಿದ್ದರೆ ಅದು ಸಪ್ರಲಂಭ ಪರಸ್ಪರ ಅಗಲುವಂತಿದ್ದರೆ ಅದು ವಿಪ್ರಲಂಭ ಶೃಂಗಾರ. ಸಪ್ರಲಂಭದಲ್ಲಿಯೂ ಸಹ ಅಗಲುವಿಕೆಯ ಶಂಕೆ ಇದ್ದೇ ಇರುತ್ತದೆ.

ಕಾಣದಿರೆ ಕಾಂಬೊಂದು ಹಂಬಲು,
ಕಂಡರಗಲಿಕೆಯಂಜಿಕೆ:
ಕಾಣದಿರೆ ಸುಖವಿಲ್ಲ ನಿನ್ನನು,
ಕಂಡರೂ ಸುಖವಿಲ್ಲವು ॥ – [೧೭]

ಸಂಭೋಗ ಶೃಂಗಾರದಲ್ಲಿ ಪ್ರಿಯತಮ–ಪ್ರಿಯತಮೆಯ ನಡುವೆ ಗಾಢ ಪ್ರೇಮವಿರುತ್ತದೆ. ಈ ನಡುವೆ ಪರಸ್ಪರ ದೂರವಾಗುವ ಸಂದರ್ಭವೂ ಬಂದುಬಿಡುತ್ತದೆ. ಇಂಥಾ ಸನ್ನಿವೇಶದಲ್ಲಿ ಪ್ರಿಯತಮೆ ತನ್ನ ಕಾಂತನ ಕುರಿತು ಈ ಮೇಲಿನಂತೆ ಹೇಳುತ್ತಾಳೆ.

ಶೃಂಗಾರದ ವರ್ಣನೆಯಲ್ಲಿ ಜಾಗರೂಕವಾಗಿರುವುದು. ಅತ್ಯವಶ್ಯಕ ಹದ ತಪ್ಪಿದ್ದಲ್ಲಿ ಅಪಾಯ ಖಂಡಿತ. ಅಶ್ಲೀಲ ಅಥವಾ ಅಪಹಾಸ್ಯಕ್ಕೆ ಒಳಗಾಗಬೇಕಾದ ಸಂದರ್ಭ ಇಲ್ಲಿ ಪ್ರಾಪ್ತವಾಗುತ್ತದೆ. ಕವಿ ಪದ್ಯವನ್ನು ಹೆಣೆಯುವಾಗ ತೆಗೆದುಕೊಂಡ ಕಾಳಜಿಯನ್ನು ಈ ಪದ್ಯದಲ್ಲಿ ಕಾಣಬಹುದು.

"ಬರಿಯ ಶಯ್ಯಾಗೃಹದ ಸುತ್ತಲೂ ನೋಡಿ, ಮೆ
ಲ್ಲನೆ ಶಯನದಿಂದಿನಿಸು ಮೇಲಕೆದ್ದು . . . .

(ಅಮರುಶತಕ ೮೨ ರ ಅನುಸಾರ)[೧೮]

ಈ ಪದ್ಯದಲ್ಲಿ ಚುಂಬನ ವೃತ್ತಾಂತವಿದೆ. ಆದರೆ ಇಲ್ಲಿ ಅಶ್ಲೀಲತೆ ಇಲ್ಲ. ಸಂಚಾರಿ ಭಾವಗಳಾದ ಶಂಕೆ. ಹರ್ಷ. ನಾಚಿಕೆ ಮೊದಲಾದವು ಬಂದು ಹೃದಯ ಸ್ಪರ್ಶಿಯಾಗಿದೆ.

ಆರಯ ರತಿಯಿಂದಂ ಶೃಂ
ಗಾರಂ ಸ್ತ್ರೀಪುಂಸಯೋಗದಿಂ ತೊಲಗಿಕೆಯಿಂ ।
ಸಾರಂ ಸಂಭೋಗಂ ಶೃಂ
ಗಾರಂ ಸವಿಯೆನಿಪ ವಿಪ್ರಲಂಭ ಸಮಾಖ್ಯಂ ॥

[17] ಭಾರತೀಯ ಕಾವ್ಯ ಮೀಮಾಂಸೆ – ತೀನಂಶ್ರೀ, ಪು. ಸಂ. ೨೯೮.

[18] ಅದೇ

ರತಿ ಭಾವದಿಂದ ಶೃಂಗಾರ : ಸ್ತ್ರೀ ಪುರುಷ ಸಂಯೋಗದಿಂದ ಮತ್ತು ಅಗಲುವಿಕೆಯಿಂದ ಕ್ರಮವಾಗಿ ಸಂಭೋಗ ಮತ್ತು ವಿಪ್ರಲಂಭ ಶೃಂಗಾರಗಳಾಗುತ್ತವೆಂಬುದನ್ನು ಸಾಳ್ವನು ಸೂತ್ರ ೧೪ ರಲ್ಲಿ ಹೇಳಿದ್ದಾನೆ. ಇದರ ವಿಭಾವಾದಿಗಳನ್ನು ಸೂತ್ರ ೧೫ ರಲ್ಲಿ ಹೇಳಿದ್ದಾನೆ:

ಇತರೇತರ ರತಿಯುತದಂ
ಪತಿಗಳೆಯಾಲಂಬನಂ ವಿಭಾವಂ, ಜ್ಯೋತ್ಸ್ನೋ ।
ನ್ನತ ಶಶಿನಂದನ ಗೀತಾ
ದಿ ತತೋದ್ಧೀಪನ ವಿಭಾವಮುಂತಾನಕ್ಕಂ ॥ [೧೯]

ದಂಪತಿಗಳು ಒಬ್ಬರಿಗೆ ಇನ್ನೊಬ್ಬರು ಆಲಂಬನವಿಭಾವವಾಗುತ್ತಾರೆ. ಬೆಳದಿಂಗಳು, ಚಂದ್ರ, ಉದ್ಯಾನ, ಗೀತೆ ಮೊದಲಾದವು ಉದ್ದೀಪನ ವಿಭಾವಗಳಾಗುತ್ತವೆ

ಶೃಂಗಾರದಲ್ಲಿ ಪ್ರಧಾನವಾಗಿ ಎರಡು ಬಗೆಗಳನ್ನು ಗುರುತಿಸಿದ್ದರೂ ಅವುಗಳಲ್ಲಿ ಒಂದೊಂದರಲ್ಲೂ ಅನೇಕ ಛಾಯೆಗಳಿವೆ. ನಲ್ಲನಲ್ಲೆಯರ ಸಮಾಗಮ ಅಂದರೆ 'ಸಂಭೋಗ' ಶೃಂಗಾರದಲ್ಲಿ ಹಲವಾರು ಬಗೆಗಳನ್ನು ಕಾಣಬಹುದು. ಅಗಲುವಿಕೆಯ ವಿರಹದಿಂದ ಕೂಡಿದ ವಿಪ್ರಲಂಭ ಇನ್ನೂ ಹಲವು ಸಾಧ್ಯತೆಗಳನ್ನು ಪಡೆಯುತ್ತದೆ. ರತಿ ಭಾವದ ಉದ್ರಿಕ ಸ್ಥಿತಿಯೇ ರಸವೆಂದು ತಿಳಿಯಬಹುದು. ಶೃಂಗಾರ ಕಾವ್ಯವು ಒಂದು ಮಟ್ಟವನ್ನು ತಲುಪಿ ರತಿಭಾವದಲ್ಲಿ ಪರ್ಯಾವಸಾನವಾಗುತ್ತದೆ.

ಮೊಳೆದೋರ್ಪ ಪುಳಕವಂಗದೊ
ಳೆಳಸುವ ಕರಣಂಗಳುಣ್ಮುವಿನಿವಾತು ಸುಖಂ ।
ದಳೆವ ಬಗೆ ಮೃದು ಹಸಿತಮಂ
ಜುಳವದನಂ ಮೆರೆಯೆ ಸಾರ್ದರೊರ್ವರನೊರ್ವರ್ ॥ [೨೦]

(ರಾಜ ಶೇಖರ ವಿಳಾಸಂ ೪-೧೫)

ರಾಜ ರಾಣಿಯರ ಪರಸ್ಪರ ಸಮಾಗಮಕ್ಕೆ ಇದು ಒಳ್ಳೆಯ ನಿದರ್ಶನವಾಗಿದೆ. ಆಸ್ವಾದನೆಯ ಪ್ರಪಂಚದಲ್ಲಿ ಓದುಗನು ಮುಳುಗಿ ಬಿಡುತ್ತಾನೆ.

೩ ಪ್ರಾಚೀನ ಭಾರತದಲ್ಲಿ ಶೃಂಗಾರದ ಕಲ್ಪನೆ

ಪ್ರಾಚೀನ ಭಾರತದಲ್ಲಿ ಶೃಂಗಾರಕ್ಕೆ ಬಹಳ ಪ್ರಾಮುಖ್ಯತೆಯಿತ್ತು. ಶೃಂಗಾರವೆಂಬ ಪದವೇ ಬಹಳ ಸುಂದರ. ಮನೋಹರ! ಕಾಮ ಎಂಬುದು ಜೀವನಕ್ಕೆ ಅವಶ್ಯಕವಾದ ಸ್ತ್ರೀ ಪುರುಷರ ದೈಹಿಕ ಮಿಲನವನ್ನು ಸೂಚಿಸಿದರೆ, ಪ್ರೇಮ ಎಂಬುದು ಅವರ ಮಾನಸಿಕ ಒಂದಾಗುವಿಕೆಯನ್ನು

---

[19] ತೌಲನಿಕ ಕಾವ್ಯಮೀಮಾಂಸೆ, ಡಾ ॥ ಎಚ್. ತಿಪ್ಪೇರುದ್ರಸ್ವಾಮಿ ಪು. ಸಂ. ೨೯೯

[20] ಭಾರತೀಯ ಕಾವ್ಯ ಮೀಮಾಂಸೆ – ತೀನಂಶ್ರೀ, ಪು. ಸಂ. ೨೯೯.

ಸೂಚಿಸುತ್ತದೆ. ಆದರೆ 'ಶೃಂಗಾರ' ಎಂಬ ಪದವು ಈ ಎರಡನ್ನೂ ಬಹಳ ಕಲಾತ್ಮಕವಾಗಿ ಸೂಚಿಸುತ್ತದೆ ಎಂದು ಹೇಳಬಹುದು. 'ಶೃಂಗಾರ' ಎಂಬ ಪದದ ನಿರ್ವಚನವನ್ನು ಭೋಜರಾಜನು ತನ್ನ 'ಶೃಂಗಾರ ಪ್ರಕಾಶ' ಎಂಬ ಗ್ರಂಥದಲ್ಲಿ 'ಯೇನ ಶೃಂಗಂ ರೀಯತೇ ಗಮ್ಯತೇಸಶೃಂಗಾರಃ ಎಂದು ಬಹು ಸೊಗಸಾಗಿ ಹೇಳಿದ್ದಾನೆ. ಶೃಂಗ ಎಂದರೆ ಜಿಂಕೆಯ ಕೊಂಬು. ಶೃಂಗಾರ ಎಂದರೆ ಸುಖದ ಇಂಥ ಕೊಂಬಿನ ತುತ್ತತುದಿಯನ್ನು ತಲುಪುವುದು ಎಂದು ! ಆದ್ದರಿಂದ ಇದು ಆನಂದದ ಅತ್ಯುನ್ನತ ಭಾವವಾದ ಬ್ರಹ್ಮಾನಂದವೇ! ನಾನು ಎಂಬುದು ನಿತ್ಯವೂ ಶಾಶ್ವತವೂ ಆದ ಆತ್ಮ ವಸ್ತು, ಭೌತಿಕ ದೇಹವಲ್ಲ. ಪರಬ್ರಹ್ಮನ ಅಂಶ ಎಂಬ ಆಧ್ಯಾತ್ಮಿಕ ಭಾವವೇ ! ಆದರೆ ಇದು ಈ ಭೌತಿಕ ಪ್ರಪಂಚದಲ್ಲಿ ಎಲ್ಲರಿಗೂ ಸಿಲುಕದುದರಿಂದ, ಬಹಳ ಸಾಮಾನ್ಯವಾದ ಸ್ತ್ರೀ ಪುರುಷರ ಸಂಗಮದಲ್ಲೇ ಇಂಥ ಅತ್ಯುನ್ನತ ಆನಂದವನ್ನು ಪಡೆಯುವುದಕ್ಕೆ 'ಶೃಂಗಾರ' ಎಂದಿದ್ದಾರೆ. ಪ್ರೇಮಿಯು ತನ್ನ ಪ್ರಿಯತಮೆಯನ್ನು ಅಪ್ಪಿಕೊಂಡಾಗ ಅವನು ಒಳಗೂ ಹೊರಗೂ ಏನನ್ನೂ ಕಾಣದೇ ತನ್ನ ಇರುವನ್ನೂ ಮರೆತು ಒಂದು ಅವರ್ಣನೀಯವಾದ ಆನಂದಾನುಭೂತಿಯನ್ನು ಹೊಂದುತ್ತಾನೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಒಂದು ಸುಂದರ ವಿಚಾರವಿದೆ. ಅಲ್ಲಿ ಹೇಳಿರುವಂತೆ, ಸೃಷ್ಟಿಗೆ ಮೊದಲು ಭಗವಂತನು ಒಬ್ಬನೇ ಇದ್ದನಂತೆ. ಆಗ ಅವನಿಗೆ ರಮಿಸಲಾಗಲಿಲ್ಲ; ಹಾಗಾಗಿ ಭಗವಂತನು ಎರಡನೇಯದೊಂದನ್ನು ಬಯಸಿದನು. ಆಗ ಅವನು ಸ್ತ್ರೀ ಪುರುಷರು ಆಲಂಗಿತರಾಗಿರುವಂಥ ಭಾವವೊಂದನ್ನು ತಾಳಿ ಅಂಥ ಒಂದು ಸಂಯುಕ್ತ ಶರೀರವಾದನು. ಆ ವಿಶೇಷ ಶರೀರವನ್ನು ಎರಡಾಗಿ ಸೀಳಲು ಆ ಎರಡೂ ಭಾವಗಳು ಪತಿ, ಪತ್ನಿಯರಾದರು! ಆದ್ದರಿಂದ ಪುರುಷ ಶರೀರವು ಅರ್ಧ ಬೀಜದಂತೆ ಎಂದು ಯಾಜ್ಞವಲ್ಕ್ಯನು ಹೇಳಿದ್ದಾನೆ. ಆ ಅರ್ಧವು ಸ್ತ್ರೀಯೊಂದಿಗೆ ಬೆರೆಯಿತು. ಆಗ ಮನುಷ್ಯರು ಹುಟ್ಟಿದರು. ಈ ವಿಚಾರವೇ ಪುರಾಣಗಳಲ್ಲಿ ಸ್ವಾಯಂಭುವ ಮನು, ಶತರೂಪೆಯರ ಕಥೆಯಾಗಿ ಬಂದಿದೆ. ಬ್ರಹ್ಮನು ಸೃಷ್ಟಿಯನ್ನು ಆರಂಭಿಸಿದಾಗ ಮೊದಲು ರುದ್ರನನ್ನೂ, ಕುಮಾರರನ್ನು ಒಂಬತ್ತು ಋಷಿಗಳನ್ನೂ ಸೃಷ್ಟಿಸಿದನು. ಆದರೆ ಅವರಿಂದ ಸೃಷ್ಟಿ ಮುಂದುವರೆಯಲಿಲ್ಲ. ಆಗ ಅವನು ಒಂದು ದೇಹವನ್ನು ಸೃಷ್ಟಿಸಿ ಅದನ್ನು ಎರಡಾಗಿಸಿದನು. ಒಂದು ಗಂಡಾಯಿತು. ಅವನೇ ಸ್ವಾಯಂಭುವ ಮನು. ಇನ್ನೊಂದು ಹೆಣ್ಣಾಯಿತು. ಅದೇ ಶತರೂಪೆ ಇವರಿಬ್ಬರ ಸಂಯೋಗದಿಂದ ಸೃಷ್ಟಿ ಮುಂದುವರೆಯಿತು. ಹೀಗೆ ಸ್ತ್ರೀ ಪುರುಷರು ಒಂದೇ ಶಕ್ತಿಯ ಎರಡು ಅಂಗಗಳು ಮತ್ತು ಇವರಿಬ್ಬರ ಸೇರುವಿಕೆಯಿಂದ ಆ ಶಕ್ತಿ ಪರಿಪೂರ್ಣವಾಗುತ್ತದೆ ಎಂಬ ಭಾರತೀಯ ಕಲ್ಪನೆ ಬಹಳ ಸೊಗಸಾಗಿದೆ. ತಾಂತ್ರಿಕ ಸಾಹಿತ್ಯ ಪೂಜೆಗಳಲ್ಲೂ ಸ್ತ್ರೀ ಪುರುಷ ಮೈಥುನವನ್ನು ಶಕ್ತಿ ಮತ್ತು ಶಿವರ ಸಂಗಮ ಎಂದು ಹೇಳಲಾಗಿದೆ.

ವಾತ್ಸಾಯನನ ಕಾಮಸೂತ್ರವು ಅನೇಕ ಶೃಂಗಾರ ಕಾವ್ಯಗಳ ರಚನೆಗೂ, ಕಾವ್ಯ ನಾಟಕಗಳಲ್ಲಿ ಶೃಂಗಾರದ ಅಳವಡಿಕೆಗೂ ಪ್ರೇರಣೆ ನೀಡಿತು. ಅಲ್ಲದೇ ಇದು ಅಂದಿನ ಶೃಂಗಾರ ಜೀವನ, ಶಿಲ್ಪಕಲೆ, ಚಿತ್ರಕಲೆ, ಸಂಗೀತ, ನಾಟ್ಯ ಮೊದಲಾದ ಕಲೆಗಳಲ್ಲಿ ಶೃಂಗಾರಕ್ಕೆ

ಸ್ಫೂರ್ತಿದಾಯಕವಾಯಿತು. ಪ್ರಾಚೀನ ದೇವಾಲಯಗಳಲ್ಲೆಲ್ಲಾ ಸಾಮಾನ್ಯವಾಗಿ ಕಾಮ, ಶೃಂಗಾರಗಳಿಗೆ ಸಂಬಂಧಿಸಿದ ಶಿಲ್ಪಗಳನ್ನು ಕಾಣಬಹುದು. ವಿಶೇಷವಾಗಿ ಕೋನಾರ್ಕ ಸೂರ್ಯದೇವಾಲಯ ಮತ್ತು ಖಜುರಾಹೋ ದೇವಾಲಯಗಳಲ್ಲಿ ಇಂಥ ವೈಭವವಿದೆ. ಬೇಲೂರು, ಹಳೇಬೀಡು, ಬಾದಾಮಿ ಮೊದಲಾದ ದೇವಾಲಯಗಳಲ್ಲಿ ಶಿಲಾಬಾಲಿಕೆಯರ ಶೃಂಗಾರ ಮಿಥುನ ಶಿಲ್ಪಗಳ ಸೌಂದರ್ಯ ಕಣ್ಮನ ಸೂರೆಗೊಳ್ಳುತ್ತದೆ.

ಶೃಂಗಾರ ಕಾವ್ಯದಲ್ಲಿ ಅಷ್ಟವಿಧ ನಾಯಿಕೆಯರು ಪ್ರಸಿದ್ಧ. ಇವರು ಸ್ವಾಧೀನ ಪತಿಕಾ (ಪತಿಯನ್ನು ಸಂಪೂರ್ಣವಾಗಿ ತನ್ನ ಅಧೀನದಲ್ಲಿಟ್ಟುಕೊಂಡಿರುವವಳು) ವಾಸಕಜ್ಜಾ (ಸೊಗಸಾದ ವಸ್ತ್ರಾಭರಣಗಳಿಂದ ತನ್ನನ್ನು ಸಿಂಗರಿಸಿಕೊಂಡು ಅಂತೆಯೇ ಮನೆಯನ್ನು ಸಜ್ಜಾಗಿಟ್ಟುಕೊಂಡು ಪ್ರಿಯತಮನಿಗಾಗಿ ಕಾಯುವವಳು) ವಿರಹೋತ್ಕಂಠಿತಾ (ವಿರಹವಿಹ್ವಲಳು) ಖಂಡಿತಾ (ಪತಿಯ ಮೇಲೆ ಅನ್ಯಸ್ತ್ರೀ ಸಂಭೋಗ ಚಿಹ್ನೆಗಳಿಗೆ ಕೋಪ ತೋರುವವಳು) ಕಲಹಾಂತರಿಕಾ (ಪತಿಯೊಂದಿಗೆ ಜಗಳವಾಡಿ ಅವನಿಂದ ಬೇರೆಯಾಗಿ ಇನ್ನೂ ಕೋಪವಿದ್ದರೂ ಪಶ್ಚಾತ್ತಾಪ ಪಡುವವಳು) ವಿಪ್ರಲಬ್ಧಾ (ಪ್ರಿಯನು ಹೇಳಿರುವ ಸಂಕೇತ ಸ್ಥಳಕ್ಕೆ ತಾನು ಬರದಿದ್ದರೂ ಅವನು ಬರದೇ ಆಶಾಭಂಗಗೊಂಡವಳು) ಪ್ರೋಷಿತ್ವತಿಕಾ (ಪರದೇಶಕ್ಕೆ ಹೋಗಿರುವ ನಾಯಕನ ದುಃಖಿತ ಪತ್ನಿ) ಅಭಿಸಾರಿಕಾ (ಪ್ರಿಯನನ್ನು ಭೇಟಿ ಮಾಡಲು ಸಂಕೇತ ಸ್ಥಳಕ್ಕೆ ಹೋಗುವ ಹೆಣ್ಣು).

ಹೀಗೆ ಈ ವಿವಿಧ ಬಗೆಯ ನಾಯಕ, ನಾಯಿಕೆಯರ ಮೂಲಕ ಸಂಸ್ಕೃತ ಕವಿಗಳು ಶೃಂಗಾರದ ವಿವಿಧ ಮುಖಗಳನ್ನು ಬಹು ಸುಂದರವಾಗಿ ವ್ಯಕ್ತಪಡಿಸಿದ್ದಾರೆ. ಎಲ್ಲ ಕವಿಗಳು ಸಾಮಾನ್ಯವಾಗಿ ಶೃಂಗಾರದಲ್ಲಿ ಎರಡು ವಿಧಗಳನ್ನು ಗುರುತಿಸಿದ್ದಾರೆ. ಅವು ನಾಯಕ ನಾಯಿಕೆಯರು ಒಟ್ಟಿಗಿದ್ದು ಸುಖವನುಭವಿಸುವ ಸಂಭೋಗ ಅಥವಾ ಸಂಯೋಗ ಶೃಂಗಾರ ಮತ್ತು ಅವರು ಬೇರೆಯಾಗಿದ್ದು ದುಃಖ ಅಥವಾ ವಿರಹ ವೇದನೆಯನ್ನು ಅನುಭವಿಸುವ ವಿಪ್ರಲಂಭ ಶೃಂಗಾರ. ಭರತನು ಧರ್ಮಶೃಂಗಾರ (ಪತಿ ಪತ್ನಿಯರ ನಡುವಿನ ಶೃಂಗಾರ) ಅರ್ಥ ಶೃಂಗಾರ (ಹಣ ಪಡೆದು ಶೃಂಗಾರ ಸುಖ ನೀಡುವ ವೇಶ್ಯೆಯರ ಶೃಂಗಾರ) ಮತ್ತು ಕಾಮ ಶೃಂಗಾರ (ಪರಕೀಯ ಸ್ತ್ರೀಯರೊಂದಿಗಿನ ಶೃಂಗಾರ) ಎಂದೂ ಶೃಂಗಾರವನ್ನು ವಿಂಗಡಿಸಿದ್ದಾನೆ.

ಸಂಸ್ಕೃತ ಸಾಹಿತ್ಯದಲ್ಲಿ ಭರ್ತೃಹರಿಯ ಹೆಸರು ಚಿರಸ್ಥಾಯಿಯಾಗಿದೆ. ಅವನ ನೀತಿ ಶತಕ, ಶೃಂಗಾರ ಶತಕ ಮತ್ತು ವೈರಾಗ್ಯ ಶತಕಗಳು ಪ್ರಸಿದ್ಧವಾಗಿವೆ. ಅಮರುಕ ಕವಿಯ ಅಮರುಶತಕ ಕಾವ್ಯವು ಸಹ ಬಹಳ ಸುಂದರವಾಗಿದೆ. ಇಲ್ಲಿಯ ಪದ್ಯಗಳು ಬಹಳ ಸೂಕ್ಷ್ಮವಾಗಿ ಪ್ರೇಮವನ್ನು ವರ್ಣಿಸುತ್ತವೆ. ಪ್ರಾಯಶಃ ಸಂಸ್ಕೃತ ಶೃಂಗಾರ ಮುಕ್ತಕಗಳಲ್ಲೇ ಇದು ಅತ್ಯುತ್ತಮ ಎಂದರೂ ತಪ್ಪಲ್ಲ.

ಬಿಲಣ ಕವಿಯ 'ಚಾರ ಪಂಚಾಶಿಕಾ' ಐವತ್ತು ಪದ್ಯಗಳ ಪುಟ್ಟ ಕೃತಿ. ಇದು ಸಂಸ್ಕೃತದಲ್ಲಿ ಸೊಗಸಾದ ಶೃಂಗಾರ ಕಾವ್ಯ. ಚೋರತನದಲ್ಲಿ ತಾನೇ ರಾಜಕುಮಾರಿಬ್ಬಳೊಂದಿಗೆ ತಾನೇ ನಡೆಸಿದ ಪ್ರೇಮ ಸಲ್ಲಾಪಗಳ, ಪ್ರೇಮ ಕ್ರೀಡೆಗಳ ಸುಂದರ ವರ್ಣನೆಗಳನ್ನು ಹೊಂದಿರುವ ಕಾವ್ಯ ಇದಾಗಿದೆ.

ಮೊಗಲ್ ಚಕ್ರವರ್ತಿ ಷಾಜಹಾನನ ಆಸ್ಥಾನದಲ್ಲಿದ್ದ ಜಗನ್ನಾಥ ಪಂಡಿತನೆಂಬ ಕವಿಯ 'ಭಾಮಿನೀ ವಿಲಾಸ' ಎಂಬ ಕಾವ್ಯದ ಎರಡನೇ ಭಾಗ 'ಶೃಂಗಾರ ವಿಲಾಸ' ಒಂದು ಅದ್ಭುತವಾದ ಶೃಂಗಾರ ಶತಕ. ಸಂಸ್ಕೃತದ 'ಆರ್ಯಾಸಪ್ತಶತೀ' ಇದೂ ಸಹ ಶೃಂಗಾರ ಗ್ರಂಥವಾಗಿದೆ. ಪ್ರಾಚೀನ ಭಾರತದಲ್ಲಿ ಬಹಳ ಶ್ರೀಮಂತ ವಿಲಾಸಮಯ ಶೃಂಗಾರ ಜೀವನವಿತ್ತು. ಪ್ರೇಮಕಲೆಗೆ ವಿಶ್ವದಾದ್ಯಂತ ಭಾರತವೇ ಬುನಾದಿ ಹಾಕಿತೆನ್ನಬಹುದು. ಅಂದಿನಿಂದ ಇಂಥ ಸುಂದರ ಶೃಂಗಾರ ಜೀವನದಲ್ಲಿ ಒಂದು ಹನಿಯನ್ನು ನಾವು ಆಸ್ವಾದಿಸಿ ಅಳವಡಿಸಿಕೊಂಡರೂ ನಾವುಧನ್ಯರಾಗಿ ಬಿಡುತ್ತೇವೆ.[೨೧]

ಸಿ. ನವೋದಯ ಕಾವ್ಯದಲ್ಲಿ ಶೃಂಗಾರ

ಸಂಸ್ಕೃತ ಕಾವ್ಯದಲ್ಲಿ ಶೃಂಗಾರ ಹೇಗೆ ಬಳಕೆಯಾಗಿದೆ? ಎಂಬುದನ್ನು ನಾವೀಗ ಕಂಡಿದ್ದೇವೆ. ಹಳಗನ್ನಡ ಕಾವ್ಯದಲ್ಲಿಯೂ ಶೃಂಗಾರ ರಸವು ಮುಖ್ಯ ಭಾಗವಾಗಿತ್ತೆಂಬುದನ್ನು ಅಷ್ಟಾದಶ ವರ್ಣನೆಗಳಲ್ಲಿ ಕಾಣಬಹುದು. ಮಹಾ ಕಾವ್ಯವನ್ನು ಬರೆಯುವರು ಶೃಂಗಾರ ಒಂದು ವಿಭಿನ್ನ ಶೈಲಿ ಎಂದು ಪರಿಗಣಿಸಿದ್ದರು. ಪಂಪ, ಹರಿಹರ ಮುಂತಾದ ಕವಿಗಳು ಶೃಂಗಾರ ವರ್ಣನೆಯನ್ನು ಸುಂದರವಾಗಿ ಬಿಂಬಿಸಿದ್ದಾರೆ. ಶಾಸ್ತ್ರೀಯ ವಿಧಿ ವಿಧಾನಗಳಲ್ಲಿ ಶೃಂಗಾರದ ಬಳಕೆಯಿತ್ತು. ಕಾಲ ಬದಲಾದಂತೆ ಶೃಂಗಾರ ಕಾವ್ಯವು ಭಾವಗೀತೆಯ ಹಳಿಗೆ ಬಂದಿತು.

ನವೋದಯ ಕಾವ್ಯವು ಬಿ. ಎಂ. ಶ್ರೀಕಂಠಯ್ಯನವರ 'ಇಂಗ್ಲೀಷ್ ಗೀತೆಗಳಿಂದ ಉದ್ಘಾಟನೆಗೊಂಡಿತು. ಆದರೆ ಅದಕ್ಕೂ ಮೊದಲು ಹೊಸಕಾವ್ಯದ ಹೊಳಹನ್ನು ಸೂಚಿಸುವ ಲಕ್ಷಣಗಳು ಕಂಡುಬಂದವು. ಅವುಗಳಲ್ಲಿ ಮುಖ್ಯವಾದವು

"ಮುದ್ದಣನ ರಾಮಾಶ್ವಮೇಧ ಪ್ರಾಚೀನತೆಯ ಮುಸುಕನ್ನು ಧರಿಸಿ ಗತಕಾಲದ್ದೆಂಬ ಭಾವನೆ ತರಿಸುವ ಈ ಕೃತಿ ನಮ್ಮ ಶತಮಾನಕ್ಕೆ ಪೂರಕವಾಗಿಯೇ ಸೃಷ್ಟಿಯಾಗಿದೆ. ತನ್ನ ವಿಮರ್ಶಾ ವಿವೇಕ, ಶೃಂಗಾರ ಧೋರಣೆಗಳಲ್ಲಿ ಅದು ನವೋದಯ ಕಾಲಕ್ಕೇ ಹೊಂದಾಣಿಕೆ ಆಗಿತ್ತು. ಆರಂಭದಿಂದ ಅಂತ್ಯದವರೆಗೆ ಮುಖ್ಯಕಥೆಯ ಒಳಹೊರಗುಗಳನ್ನೆಲ್ಲ ಹಾಯುತ್ತ ಮಧುರವಾಗಿ ಹಬ್ಬುವ ಮುದ್ದಣ ಮನೋರಮೆಯರ ಸರಸ ಸಲ್ಲಾಪ ಹಳಗನ್ನಡ ಕಾವ್ಯಗಳ ಶೃಂಗಾರ

---

[21] ಕನ್ನಡ ಪ್ರಭ, ಸಾಪ್ತಾಹಿಕ ಪ್ರಭ, ದಿನಾಂಕ : ೧೩ ಪೆಬ್ರವರಿ ೨೦೧೧

ವರ್ಣನೆಗಿಂತ ಸ್ಪಷ್ಟವಾಗಿ ಬೇರೆಯಾಯಿತು. ಆ ದಂಪತಿಗಳ ಪ್ರೀತಿಯ ಸಲ್ಲಾಪ. ನಿರ್ಮಲ ಹಾಸ್ಯ, ಸಲಿಗೆಯ ಛೇಡಿಕೆ ಇದೆಲ್ಲ ಆಧುನಿಕ ಓದುಗನನ್ನು ನಿಮಿಷಾರ್ಧದಲ್ಲಿ ಮೋಡಿ ಮಾಡಿದವು. ತನ್ನ ದಾಂಪತ್ಯ ಜೀವನ ಈ ಬಗೆಯಾದಾಗ ಬೇಕು ಎಂದು ಗಂಡು ಹೆಣ್ಣುಗಳಲ್ಲಿ ಕೂಡಿಯೇ ಬಯಕೆ ಹುಟ್ಟಿಸುವಂಥ ಜೀವನೋಲ್ಲಾಸವನ್ನು ಇದು ಪ್ರಚೋದಿಸಿತು. ಇದಕ್ಕೆ ಕಾರಣ ಇಷ್ಟೇ ಆ ದಾಂಪತ್ಯದ ಮೂಲಕ ಪ್ರತೀತವಾಗುವ ಶೃಂಗಾರದ ಕಲ್ಪನೆ ಯಾವುದೋ ಕಾಲದ್ದಲ್ಲ. ಹೊಸಕಾಲದ ಕನಸುಗಳಿಂದ ಹುಟ್ಟಿ, ಹೊಸಕಾಲದ ಕನಸುಗಳನ್ನು ಕಟ್ಟಿತು. ಮನೋರಮೆಯು ಗಂಡನೊಡನಾಡುವ ತುಂಟ ತನಗೆ ತಾನೇ ಒಪ್ಪಿಕೊಂಡ ಸ್ವಾತಂತ್ರ್ಯದಿಂದ ಮೂಡಿತ್ತು. ಹಾಗೆ ನೋಡಿದರೆ ಗಂಡನೊಡನೆ ಸಮಾನತೆಯ ಸಲಿಗೆಯಲ್ಲಿ ನಲಿದ ನವೋದಯ ಕಾಲದ ಮೊದಲ ಹೆಣ್ಣು ಮನೋರಮೆ, ನಮ್ಮ ನವೋದಯ ಕವಿಗಳಿಗೆ ತಮ್ಮ ಪ್ರಾಯದ ದಿನಗಳಲ್ಲಿ ಬಿದ್ದ ಕನಸೆಲ್ಲ ಮನೋರಮೆಯದೇ ಎಂದರೆ ತಪ್ಪಾಗಲಾರದು! ಕನಸಿನ ಲೋಕದಲ್ಲಿ ಮನೋರಮೆಯಂಥಾ ಹೆಣ್ಣನ್ನು ಕಲ್ಪಿಸಿಕೊಳ್ಳುವಷ್ಟು ಆಕೆ ಜನಪ್ರಿಯಳಾದಳು.

ನವೋದಯ ಕಾವ್ಯದಲ್ಲಿ ಹೊಸ ರೂಪ ಪಡೆದ ಶೃಂಗಾರವು ವಿವಾಹ ಪೂರ್ವದ ಪ್ರಣಯ ಗೀತ, ವಿರಹಗೀತ, ಮತ್ತು ದಾಂಪತ್ಯ ವಿಧಿಯಿಂದ ಮನ್ನಣೆಗೊಂಡ ಪ್ರೇಮಗೀತ ಎಲ್ಲವನ್ನೂ ಒಳಗೊಳ್ಳುತ್ತದೆ. ಆಧ್ಯಾತ್ಮಿಕಾನುಭವವನ್ನು ಸಂಕೇತದ ಮೂಲಕ ನುಡಿಸುವ ಪರಾಪ್ರೇಮದ ಮಧುರಗೀತೆಗಳೂ ಅಲ್ಲಿ ಸಿಗುತ್ತವೆ. ಇಂಥ ಭಾವಗೀತೆಗಳ ಜೊತೆಗೆ ಪ್ರಾಚೀನಕಾವ್ಯ ಪುರಾಣಗಳ ವಸ್ತುಗಳನ್ನಾಧರಿಸಿ ಸೃಷ್ಟಿಯಾದ ನೀಳ್ಗವಿತೆ, ಖಂಡಕಾವ್ಯ ಮತ್ತು ಗೀತ ಕವ್ಯಗಳಲ್ಲಿಯೂ ಸೊಗಸಾದ ಶೃಂಗಾರದ ಸಂದರ್ಭಗಳು ಚಿತ್ರಿತವಾಗಿವೆ. ಕುವೆಂಪು ಅವರ ಚಿತ್ರಾಂಗದಾ ಕಡೇಂಗೊಡ್ಲು ಶಂಕರ ಭಟ್ಟರ 'ಮಾದ್ರಿಯ ಚಿತೆ', ಪು.ತಿ.ನ. ಅವರ 'ಗೋಕುಲ ನಿರ್ಗಮನ' ಮತ್ತು 'ಅಹಲ್ಯೆ' ಎಕ್ಕುಂಡಿಯವರ 'ಮಹಾಶ್ವೇತೆ' ಮೊದಲಾದವು ಇಂಥ ಕೃತಿಗಳು.

ಜಾನಪದ ಭಾಷೆಯ ಸತ್ವವನ್ನು ರೂಢಿಸಿಕೊಂಡು ಜೊತೆಗೇ ಕನ್ನಡ ಕಾವ್ಯ ಪರಂಪರೆಯ ಸಾರವನ್ನು ಅರಗಿಸಿಕೊಂಡು ಅಪೂರ್ವವೆನ್ನಿಸುವ ಕೆಲವು ಪ್ರಣಯಗೀತೆಗಳನ್ನು ಸೃಷ್ಟಿಸಿದವರು ಬೇಂದ್ರೆ. ಕಾಮಕಸ್ತೂರಿಯ ಪ್ರಣಯಗೀತೆಗಳು. ಹುಬ್ಬಳ್ಳಿಯಾಂವಾ ಎಲ್ಲಿರುವೆ ರಾಜ ಗಂಭೀರಾ. ಕಲ್ಪವೃಕ್ಷ ವೃಂದಾವನಂಗಳಲಿ, ಗಮುಗಮಾ ಗಮಾಡಸತವ ಮಲ್ಲಿಗಿ, ನಾನು ಬಡವಿ ಮೊದಲಾದವು ಧ್ವನಿದಟ್ಟವಾದ ಶೃಂಗಾರ ಕವಿತೆಗಳು. ಈ ಕವಿತೆಗಳನ್ನು ಓದುವಾಗ ಗಮನಿಸಬೇಕಾದ ಅಂಶವೆಂದರೆ ಮಾತಿನ ಅರ್ಥದ ಮತ್ತೊಂದು ಮಗ್ಗುಲನ್ನು ಬೆಳೆಸಿಕೊಳ್ಳುವ ಸಲುವಾಗಿ ಕವಿ ಜನಪದ ಭಾಷೆಯನ್ನು ಬಳಸುವುದು. ಜನಪದ ಭಾಷೆಯನ್ನು ನಾಗರಿಕ ಜೀವನದ ಸಂದರ್ಭಕ್ಕೆ ಹಚ್ಚುವುದರಿಂದ ಮಾತಿನ ಸಹಜಾರ್ಥ ಮತ್ತು ಹೊಸ ಸಂದರ್ಭವು ಅದರಿಂದ ಹೊರಡಿಸುವ ಅರ್ಥ ಎರಡನ್ನೂ ಹೀರಿ ಕವಿತೆ ಫಲಪ್ರದವಾಗಿ ಬೆಳೆಯುತ್ತದೆ. ನಿಶ್ಚಿತಾರ್ಥದ ನೇರದಾರಿಯಲ್ಲಿ ಹೊರಟ

ಭಾಷೆಯು ಕವಿತೆಯ ಸಂದರ್ಭ ಕಲ್ಪಿಸಿಕೊಡುವ ಭಿನ್ನಾರ್ಥದ ಕಾಲು ಹಾದಿಗಳಲ್ಲೆಲ್ಲ ಅಲೆಯುತ್ತ ಧ್ವನ್ಯರ್ಥದ ಕಣ್ಣುಮುಚ್ಚಾಲೆಗೆ ಇಂಬು ಕೊಡುತ್ತದೆ. ಎಲ್ಲರ ಬದುಕಿನಲ್ಲಿ ಇದ್ದೂ ಯಾರೂ ಹೇಳಿಕೊಳ್ಳಲು ಬಯಸಿದ ಪ್ರಣಯಾನುಭವದ ಸೂಕ್ಷ್ಮಗಳು ಸಂತೆಯಲ್ಲಿ ಸಹ ಸಾರಬಹುದಾದ ದಿಟ್ಟ ಶಬ್ದಗಳ ಬುಡಕ್ಕೇ ಟಿಸಿಲೊಡೆಯುತ್ತ ಹೋಗುವುದು, ಬೇಂದ್ರೆ ಪ್ರಣಯಗೀತೆಗಳ ಲಕ್ಷಣ. ಇದರ ಜೊತೆಗೆ ಅಲ್ಲಲ್ಲಿ ಥಳಥಳಿಸುವ ರೂಪಕಗಳು ಮೂಡಿ ಮಾತನ್ನು ಅದರ ನಿರ್ದಿಷ್ಟಾರ್ಥದ ಗಡಿಯಾಚೆಗೆ ಹಾರಿಸಿಬಿಡುತ್ತದೆ. 'ಮುಂಗಾರಿ ಕಣ ಸನ್ನಿಹಾಂಗ ನಿನ್ನ ನಗೆ ಚೆನ್ನಿ' 'ಕಣ್ಣೆವಿ ತೆರೆದರೆ ಹುಣ್ಣಿವಿ ತೆರದಾಂಗ' 'ಪಾರಿಜಾತಗಳು ಮುದ್ದುಗರೆಯುವವು ಹವಳದುಟಿಗಳಿಂದ' ಎಂಬ ಕಲ್ಪನೆಗಳಲ್ಲಿ ಮನುಷ್ಯ ಚರ್ಯೆಯನ್ನು ಪ್ರಕೃತಿಯ ಬೆಂಗಡೆಯಿಂದ ನೋಡಿ ಚಿತ್ರಕ್ಕೆ ಮೂಡಿಸುವ ಭವ್ಯತೆ; ಹಾಸಿಗಿ ಮಗಮಗ ಮಂಚಕ ಝುಗಝುಗ ನನ್ನ ಎದಿ ಮಾತ್ರ ಧಗದಗ ಎಂಬಲ್ಲಿನ ಭಾವೋತ್ಕಟತೆ. 'ನೆರಳಲ್ಲಾಡತಾದ ಮರದ ಬುಡಕ ಕೆರೆತೆರಿ ನೂಗತಾವ ದಡಕ' ಎಂಬಲ್ಲಿನ ಮಾತಿನ ಕಲೆಗಾರಿಕೆ ಬೇಂದ್ರೆಯವರ ಕವನಗಳಲ್ಲಿ ವಿಶೇಷವಾಗಿ ಹೊರಹೊಮ್ಮಿದೆ. 'ಒಲವನ್ನೇ ಬದುಕಿನ ಸರ್ವಸ್ವವಾಗಿ ಕಂಡು, ಬಳಸಿಕೊಂಡವದನೆ ನಾವು ಅದಕು ಇದಕು ಎದಕು ಎಂದು ಹೇಳಬಲ್ಲವನಿಗೆ ಮಾತ್ರ ಸಾಧ್ಯವಾಗುವ ಮಧುರ ಭಾವದ ದರ್ಶನ ಬೇಂದ್ರೆಯವರ ಪ್ರಣಯಗೀತೆಗಳಲ್ಲಿ ಅರಳಿದೆ.

ಪ್ರಣಯಗೀತೆಗಳ ಜೊತೆಗೆ ತಮ್ಮ ದೀರ್ಘ ಕಾವ್ಯಗಳಲ್ಲಿಯೂ ಉತ್ಕಟ ಶೃಂಗಾರದ ಚಿತ್ರಗಳನ್ನು ನೀಡಿದ ಮತ್ತೊಬ್ಬ ಹಿರಿಯ ಕವಿ ಕುವೆಂಪು. ಷೋಡಶಿ, ಪ್ರೇಮ ಕಾಶ್ಮೀರ, ಚಂದ್ರ ಮಂಚಕೆ ಬಾ ಚಕೋರಿ – ಇವು ಹೆಸರಿನಿಂದಲೇ ಕೃತಿಯ ಗುರಿಯನ್ನು ಸೂಚಿಸುತ್ತವೆ. ನಾಚೆ ನಾನಿನ್ನು, ನಾನಿನ್ನು ಮರೆಯೆ, ಅಭಿಸಾರಿಕೆ, ರಸಿಕರ್ಷಿ ಇವು ಅವುಗಳಲ್ಲಿನ ಕೆಲವು ಸೊಗಸಾದ ಪ್ರಣಯಗೀತೆಗಳು ತನ್ನವನನ್ನು ಕೂಡಲಿಲ್ಲವೆಂಬ ಕಾತರ, ಕಂಡೇನೆ ಎಂಬ ಆತುರ, ಅವನನ್ನು ಒಲಿಸಿಕೊಳ್ಳಲು ಪರಿಪರಿಯಾಗಿ ಸಿಂಗರಿಸಿಕೊಳ್ಳುವ ಸಡಗರ, ಹೀಗೆ ಬರೆಗೆಯ ಸಂಚಾರಿ ಭಾವಗಳ ಮೆಟ್ಟಿಲೇರುತ್ತ ರತಿಸ್ಥಾಯಿಯನ್ನು ನಮ್ಮ ಅರಿವಿಲ್ಲದೆಯೇ ಜಾಗರಿಸುತ್ತ ಶೃಂಗಾರರಸದ ಗುರಿ ಮುಟ್ಟುವ ಈ ಕವಿತೆಗಳು ಕನ್ನಡದ ಶ್ರೇಷ್ಠ ಪ್ರಣಯಗೀತೆಗಳ ಸಾಲಿಗೆ ಸೇರುತ್ತವೆ. ಸೀತಾರಾಮರು ಅರಣ್ಯವಾಸಿಗಳಾಗಿದ್ದಾಗ ಕೊಳವೊಂದರಲ್ಲಿ ನೀರಾಟವಾಡುತ್ತ ಒಟ್ಟಿಗೆ ಮೀಯುವ ಮನೋಹರ ಚಿತ್ರವೊಂದು ರಾಮಾಯಣ ದರ್ಶನದಲ್ಲಿ ಬರುತ್ತದೆ. ಅವರ ಚಿತ್ರಾಂಗದಾ ಕಾವ್ಯದಲ್ಲಿ ಇದಕ್ಕಿಂತ ಭಿನ್ನವಾದ ಪ್ರಣಯೋನ್ಮಾದದ ಚಿತ್ರಗಳು ಅಧ್ಬುತವಾಗಿ ಸೃಷ್ಟಿಯಾಗಿವೆ. ಅರ್ಜುನನಿಂದ ತಿರಸ್ಕೃತಳಾದ ಚಿತ್ರಾಂಗದೆ ಮನ್ಮಥ ಮಾಯೆಯನ್ನು ಹೊದ್ದು ಕತ್ತಲ ಕಾನನದಿಂದ ಜಿಗಿತ ಉರಿಯಂತೆ ಅವನೆದುರು ಸುಳಿದಾಗ ಅರ್ಜುನನ ವೀರವ್ರತದ ಉಸಿರೇ ಅಡಗಿ ಹೋಗುತ್ತದೆ. ಕಾಮಿನಿಯೆದುರು ಮೊಣಕಾಲೂರಿ: "ನಿನ್ನೆದೆಯ ಬಾಗಿಲಗೆ ತಿರುಪೆಗಾಗಿಯೆ ಬಂದೆ. ನೀನೆ ಶಾಶ್ವತ ಸತ್ಯ. ನನ್ನ ಜೀವನ ಪರಮ ಪುರುಷಾರ್ಥರೂಪಿಣಿ. ಭುವನೈಕ ಮೋಹಿನಿ. ನಿನ್ನ ಸಂಗವೆ ಪರಮ ಮಂಗಲಂ" ಎಂದು ಕಾಮವನ್ನೇ ಪರಮ ಪುರುಷಾರ್ಥವಾಗಿ ವರ್ಣಿಸುವ ಪಾರ್ಥನ ಚಿತ್ರದಲ್ಲಿ ಕವಿ

ಅವನ ಉತ್ಕಟ ಪ್ರಣಯಾವೇಶವನ್ನು ಬಣ್ಣಿಸುತ್ತಲೇ ಮೂರು ಲೋಕದ ವೀರರಲ್ಲಿಯೂ ಅದು ಮೂಡಿಸುವ ದೈನ್ಯವನ್ನು ಧ್ವನಿಸುತ್ತಾರೆ".

ಪೌರಾಣಿಕ ವಸ್ತುವನ್ನೇ ಆಧರಿಸಿ ರಚಿಸಿದ ಪು. ತಿ. ನ. ಅವರ ನಾಟಕ ರೂಪದ ಕಾವ್ಯವಾದ ಅಹಲ್ಯೆಯಲ್ಲಿ ಶೃಂಗಾರ ಎಲ್ಲಿಯೂ ಸೊರಗದೆ ಅದ್ಭುತವಾಗಿ ಹರಿದು ರಸಪ್ರಾಂತ್ಯದ ಗಡಿಯನ್ನೇ ತಲುಪುತ್ತದೆ. ತಮ್ಮಿಂದ ಪೂಜೆಗೊಂಡು ತಮ್ಮೆಲ್ಲರ ಆಸೆಗಳನ್ನು ಸಲ್ಲಿಸುವ ಇಂದ್ರನೇ ತನ್ನ ಸೌಂದರ್ಯಕ್ಕೆ ಮರುಳಾಗಿದ್ದಾನೆ ಎಂಬ ಸಂಗತಿ ಪ್ರೇಮ ಕಾತರಳಾಗಿದ್ದ ಅಹಲ್ಯೆಯ ಮನಸ್ಸನ್ನು ಅವಳ ಅರಿವಿಲ್ಲದೆಯೇ ಹಿಂಡುತ್ತದೆ. ಅಂಥ ಹೊತ್ತಿನಲ್ಲೂ ಎದುರು ನಿಂತ ಇಂದ್ರನನ್ನು ಅವಳು ಹೇಗೋ ನಿರಾಕರಿಸುತ್ತಾಳೆ.

ಕಳೆದುಕೊಂಡ ಪ್ರೇಮದ ಮೂಲಸೆಲೆಗೆ ಸದಾ ಕಾತರಿಸುತ್ತಾ, ಕನವರಿಕೆಯಲ್ಲೇ ಬದುಕನ್ನು ತಳ್ಳುತ್ತಾ ಆ ಮಿಡುಕಾಟದಲ್ಲಿ ಬಾಳೆಲ್ಲ ಕಾಳರಾತ್ರಿಯಾಗುವ ಅನುಭವ ಭಕ್ತನದು. ಮಧುರಚೆನ್ನರು "ನನ್ನನಲ್ಲ" ಎಂಬ ಕವಿತೆಯಲ್ಲಿ ಇಂಥ ಅನುಭವವನ್ನು ಸಮರ್ಥವಾಗಿ ನಿವೇದಿಸುತ್ತಾರೆ. ಹತ್ತೂ ನಿಟ್ಟಿಗೆ ಹೊತ್ತಿಸಿ ಉರಿಯನು ನಿತ್ತೆನು ನಾ ಕಿತ್ತಡಿಯಾಗಿ! "ಹತ್ತೂ ನಿಟ್ಟಿಗೆ ಹೊತ್ತಿಸಿ ಉರಿಯನು ಕುತ್ತೆನು ನಾ ಮಾಸತಿಯಾಗಿ" (ನೋಂಪಿ ಕವಿತೆಯ) ಸಾಲುಗಳು ಈ ಅನುಭವದ ತೀವ್ರತೆ ಎಂಥದೆನ್ನುವುದನ್ನು ತೋರಿಸಿಕೊಡುತ್ತದೆ.

ರಾಧಾಕೃಷ್ಣರ ಪ್ರೇಮ ಕಥೆಯನ್ನು ಪ್ರತಿಮೆಯಾಗಿ ಬಳಸಿ ಕುವೆಂಪು. ಬೇಂದ್ರೆ. ಪು.ತಿ.ನ. ಮೂವರೂ ಪ್ರಣಯಗೀತೆಗಳನ್ನು ರಚಿಸಿದ್ದಾರೆ. ಬೇಂದ್ರೆಯವರ 'ಕೊಳಲನುದಿದನೇನ ಕೃಷ್ಣ' ಕುವೆಂಪು ಅವರ 'ಬಾರೆ ಸಖಿ' 'ಬೃಂದಾವನ' ಕುಣಿಯುವಂತೆ ಮತ್ತಶಿಖಿ' ಮತ್ತು ಪು.ತಿ.ನ ರವರ 'ಗೋಕುಲ ನಿರ್ಗಮನ'ದ ಹಲವು ಗೀತೆಗಳು ಪ್ರಣಯಾನುಭವದ ವಿವರಗಳ ಮೂಲಕ ಮೈ ಕಟ್ಟಿಕೊಂಡು ಪರಾಪ್ರೇಮವನ್ನು ಧ್ವನಿಸುವ ಗೀತೆಗಳು. ಕೃಷ್ಣನಲ್ಲ ಗೋಪಿನಲ್ಲೆ, ಆ ನಲ್ಲನ ಕೊಳಲದನಿ ಕಿವಿಸೋಕುತ್ತಲೇ ಪಕ್ಕದ ಗಂಡನನ್ನು ತೊರೆದು, ತೊಟ್ಟಿಲ ಹಸುಗೂಸನ್ನು ಮರೆತು ಮೋಡಿಗೊಳಗಾದವಳಂತೆ ಅವನ ಕಡೆ ಹರಿಯುವ ಗೋಪಿ ಜೀವದ ಮಧುರೋನ್ಮಾದ ಈ ಕವಿತೆಗಳ ವಸ್ತು.

ಕನ್ನಡ ರಸಿಕರ ಮನಸ್ಸನ್ನು ಸೂರೆಗೊಂಡ ಇನ್ನೊಂದು ನಿಡಿದಾದ ಪ್ರಣಯಗೀತೆ ಶಂಕರಭಟ್ಟರ 'ಮಾದ್ರಿಯ ಚಿತೆ'. ತನ್ನ ಪ್ರಿಯನ ಸಮಾಗಮವೇ ಅವನ ಮೃತ್ಯುವಾಗುವ ಪರಿಸ್ಥಿತಿಯಲ್ಲಿ ಬಾಳುತ್ತಿರುವ ಪ್ರಾಯದ ಹೆಣ್ಣೊಂದರ ಪ್ರೇಮದ ಹಂಬಲವನ್ನು ಕವಿ ಇದರಲ್ಲಿ ಮನಕರಗುವಂತೆ ಬಣ್ಣಿಸಿದ್ದಾರೆ. 'ಸುಗ್ಗಿಯರಲುಕುಣಿದು ಬನದಿ ಚಿಗುರುದುಟಿಯ ನಕ್ಕ ದಿನದಿ ವಿಶ್ವವೇ ವಸಂತನಡಿಯ ಹಾಸಿನಂತೆ ಕಾಣುತ್ತದೆ. ಮಾದ್ರಿಗೆ ವಿರಹದ ಕಿಚ್ಚಿನಿಂದ ಬಿರುಸಾದ ಮನಸ್ಸು

'ಒಡಲು ಸಾವಿನ ಮೇವ ಹೊಲವಾದರೇನು? ಬಂದು ಮೇಯುವ ಮೃತ್ಯು ಆನಂದದಿದಲಿ ಬಂದು ತಿಂದು ತೇಗಲಿ' ಎಂಬ ನಿಲುವಿಗೆ ಬಂದು ಬಿಡುತ್ತದೆ.

ಪ್ರೇಮದ ಬಿಡಿ ಕವಿತೆಗಳ ಒಂದು ಇಡಿಯ ಸಂಕಲನವನ್ನೇ ಮೊದಲು ಹೊರತಂದ ಕೀರ್ತಿ ತೀ.ನಂ.ಶ್ರೀಕಂಠಯ್ಯನವರದು. ಐವತ್ತು ವರ್ಷಗಳಷ್ಟು ಹಿಂದೆಯೇ ಪ್ರಕಟವಾದ ಅವರ 'ಒಲುಮೆ' ಪ್ರೇಮದ ಬಗೆ ಬಗೆ ಅನುಭವಗಳ ಅಚ್ಚುಕಟ್ಟಾದ ಅಭಿವ್ಯಕ್ತಿಯನ್ನು ಸಾಧಿಸಿತು. ಈ ಸಂಕಲನದ ಏಕೆ, ಪಶ್ಚಾತ್ತಾಪ, ಒಲವೋ ಹಗೆಯೋ, ಅಗಲಿಕೆ ಮೊದಲಾದವು ಇಷ್ಟು ಕಾಲದ ಮೇಲೂ ನಮ್ಮನ್ನು ಸೆಳೆಯುತ್ತದೆ. ಸಂಸ್ಕೃತ, ಇಂಗ್ಲೀಷ್ ಕಾವ್ಯಗಳ ಆಳ ಅಧ್ಯಯನದಿಂದ ಸಂಸ್ಕಾರಗೊಂಡ ಮನಸ್ಸು ಸೃಷ್ಟಿಸಿದ ಕವಿತೆಗಳು ಇವು.

ದಲಿತವರ್ಗದ ಬಾಳಿನ ಸ್ವರೂಪದ ಬಗ್ಗೆ ಸಹಾನುಭೂತಿ ಮತ್ತು ಆ ವರ್ಗದ ಆಡುಮಾತಿನ ತಳಸ್ಪರ್ಶಿಯಾದ ಪರಿಚಯ ಇವುಗಳು ಫಲವಾಗಿ ಸೃಷ್ಟಿಯಾದ ರತ್ನನ ಪದಗಳು ಕನ್ನಡ ಕಾವ್ಯಕ್ಕೆ ಹೊಸ ಬಣ್ಣ ಗಂಧಗಳನ್ನು ತಂದುಕೊಟ್ಟವು. ರತ್ನ ಬಳಸುವ ಉಪಮೇ ರೂಪಕಗಳ ಸರಳತೆ ಗ್ರಾಮ್ಯತೆಗಳು ಕಸುವು ತುಂಬಿದ ಭಾಷೆಯ ಬಲದಲ್ಲಿ ಅಪೂರ್ವ ಕಾಂತಿಯಿಂದ ಮಿಂಚಿ ಆ ಪದಗಳೇ ಜನಪ್ರತಿಯವಾದವು. ರತ್ನನ ಪದಗಳಲ್ಲಿ ಮತ್ತು ಅದೇ ದೃಷ್ಟಿಗೆ ಮೂಡಿದ ನಾಗನ ಪದಗಳಲ್ಲಿ ಹಲವು ಶ್ರೇಷ್ಠ ಪ್ರೇಮಗೀತೆಗಳವೆ. ತನ್ನ ನಂಜಿ ತನಗೆ ಎಷ್ಟು ಪ್ರಿಯ ಎನ್ನಲು ರತ್ನ ಬಳಸುವ ಹೋಲಿಕೆಗಳು ಬೆರಗುಗೊಳಿಸುವಷ್ಟು ಸುಂದರವಾಗಿವೆ.

ಆಲ್ನಲ್ ಕಮಲದ ವೂ ತೇಲ್ಬುಟ್ಟಿ ।
ಮೇಲ್ ಒಂದ್ ತೆಳ್ನೆ ಲೇಪ ।
ಚಿನ್ನದ್ ನೀರಲ್ ಕೊಟ್ಟಂಗೈತೆ ।
ನನ್ ಪುಟ್ನಂಜಿ ರೂಪ ॥ ಎನ್ನುವ ರತ್ನ ಈ ರೂಪಕಷ್ಟೇ ಬೆರಗಾದವನಲ್ಲ.

ಇಡೀ ದಿನಾ ಯಿಟ್ಟೇ ಇಲ್ದೆ ।
ಸಾಯ್ತಿದ್ರೂನೆ ನೆಗತ ಸೋಲ್ದೆ ।
ಬದಕೋದ್ ತಿನ್ನಾಕ್ ಅಲ್ಲಾಂತ ॥

ಅಂದ ಗರತಿ ಅವಳು ಪ್ರೇಮದ ಅಸ್ತಿವಾರವನ್ನು ಎಂಥ ನಿಷ್ಠೆಯ ಮೇಲೆ ಕಟ್ಟಿದ್ದೇವೆ, ನೋಡು ಎಂದು ರತ್ನ, ನಾಗ ಎಬ್ಬರೂ ತೋರಿಸಿ ಕೊಡುತ್ತಾರೆ. ಪ್ರಾಯದಲ್ಲಿ ತಾವು ಆಡಿದ ಆಟವನ್ನು ವಯಸ್ಸಾದ ಮೇಲೂ ಮಲ್ಲಿಯ ಮುಂದೆ ನೆನಪಿಸುತ್ತಾ, ಅವಳು ಹುಸಿಮುನಿಸಿನಿಂದ ಜಗುಟಿದರೆ ನೋವನ್ನು ಅಭಿನಯಿಸುತ್ತಾ, ನಾಗ ಖುಷಿ ಪಡಲು ಸಾಧ್ಯವಾಗುವುದಾದರೂ ಈ ಕವಡರಿಯದ ನಿಷ್ಠೆಯಿಂದಲೇ. ಈ ನಿಷ್ಠೆಯ ಕಟ್ಟಿನಲ್ಲಿ ಶೃಂಗಾರ ಪಡೆಯುವ ಕಾಂತಿ ಎಣೆ ಇಲ್ಲದ್ದು ಎನ್ನುವುದನ್ನು ಈ ಎರಡು ಸಂಕಲನದ ಪ್ರೇಮಗೀತೆಗಳೂ ಪ್ರತಿಪಾದಿಸುತ್ತವೆ.

ಕೆ. ಎಸ್. ನ 'ಪ್ರೇಮಕವಿ' ಎಂದೇ ಹೆಸರು ಮಾಡಿದವರು. ಜೀವಜಾಲಕ್ಕೆಲ್ಲ ಮರುಗಳು ಕವಿಸುವ ಪ್ರೀತಿಯ ಮಾಯೆಯೇ ವಸ್ತುವಾಗಿ ಅವರ ಕಾವ್ಯ ಹುಟ್ಟಿ ಬಂತು. ನವದಂಪತಿಗಳ ಪಿಸು ಮಾತಿನಷ್ಟು ಸವಿಯಾದ ಅವರ 'ಮೈಸೂರು ಮಲ್ಲಿಗೆ'ಯನ್ನು ಇಡೀ ನಾಡೇ ಮುಡಿಗಿಟ್ಟುಕೊಂಡು ಮೆರೆಯಿತು. ಮೈಸೂರು ಮಲ್ಲಿಗೆಯನ್ನು ತಂಗಾಳಿಗೊಡ್ಡಿದ ಪ್ರತಿಭೆ ಅಪ್ಸರೆಯಂತೆ ಈ ಲಾವಣ್ಯ-ಮಣ್ಣು ನೆಲದಿಂದ ಬಂದದ್ದಲ್ಲ ಎನಿಸಿಬಿಟ್ಟಿದೆ! ಎಂದು ಕವಿ ಬೇಂದ್ರೆ ಬರೆದರೆ "ಇದು ಕಸ್ತೂರಿಯ ನೆಲದಲ್ಲಿ ಕಾಮನಬಿಲ್ಲನ್ನು ಬಿತ್ತಿ ಬೆಳೆಯಿಸಿದ ಹೂದೋಟ" ಎಂದು ಡಿ. ಎಲ್. ನರಸಿಂಹಾಚಾರ್‌ರಂಥ ವಿದ್ವಾಂಸರು ಹೊಗಳಿದರು. ಅಲ್ಲಿಂದಾಚೆ ಈ ಕವಿ 'ಇರುವಂತಿಗೆ' 'ಉಂಗುರ' ಸಂಕಲನಗಳಲ್ಲಿ ಇನ್ನೂ ಹಲವು ಪ್ರೇಮಗೀತೆಗಳನ್ನು ನೀಡಿದ್ದಾರೆ. ಆದರೂ ಜನ ಮಲ್ಲಿಗೆಯನ್ನು ಬಿಟ್ಟುಕೊಟ್ಟಿಲ್ಲ. ಈಗಾಗಲೇ ಅದರ ಹದಿನೆಂಟನೆಯ ಮುದ್ರಣ ಸಿದ್ಧವಾಗಿದೆ. ಕನ್ನಡದಲ್ಲಿ ಇಷ್ಟೊಂದು ಸಲ ಅಚ್ಚಾದ ಕಾವ್ಯ ಇನ್ನೊಂದಿಲ್ಲ. ನವಿಲೂರಿನೊಳಗೆಲ್ಲ. ಬಂದಿರುಳ ಕನಸಿನಲಿ ಹತ್ತು ವರುಷದ ಹಿಂದೆ ಬಳೆಗಾರ ಚನ್ನಯ್ಯ ಮದುವೆಯಾಗಿ ತಿಂಗಳಲ್ಲಿ ರಾಯರು ಬಂದರು – ಇವೆಲ್ಲ ಕವಿತೆಗಳು ಕೆ. ಎಸ್. ಎನ್. ಮೊದಲ ಇನ್ನಿಂಗ್ಸ್‌ನಲ್ಲಿಯೇ ಹೊಡೆದ ಸಿಕ್ಸರ್‌ಗಳು 'ಕೂಡಿದರೆ ಕೆನೆಹಾಲು' ಅಗಲಿದರೆ ಕೆನೆಮೊಸರು ಒಲುಮೆಯೊಳಗೆಲ್ಲ ಸೊಗಸು, 'ಹಿಂಡಬಾರದು ದುಂಡು ಮಲ್ಲಿಗೆಯ ದಂಡೆಯನು. ಒಣಗಬಾರದು ಒಡಲ ಚಿಲುಮೆ – ಈ ರಸೋಕ್ತಿಗಳೆಲ್ಲ ನಗರದ ಮಧ್ಯಮ ಜನಕ್ಕೆ ಬಾಯಿಪಾಠವಾಗಿ ಹೋದವು. ಪುಸ್ತಕ ನೋಡದೇ, ಕವಿಯ ಹೆಸರು ತಿಳಿಯದೆ. ಬಾಯಿಂದ ಬಾಯಿಗೆ ಈ ಹಾಡುಗಳು ಹರಿದು ಹೋದದ್ದುಂಟು. ಈ ಹಾಡುಗಳಲ್ಲಿನ ದಂಪತಿಗಳು ಸಾವು ನೋವಿಲ್ಲದ ಗಂಧರ್ವರಾದರು. ನಾಡಿನ ಜನಕ್ಕೆ ಯೌವ್ವನದ ಪ್ರತಿನಿಧಿಗಳಾದರು.

"ನವೋದಯದರಲ್ಲಿ ತಮ್ಮ ಅಸಾಮಾನ್ಯ ಚಿತ್ರಕ ಶಕ್ತಿಯಿಂದ ಎಲ್ಲರ ಗಮನ ಸೆಳೆದ ಸು. ರಂ. ಎಕ್ಕುಂಡಿಯವರು ತಮ್ಮ 'ಹಾವಾಡಿಗರ ಹುಡುಗ' ಕವನ ಸಂಕಲನದಲ್ಲಿ ಕೆಲವು ಅತ್ಯಾಕರ್ಷಕ ಪ್ರಣಯ ಕವಿತೆಗಳನ್ನು ಕೊಟ್ಟಿದ್ದಾರೆ. ಇವುಗಳೆಲ್ಲ ಪ್ರಾಚೀನ ಕಾವ್ಯ ಪುರಾಣಗಳ ವಸ್ತುವನ್ನು ಬಳಸಿ ಮಾಡಿದ ಹೊಸ ಸೃಷ್ಟಿ ಎನ್ನಬಹುದು. ಶ್ವೇತಕೇತು ದೇವರ್ಷಿಯನ್ನು ಲಕ್ಷ್ಮೀ ಒಲಿಯುವುದು. ಮನದೇವಿ ಪುಂಡರೀಕನ ಚೆಲುವಿಗೆ ಮಾರುಹೋಗಿ ಅವನಿಗೆ ಆಕರ್ಷಿತರಾಗಿ, ಅನುರಾಗವಶರಾಗಿ ಅಸವಳಿಯುವುದು – ಇಂಥ ಪ್ರಸಂಗಗಳನ್ನೆಲ್ಲ ಎಕ್ಕುಂಡಿಯವರು ಚಿತ್ರ. ನಾದ. ಅರ್ಥ ಮತ್ತು ಲಯಗಳ ಒಂದು ಮಧುರ ಮಿಶ್ರಣದಲ್ಲಿ ಅಪೂರ್ವವೆಂಬಂತೆ ಕಟ್ಟಿಕೊಟ್ಟಿದ್ದಾರೆ." [22]

ಕನ್ನಡದ ಈ ಶೃಂಗಾರ ಕಾವ್ಯಕ್ಕೆ ತಮ್ಮ ಕೊಡುಗೆ ಸಲ್ಲಿಸಿದ ಇನ್ನೂ ಹಲವಾರು ಹಿರಿಯ ಕವಿಗಳಿದ್ದಾರೆ. ವಿ. ಸೀ ಅವರ 'ವಿರಹಿ'. 'ಕೊಂಕು'. 'ಸಿರಿ' ಮೊದಲಾದ ಕವಿತೆಗಳು: ಅಡಿಗರ 'ಸಖಿ ಬಾ' 'ಮುಗುದೆ ಇವಳು' ಎಂಬ ಕವಿತೆಗಳು: ವಿನಾಯಕರ 'ಪ್ರೀತಿಯ ಒಗಟು' 'ಕಾದಲೆ' ಎಂಬ

[22] ಪರಸ್ಪರ. ಡಾ ॥ ಎನ್. ಎಸ್. ಲಕ್ಷ್ಮೀನಾರಾಯ ಭಟ್ಟ. ವಿಮರ್ಶಾತ್ಮಕ ಲೇಖನಗಳು. ೨೪೮–೨೫೩

ಕವಿತೆಗಳು ಇವುಗಳಲ್ಲಿ ಸೇರುತ್ತವೆ. ಮಾಸ್ತಿಯವರ ಸೋಜಿಗದ ಹೊನಲಿನಲ್ಲಿ ಬರುವ ಹತ್ತಾರು ಸಾಲುಗಳಲ್ಲಿ ಪ್ರಣಯ ದೃಶ್ಯವು ಮನಮೋಹಕವಾಗಿದೆ. ಇವರಲ್ಲದೆ ಮುಗಳಿ ರಾಘವ, ಆನಂದಕಂದರಂಥ ಇನ್ನೂ ಹಲವಾರು ಹಿರಿಯರ ಕೆಲವು ಪ್ರೇಮ ಕವಿತೆಗಳು ಕನ್ನಡ ಕಾವ್ಯದ ವಿಶಿಷ್ಟ ಪ್ರೇಮವೊಂದರ ಪ್ರಪಂಚವನ್ನು ಕಟ್ಟಿದೆ.

ಡಿ. ಡಿ. ವಿ. ಜಿ. ಯವರ ಶೃಂಗಾರ ಮೀಮಾಂಸೆ

ಡಿ. ವಿ. ಜಿ. ಯವರು ರಚಿಸಿರುವ ಸಾಹಿತ್ಯ ಸಂಬಂಧವಾದ ಬರಹಗಳಲ್ಲೆಲ್ಲ ಪ್ರಾಣಪ್ರಾಯವಾದ ಅಂಶವೆಂದರೆ ಚಿಂತನೆ ಜಿಜ್ಞಾಸೆಗಳಿಗೆ ಸಂಬಂಧಿಸುವ ಅಂಶ, ಅವರ ಕಾವ್ಯ ಎಷ್ಟು ಭಾವನಾತ್ಮಕವಾದದ್ದೋ ಅದಕ್ಕಿಂತ ಹೆಚ್ಚು ವಿಚಾರಾತ್ಮಕವಾದದ್ದು. ಅವರ ಮೊದಲ ಕಾವ್ಯಕೃತಿಯಾದ 'ನಿವೇದನ'ದ ಆರಂಭದ ಪದ್ಯ

"ಮೇಲೆ ನೋಡೆ ಕಣ್ಣ ತಣಿಪ
ನೀಲ ಪಟದಿ ವಿವಿಧ ರೂಪ
ಜಾಲಗಳನು ಬಣ್ಣಿಸಿರ್ಪ ಚಿತ್ರಚತುರನಾರ್
ಲೀಲೆಯಿಂದ ಮಾಸದಾ ವಿಚಿತ್ರವೆಸಪನಾರ್"

ಎಂಬ ಪ್ರಶ್ನಮೂಲವಾದ ಜಿಜ್ಞಾಸೆಯಿಮದ ಆರಂಭವಾಗುತ್ತದೆ. ಸತ್ಯ-ಸೌಂದರ್ಯಗಳನ್ನು ಒಂದೆಡೆ ಬೆಸೆಯುವ ವಿಶಿಷ್ಟ ಕೃತಿ 'ಶೃಂಗಾರ ಮಂಗಳಂ' ಸತ್ಯ-ಸೌಂದರ್ಯಗಳ ಸಂಬಂಧವನ್ನು ಬದುಕಿನಲ್ಲಿ ಅವು ಪ್ರಕಟಗೊಳ್ಳುವ ರೀತಿಯನ್ನು ಸೃಷ್ಟಿಯಲ್ಲಿ ಶೃಂಗಾರದ ಘನತೆ ಅನಿರ್ವಾಯತೆಗಳನ್ನು ಕುರಿತು ಇಲ್ಲಿ ನಡೆದಿರುವಷ್ಟು ಸೂಕ್ಷ್ಮವಾದ ಮತ್ತು ಮೇಲುಮಟ್ಟದ ಚಿಂತನೆ ಅದರ ತರ್ಕಬದ್ಧ ಪ್ರತಿಪಾದನೆ ಕನ್ನಡದಲ್ಲಿ ಬೇರೆಲ್ಲಿಯೂ ನಡೆದಂತಿಲ್ಲ. ಇದರಲ್ಲಿ ಆರು ಭಾಗಗಳಿವೆ ೧) ಪೀಠಿಕೆ, ೨) ಜಗತ್ಸೃಷ್ಟಿ-ಮಹರ್ಷಿ ಸಾಕ್ಷ್ಯ. ೩) ಜಗದ್ವಿಕಾಸ – ಮಹರ್ಷಿ ಸಾಕ್ಷ್ಯ. ೪) ಸತ್ಯ ಸುಂದರ ತತ್ವ – ಕೀಟ್ಸನ ಸಾಕ್ಷ್ಯ. ೫) ಪ್ರೇಮಾದ್ವೈತ – ಷೇಕ್ಸ್‌ಪಿಯರ್‌ನ ಸಾಕ್ಷ್ಯ. ೬) ವಿರಹಿಯ ಅನುಭವ – ಅನಾಮಧೇಯ ಸಾಕ್ಷ್ಯ ಎಂದು ಹೆಸರಿಸಲಾಗಿದೆ.

ಕಂದಪದ್ಯ ಮತ್ತು ಈ ಬಗೆಯ ಸೀಸ ಪದ್ಯಗಳನ್ನು ಡಿ. ವಿ. ಜಿ. ಬಹಳ ವಿಭಿನ್ನ ಶೈಲಿಯಲ್ಲಿ ಬರೆಯುವದರಲ್ಲಿ ಪ್ರಸಿದ್ಧರಾಗಿದ್ದರು.

ಸೌಂದರ್ಯ ಶೃಂಗಾರ ಸಿಂಧುಕಲ್ಲೋಲದಲಿ
ಸಿಲುಕಿ ಹೊರಳಾಡುತಿದೆ ಜೀವಕೋಟಿ
ಅವನಿವಳನಿವಳವನ ಹಿಂದಟ್ಟಿ ಪರದಾಡಿ
ಫಳಿಗೆ ಫಳಿಗೆಗೆ ಗತಿಯ ಬೇರೆ ಮಾಡಿ

ಕಿಲಕಿಲ ನಗುತ್ತೊಮ್ಮೆ ಗಳಗಳ ಅಳುತ್ತೊಮ್ಮೆ
ಸುಳಿಗೊರ್ವಳೊರ್ವನನು ಸೆಳೆದು ನೂಕಿ
ಓಲಾಡಿ ತೇಲಾಡಿ ಮುಳುಗುತ್ತೆ ಮುಕ್ಕುತ್ತೆ
ಈಸಾಡಿ ಗಾಸಿಪಟ್ಟಲೆದು ದಣಿವರ್

(ಜೀವಸಂಕ್ಷೋಭಣಂ)

ಸತ್ಯ-ಸುಂದರ ತತ್ವ ಮತ್ತು ಪ್ರೇಮಾದ್ವೈತ ಎಂಬ ಮುಂದಿನ ಎರಡು ಭಾಗಗಳಿಗೆ ಡಿ. ವಿ. ಜಿ. ಯವರು ಕ್ರಮವಾಗಿ ಕೀಟ್ಸ್ ಮತ್ತು ಷೇಕ್ಸ್‌ಪಿಯರ್ ಬರಹಗಳ ಸಾಕ್ಷ್ಯವನ್ನು ಬಳಸುತ್ತಾರೆ. ಕೀಟ್ಸ್ ಗ್ರೀಸ್ ದೇಶದ ಒಂದು ಚಿತಾಭಸ್ಮ ಕರಂಡವನ್ನು ಕುರಿತು ಬರೆದ Ode on a Grecian Urn ಎಂಬ ಕವಿತೆ ತುಂಬ ಪ್ರಸಿದ್ಧವಾಗಿದೆ. ಕರಂಡದ ಒಳಗಿರುವ ಭಸ್ಮ ಪ್ರತಿನಿಧಿಸುವ ಮೃತ್ಯುವಿನ ಅನಿವಾರ್ಯತೆ ಮತ್ತು ಕರಂಡದ ಹೊರಭಾಗದಲ್ಲಿರುವ ಸುಂದರ ಚಿತ್ರಗಳು ಪ್ರತಿನಿಧಿಸುವ ಜೀವನ ಸೌಂದರ್ಯ ಈ ಎರಡು ಅಂಶಗಳೂ ಕಲೆಯ ಕೀಟ್ಸ್‌ನ ಮನಸ್ಸಿನಲ್ಲಿ ಮೂಡಿದ ಸಂವೇದನೆ. ಅವನ ಈ ಕವನದಲ್ಲಿ ಸುಂದರವಾಗಿ ಧ್ವನಿತವಾಗಿದೆ. ಸೌಂದರ್ಯವೇ ಸತ್ಯ. ಸತ್ಯವೇ ಸೌಂದರ್ಯ. ಎಲ್ಲರೂ ತಿಳಿಯ ಬೇಕಾದ ತತ್ವ ಇದೊಂದೇ ಎಂದು ಕೀಟ್ಸ್ ಆ ಕವನದ ಮೂಲಕ ಸಾರಿದ್ದಾನೆ. 'ಯಮನನ್ನು ಮರೆಯದ ಭೋಗ. ಕಾಮವನ್ನು ಜರಿಯದ ತ್ಯಾಗ – ಇದೇ ವಿವೇಕದ ದಾರಿ ಎಂದು ಡಿ. ವಿ. ಜಿ. ಯವರು ಪ್ರತಿಪಾದಿಸಿದ್ದಾರೆ.

ಸೌಂದರ್ಯವೆನ್ನುವುದು ಕೇವಲ ದೈಹಿಕವಾದದ್ದಲ್ಲ. ಭಾವನೆ ಕಲ್ಪನೆಗಳಿಂದ ಸಾಧಿತವಾಗುವ ಸೌಂದರ್ಯವೂ ಇದೆ. ಇದು ಸಾಹಿತ್ಯ ಮತ್ತು ಕಲೆಗಳ ಬಲದಿಂದ ಮನಸ್ಸು ಪಡೆಯಬಹುದಾದ ಆನಂದಕ್ಕೆ ಕಾರಣವಾದದ್ದು. ಹಾಗೆಯೇ ತತ್ವದ ಸೌಂದರ್ಯವೆನ್ನುವುದೂ ಇದೆ. ಇದರಿಂದ ದೊರಕುವ ಆನಂದ ಶಾಸ್ತ್ರಾನು ಸಂಧಾನ ಸಂಶೋಧನೆಗಳ ಮೂಲಕ ಬರುವಂಥದು. ಇನ್ನು ವೇದಾಂತದ ಮತದಲ್ಲಿಯಂತೂ ಸತ್ಯ ಸೌಂದರ್ಯಗಳು ಪ್ರತ್ಯೇಕವೇ ಅಲ್ಲ. "ವಿಶ್ವಕರ್ತನ ಒಳಮೈ ಸತ್ಯ" ಹೊರಮೈ ಸೌಂದರ್ಯ ಇದು ಜೀವನಧರ್ಮಕ್ಕೆ ಮೂಲಾಧಾರ. ಸತ್ಯವನ್ನು ಮರೆಯದೇ ಸೌಂದರ್ಯವನ್ನು ಭಜಿಸುವಾತನು ಸುಕೃತ ಜೀವಿ".[೨೩] – ಇದು ಶೃಂಗಾರ ಮಂಗಳ ಪ್ರತಿಪಾದಿಸುವ ವಿಚಾರ.

---

[23] ಪರಸ್ಪರ – ವಿಮರ್ಶಾತ್ಮಕ ಲೇಖನಗಳು ಡಾ ॥ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ. ೨೫೪–೨೫೬

ಅಧ್ಯಾಯ – ೫

ಕೆ. ಎಸ್. ನರಸಿಂಹ ಸ್ವಾಮಿಯವರ ಕವನಗಳಲ್ಲಿ ಪ್ರಣಯದ ಚಿತ್ರಣ : –

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ನವೋದಯ ಸಾಹಿತ್ಯ ಸಂದರ್ಭ ಅನನ್ಯವಾದುದು. ಮಹಾಕವಿಗಳು ಕನ್ನಡ ಸಾಹಿತ್ಯಕ್ಕೆ ಮೇರುಕೃತಿಗಳನ್ನು ಕೊಡುಗೆಯಾಗಿ ನೀಡಿದ ಪರ್ವಕಾಲವಿದು. ಬೇಂದ್ರೆ, ಕುವೆಂಪು, ಬಿ. ಎಂ. ಶ್ರೀ ತೀ. ನಂ. ಶ್ರೀ ಅವರಂತೆ ವೈಶಿಷ್ಟ್ಯಪೂರ್ವ ಕವನಗಳಿಂದ ಕನ್ನಡಿಗರ ಮನೆಮಾತಾಗಿರುವ ಧೀಮಂತ ವ್ಯಕ್ತಿ ಕೆ. ಎಸ್. ನರಸಿಂಹ ಸ್ವಾಮಿ ಅವರ ಪವಿತ್ರವಾದ ಭಾವನೆಗಳಲ್ಲಿ ದಾಂಪತ್ಯಕ್ಕೆ ಅಲ್ಲಿರುವ ಪ್ರೇಮಕ್ಕೆ ಅಗ್ರಸ್ಥಾನ. ಈ ಮಹಾನ್ ಕವಿ ಕನ್ನಡಿಗರ ಹೃದಯವನ್ನು ಗೆದ್ದಿರುವುದಲ್ಲೆ ಇಲ್ಲ ಕದ್ದಿರುವುದಕ್ಕೆ ಒಂದು ಹಿನ್ನೆಲೆಯಿದೆ. ಅವರೇ ಹೇಳುವಂತೆ –

"೫೫ ವರುಷಗಳ ಹಿಂದೆ ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಬೇಸಗೆಯ ರಜದಲ್ಲಿ ಯಾರೋ ಪುಣ್ಯಾತ್ಮರು ಬರ್ನ್ಸ್ ಕವಿಯ ಕವನ ಸಂಗ್ರಹವನ್ನು ನನ್ನ ಕೈಗೆ ಹಾಕಿದರು. ಅದನ್ನು ಓದುತ್ತ ಓದುತ್ತ ಅದೇ ಧಾಟಿಯಲ್ಲಿ ನಾನೂ ಒಂದು ಕವನವನ್ನು ಇಂಗ್ಲೀಷಿನಲ್ಲಿ ಬರೆದೆ. ಗೆಳೆಯರ ಮುಂದೆ ಅದನ್ನು ಓದಿದೆ. ನನ್ನನ್ನು ಮೊದಲ ಬಾರಿಗೆ 'ಕವಿ' ಎಂದು ಕರೆದವರು ಅವರು. ಇಂಗ್ಲೀಷ ಕವಿತೆಯ ಗುಲಾಬಿ ತೋಟದಲ್ಲಿದ್ದ ನನ್ನನ್ನು ಶ್ರೀಯವರ 'ಇಂಗ್ಲೀಷ್ ಗೀತೆಗಳು' ಕನ್ನಡಕ್ಕೆ ಬರಮಾಡಿಕೊಂಡವು.

"ಕನ್ನಡ ಕವಿಯಾಗುವ ಆಸೆ ಬಂತು. ಪುರಾಣದ ಕಟ್ಟೆಯಲ್ಲಿ ಗದುಗಿದ ಭಾರತವನ್ನು ಕೇಳಿದೆ. ಬರ್ನ್ಸ್ ಕವಿಗೆ ಜನಪದ ಗೀತೆಗಳೆಂದರೆ ತುಂಬ ಇಷ್ಟ. ನಾನೂ ಅವನನ್ನು ಅನುಸರಿಸಿ ಹಳ್ಳಿಗೆ ಹೋಗಿ ಜನಪದ ಕವಿತೆಯ ಸೊಬಗನ್ನು ಹೃದಯದಲ್ಲಿ ತುಂಬಿಕೊಂಡೆ. ಹಳ್ಳಿಯಲ್ಲಿ ನಮ್ಮ ಎದುರು ಮನೆಯ ಜಗಲಿಯ ಮೇಲೆ ಹಗಲೂ ರಾತ್ರಿ ಚಿನ್ನ ಬೆಳ್ಳಿ ಕೆಲಸ ನಡೆಯುತ್ತಿತ್ತು. ಛಂದಸ್ಸಿನ ಕಲ್ಪನೆ ನನಗೆ ಮೊದಲು ಬಂದದ್ದು ಅಲ್ಲಿಯೇ. ನಮ್ಮ ತಾಯಿ ಶಾನುಭೋಗರ ಮಗಳು. ನಮ್ಮ ತಂದೆ ಮೈಸೂರಿನಲ್ಲಿ ಶೆಟ್ಟರ ಅಂಗಡಿಯಲ್ಲಿ ಗುಮಾಸ್ತರಾಗಿದ್ದರು. ಸಂಜೆಯಾದರೆ ಮನೆಗೆ ಬಂದು ವಯೊಲಿನ್ ನುಡಿಸುತ್ತಿದ್ದರು. ಸುಪ್ರಸಿದ್ಧ ಸಂಗೀತ ವಿದ್ವಾಂಸರು ಆಗಾಗ ನಮ್ಮ ಮನೆಗೆ ಬರುತ್ತಿದ್ದರು. ಅವರ ಹಾಡುಗಾರಿಕೆ ನನ್ನ ಮನಸ್ಸನ್ನು ಸೆಳೆಯಿತು. ದೊಡ್ಡ ಗಡಿಯಾರದ ಎದುರಿಗೆ ಒಂದು ಹೂವಿನ ಅಂಗಡಿ ಇತ್ತು. ಅದರ ಮಾಲಿಕರಾದ ಸಾಹೇಬರು ತುಂಬಾ ದೊಡ್ಡ ಮನುಷ್ಯರು. ಆಗಾಗ ನಾನು ಅವರ ಅಂಗಡಿಗೆ ಹೋಗುತ್ತಿದ್ದೆ. ಅವರು ಹೂ-ಕಟ್ಟುವುದರ ಮೇಲೆ ನನ್ನ ಕಣ್ಣು. ರೇಸಿಮೆಯ ನೂಲಿಗಿಂತ ತೆಳುವಾದ ಬಾಳೆಯ ನಾರಿನಲ್ಲಿ ಅವರು, ನನ್ನೊಂದಿಗೆ ಮಾತನಾಡುತ್ತಲೇ ದೂರ ದೂರಕ್ಕೆ ಗುಲಾಬಿ, ಸಂಪಗೆ, ಮರುಗ, ಪಚ್ಚೆತೆನೆ ಇಟ್ಟು ಮಲ್ಲಿಗೆ ದಂಡೆ ಹೆಣೆದರೆಂದರೆ – ಅದೇ

ಒಂದು ಭಾವಗೀತೆ. ಅವರು ಪುಷ್ಪಕವಿ ಕಾವ್ಯ ಪಂಕ್ತಿಯ ಕಲ್ಪನೆ ನನಗೆ ಮೊದಲು ಬಂದದ್ದು ಅಲ್ಲಿಯೇ. ನಾನು ಕಾವ್ಯ ಕ್ಷೇತ್ರದಲ್ಲಿ ಕಾಲಿಟ್ಟಿದ್ದಕ್ಕೆ ಇದೆಲ್ಲ ಕಾರಣಗಳಿರಬಹುದು".

ಹೀಗೆ ಕೆ. ಎಸ್. ಎನ್. "ಮಲ್ಲಿಗೆಯ ಮಾಲೆ" ಕವನ ಸಂಗ್ರಹದ ಮುನ್ನುಡಿಯಲ್ಲಿ ಕಾರಣಗಳನ್ನು ಹೇಳಿಕೊಂಡಿದ್ದಾರೆ. ಕವಿಯಾಗಿ ಪ್ರವರ್ಧಮಾನಕ್ಕೆ ಬರಲು ಏಣಿ ಹಾಕಿ ಕೊಟ್ಟವರನ್ನು ಅವರು ಮರೆಯುವುದಿಲ್ಲ. ಪ್ರೊ ॥ ಎ. ಆರ್. ಕೃಷ್ಣಶಾಸ್ತ್ರಿ, ರಾಷ್ಟ್ರಕವಿ ಕುವೆಂಪು, ತೀ. ನಂ. ಶ್ರೀ, ಟಿ. ಎಸ್. ವೆಂಕಣ್ಣಯ್ಯ ಮಾಸ್ತಿ, ಡಿ. ವಿ. ಜಿ., ವಿ. ಸೀ., ಎಲ್. ಎಸ್. ಶೇಷಗಿರಿಯವರು, ಪ್ರೊ ॥ ಜಿ. ವೆಂಕಟಸುಬ್ಬಯ್ಯ, ಡಾ ॥ ಹಾ. ಮಾ. ನಾಯಕ, ಡಾ ॥ ಜಿ. ಎಸ್. ಶಿರುದ್ರಪ್ಪನವರನ್ನು ಅವರಲ್ಲಿ ನೆನೆಯುತ್ತಾರೆ.

'ಮೈಸೂರಮಲ್ಲಿಗೆ' ಸಂಕಲನದಲ್ಲಿ ೪೫ ಕವಿತೆಗಳವೆ. ಇವೆಲ್ಲವನ್ನೂ ಕೆ. ಎಸ್. ಎನ್. ಅವರು ಬರೆದದ್ದು ೧೯೩೭-೧೯೪೨ ರ ಅವಧಿಯಲ್ಲಿ ಪ್ರೇಮಗೀತೆಗಳ ಸಂಕಲನವೆಂದು ಪ್ರಸಿದ್ಧವಾಗಿರುವ 'ಮೈಸೂರ ಮಲ್ಲಿಗೆ' ಕವಿತೆಗಳನ್ನು ಕವಿ. ದಾಂಪತ್ಯಗೀತೆಗಳೆಂದು ಕರೆಯುತ್ತಾರೆ.

"ನನ್ನ ಮದುವೆ ನಡೆದದ್ದು ೧೯೩೭ ರಲ್ಲಿ ಮೈಸೂರ ಮಲ್ಲಿಗೆ ಬಿಡುಗಡೆಯಾದದ್ದು ೧೯೪೨ ಜನವರಿ ತಿಂಗಳಲ್ಲಿ ನಡುವಣ ಆರು ವರ್ಷಗಳಲ್ಲಿ ನಾನು ಸುಮಾರು ಅರವತ್ತು ಕವನಗಳನ್ನು ಬರೆದಿದ್ದೆ. ಈ ಪದ್ಯಗಳನ್ನು ಬರೆದದ್ದು ನಾನು ಮಾವನ ಮನೆಯಲ್ಲಿದ್ದಾಗ ಮತ್ತು ಮೈಸೂರು ಪೌರಸಭಾ ಕಚೇರಿಯಲ್ಲಿ ೨೫ ರೂ. ಸಂಬಳದ ಗುಮಾಸ್ತನಾಗಿದ್ದಾಗ ಇವುಗಳನ್ನು ಪ್ರೇಮಗೀತೆ ಅನ್ನುವುದಕ್ಕಿಂತ ದಾಂಪತ್ಯಗೀತೆ ಎನ್ನುವುದು ಹೆಚ್ಚು ಸೂಕ್ತ."

ಮದುವೆಗೆ ಮುನ್ನ ಕೆ. ಎಸ್. ಎನ್. ಪ್ರೇಮಗೀತೆಗಳನ್ನು ಬರೆದಿರಲಿಲ್ಲವೆಂದು ಅವರೇ ಹೇಳಿದ್ದಾರೆ. ಕೆಲವು ಪ್ರಕೃತಿಗೀತೆಗಳನ್ನು ಬರೆದಿದ್ದರಂತೆ 'ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ' – ಅವರು ಬರೆದ ಮೊದಲ ಪ್ರೇಮಕವಿತೆ, ಇಲ್ಲಿನ ಕವನಗಳನ್ನು ಕೆ. ಎಸ್. ನ ಬರೆದದ್ದು ಮಾವನ ಮನೆಯಲ್ಲಿದ್ದಾಗ ಮತ್ತು ಮೈಸೂರಿನಲ್ಲಿ ಮದುವೆಯ ನಂತರ ಕೆಲವು ಕಾಲ ಕೆ. ಎಸ್. ನ ಮಾವನ ಮನೆಯಲ್ಲಿದ್ದರು. ಶಿರಸ್ತೇದಾರರಾಗಿದ್ದ ಅವರ ಮಾವ ತಿಪಟೂರು, ಚಿತ್ರದುರ್ಗ, ಅರಸಿಕೆರೆಗಳಿದ್ದರು. ಇಲ್ಲಿನ ಕವನಗಳಿಗೆ ಆ ಹಿನ್ನೆಲೆಯಿದೆ.

"ಗಂಡು ಹೆಣ್ಣಿನ ಸಂಬಂಧವನ್ನು ದಾಂಪತ್ಯದ ಚೌಕಟ್ಟಿನಲ್ಲಿಯೇ ಇಟ್ಟು ನೋಡುವುದು ನವೋದಯ ಕಾಲದ ಸಾಮಾಜಿಕ ಮೌಲ್ಯವಾಗಿತ್ತು. ದಾಂಪತ್ಯದಾಚೆಗಿನ ಸಂಬಂಧವನ್ನು ಗೌರವದಿಂದ ಕಾಣುವುದಾಗಲೀ, ಗಂಡು-ಹೆಣ್ಣಿನ ಸಂಬಂಧವನ್ನು ಸಾಮಾಜಿಕ ಹಂಗಿಲ್ಲದೆ ಕೇವಲ ಗಂಡು ಹೆಣ್ಣಿನ ಸಂಬಂಧ ಮಾತ್ರವಾಗಿಯೇ ನೋಡುವುದಾಗಲೀ ಆಗ ಸಾಧ್ಯವಿರಲಿಲ್ಲ. ಹೆಣ್ಣನ್ನು

ಹೆಂಡತಿಯ ಸ್ಥಾನದಲ್ಲಿಟ್ಟು ಒಪ್ಪಿಕೊಳ್ಳುವುದು ಆಗಿನ ರೀತಿ. ಹೀಗಾಗಿ 'ಮೈಸೂರ ಮಲ್ಲಿಗೆ'ಯ ಪ್ರೇಮ ಕವಿತೆಗಳು ದಾಂಪತ್ಯದ ಪ್ರಣಯ ಕವಿತೆಗಳಾಗಿಯೇ ರೂಪುಗೊಂಡಿರುವುದು. ಸಹಜವಾಗಿದೆ. ಹೀಗಾಗಿ ಈ ಕವಿತೆಗಳು ಅಪಾರ ಜನಪ್ರಿಯತೆಯನ್ನು ಹೊಂದಲು ಸಾಧ್ಯವಾಗಿದೆ. ಏಕೆಂದರೆ ಸಾಮಾಜಿಕವಾಗಿ ಸ್ವೀಕೃತವಾದ ಮೌಲ್ಯಗಳು ಇಲ್ಲಿ ಪ್ರತಿಪಾದಿತವಾಗಿರುವುದರಿಂದ ಸಹಜವಾಗಿಯೇ ಜನತೆ ಯಾವ ವಿರೋಧವೂ ಇಲ್ಲದೇ ಇದನ್ನು ಸ್ವೀಕರಿಸುವುದು ಸುಲಭವಾಗುತ್ತದೆ. ಶಿಷ್ಟಾಚಾರದ ಚೌಕಟ್ಟಿನಲ್ಲಿಯೇ ಶೃಂಗಾರ ಅಭಿವ್ಯಕ್ತವಾಗಿರುವುದರಿಂದ ಪ್ರವೃತ್ತಿ ಹಾಗೂ ಸಂಸ್ಕೃತಿ – ಎರಡೂ ನೆಲೆಯಲ್ಲಿ ಇದು ಪ್ರಿಯವಾಗುವುದು ಸಾಧ್ಯವಾಗಿದೆ. 'ರಾಯರು ಬಂದರು ಮಾವನ ಮನೆಗೆ' ಯಂಥ ಕವಿತೆಯ ಶಕ್ತಿ ಇರುವುದೇ ಈ ಹೊಂದಾಣಿಕೆಯಲ್ಲಿ ಬೇಂದ್ರೆಯವರ ಕೆಲವು ಕವಿತೆಗಳು ವಿ. ಸೀ. ಅವರ ಕೆಲವು ಕವಿತೆಗಳಲ್ಲಿ ದಾಂಪತ್ಯದಾಚೆಗಿನ ಗಂಡು-ಹೆಣ್ಣಿನ ಸಂಬಂಧವನ್ನು ಚಿತ್ರಿಸಿದೆಯೆಂಬುದನ್ನು ಬಿಟ್ಟರೆ ನವೋದಯ ಕಾವ್ಯ ಸಂದರ್ಭದಲ್ಲಿ ಬೇರೆ ನಿದರ್ಶನಗಳು ಸಿಗುವುದು ಕಷ್ಟ."

ಸರಸ ದಾಂಪತ್ಯದ ಪರಿಕಲ್ಪನೆ ಕನ್ನಡ ಸಾಹಿತ್ಯದಲ್ಲಿ ನಮಗೆ ಮೊದಲು ಕಾಣಸಿಗುವುದು ಮುದ್ದಣನಲ್ಲಿ. 'ರಾಮಾಶ್ವಮೇಧ'ದದ್ದಕ್ಕೂ ಕಾವ್ಯದ ಒಳ ಹೆಣಿಕೆಯಲ್ಲಿ ಒಂದಾಗಿ ಬೆಳೆದು ಬರುವ ಮುದ್ದಣ ಮನೋರಮೆಯರ ಸಲ್ಲಾಪ ಅತ್ಯಂತ ಆಕರ್ಷಕವಾಗಿದೆ. ರಾಮಾಶ್ವಮೇಧದ ಆರಂಭದಲ್ಲೇ ಮುದ್ದಣ ಈ ಸರಸ ದಂಪತಿಗಳ ಸಲ್ಲಾಪಕ್ಕೆ ಸೊಗಸಾದ ವೇದಿಕೆಯನ್ನು ಸೃಷ್ಟಿಸಿದ್ದಾನೆ.

"ವರ್ಷಕಾಲದೊಳೊಂದು ದಿವಸಂ ಬೈಗುಂಬೊಳ್ತಿನೊಳೆಂದಿನಂತಿರೋಲಗಂ ಪರಿಯೆ ಕಬ್ಬಿಗರ ಬಲ್ಲಹಂ ಮುದ್ದಣನರಮನೆಯಿಂ ಪೊರಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೈತರ್ಪುದುಮಾತನ ಮಡದಿ ಮನೋರಮೆ ದೂರದೆ ಕಂಡೆಳ್ದು ಇದಿರ್ವಂದು, ಕಾಲ್ಗೆ ನೀರಂ ನೀಡಿ ಮತ್ತಂ ಕೈವಿಡಿದೊಳಚೌಕಿಗೊಯ್ದು ಮಣೆಯಿತ್ತು ಕುಳ್ಳಿರಿಸಿ ತನಿವಣ್ಣಂ ತಿನಲಿತ್ತು. ಕೆನೆವಾಲು ಕುಡಿವೊಡಿತ್ತು, ಉಪಚರಿಸುತ್ತಿರ್ದಳ್ ಈ ಉಪಚಾರದಿನಾತನ ಪಸಿವುಂ ಬಳಲ್ಕೆಯುಂ ಮುಡಿಯೆ, ಕೆಳದಿ ನರುದಂಬುಲಮಂ ಸವಿಯಲ್ಕೆಂದು ಮಡಿದೀವುತುಮಿರೆ, ಇಂತು ಸುಖಸಲ್ಲಾಪಂಗೊಳುತಿರ್ದರ್, ಅದೆಂತೆನೆ...'

ಹೀಗೆ ಗಂಡ-ಹೆಂಡತಿ ಕುಳಿತು ಎಲೆಯಡಿಕೆ ಮೆಲ್ಲುತ್ತ ಸರಸವಾಗಿ ಮಾತನಾಡುವ ಪರಿಕಲ್ಪನೆ ಮುದ್ದಣನಲ್ಲಿ ರೂಪುಗೊಂಡಿದೆ. ಅದರ ಸಮಗ್ರ ಸಾಧ್ಯತೆಗಳೊಡನೆ ಕೆ. ಎಸ್. ನ ಅವರಲ್ಲಿ ಸಾಕ್ಷಾತ್ಕಾರವನ್ನು ಪಡೆದುಕೊಂಡಿದೆ. ಆಧುನಿಕ ಸಂವೇದನೆಯನ್ನು ತನ್ನ ಕಾವ್ಯದ ಚೌಕಟ್ಟಿನಲ್ಲಿ ತರಲು ಪ್ರಯತ್ನಿಸಿದ ಮುದ್ದಣ್ಣ ರಾಮ ಸೀತೆಯರ ದಾಂಪತ್ಯಕ್ಕೆ ಪರ್ಯಾಯವೆಂಬಂತೆ ಮುದ್ದಣ ಮನೋರಮೆಯರಂತಹ ಸಾಮಾನ್ಯ ದಂಪತಿಗಳನ್ನು ಸೃಷ್ಟಿಸಿ, ಅತ್ಯಂತ

ಲವಲವಿಕೆಯಿಂದ ಇವರ ಸರಸವನ್ನು ಚಿತ್ರಿಸುತ್ತಾನೆ. ತಿಳಿಹಾಸ್ಯ ಛೇಡಿಕೆ, ಶಿಷ್ಟಾಚಾರಕ್ಕೆ ಹೊರತಾಗದ ರಸಿಕತೆ, ಉಲ್ಲಾಸಪೂರ್ಣ ಮನಸ್ಸು ಇವನ್ನು ಮುದ್ದಣ ತನ್ನ ಸಂಭಾಷಣೆಯಲ್ಲಿ ಅನನ್ಯವಾಗಿ ಚಿತ್ರಿಸಿದ್ದಾನೆ. ಹೀಗೆ ಮುದ್ದಣದಲ್ಲಿ ಮೂಡಿದ ಈ ಆಧುನಿಕ 'ದಾಂಪತ್ಯಪ್ರೇಮ' ಮುಂದೆ ಇಂಗ್ಲೀಷ್ ಗೀತೆಗಳಲ್ಲಿ ಹೊಸಗನ್ನಡದ ನುಡಿಕಟ್ಟಿನಲ್ಲಿ ಒಂದು ಹೊಸ ರೂಪ ಪಡೆದುಕೊಂಡುದನ್ನು ನಾವು ಕಾಣುತ್ತೇವೆ.

"In India, with the Industrial Revolution still far away, the trend of democratization prevailed and the folk themes came in to the focus of poetic attention. It was significant, therefore, that B. M. Shri chose for his translation/ transcretion poems emphasizing the democratic World of common Experience and that the avoided the 'aristocratic' and complex kind of Poetry. We find him for instance, keeping the Metaphysicals, Milton, Keats and Arnold completely away and choosing, along with Burns and Wordsworth, only the simplest lyrics of Shakespeare, Shelly, Byron and Tennyson." [24]

ಶಾಂತಿನಾಥ ದೇಸಾಯಿಯವರು ಬಿ. ಎಂ. ಶ್ರೀ ಯವರ ಆಯ್ಕೆಯ ಬಗ್ಗೆ ಹೇಳಿರುವ ಮಾತುಗಳು ಗಮಾನಾರ್ಹವಾದುದು. ಹೀಗೆ ಬಿ. ಎಂ. ಶ್ರೀ ಅವರು ಆರಿಸಿಕೊಂಡ ಇಂಗ್ಲೀಷ್ ರೊಮ್ಯಾಂಟಿಕ್ ಕಾವ್ಯದ ಮೊದಲನೆಯ ಧಾರೆಯು, ನಂತರ ಕೆ. ಎಸ್. ನ ಅವರಲ್ಲಿ ಮುಂದುವರೆಯಿತು. ಶ್ರೀ ಅವರು ಉದ್ದೇಶಪೂರ್ವಕ ಬಿಟ್ಟ ಇನ್ನೊಂದು ಧಾರೆಯಲ್ಲಿ ಕುವೆಂಪು, ಬೇಂದ್ರೆ, ಪು. ತಿ. ನ. ಸಾರ್ಥಕ ಕೆಲಸ ಮಾಡಿದ್ದಾರೆ. ಹೀಗಾಗಿ ಕನ್ನಡ ನವೋದಯ ಕಾವ್ಯದಲ್ಲಿ ಬಿ. ಎಂ. ಶ್ರೀ ತೋರಿದ ಅನೇಕ ಸಾಧ್ಯತೆಗಳಲ್ಲಿ ಅವರ ಅತ್ಯುತ್ತಮ ಪ್ರತಿನಿಧಿ ಕೆ. ಎಸ್. ನ. ಕೆ. ಎಸ್. ನ. ಪ್ರಣಯ ಕವಿತೆಗಳು ಮನುಷ್ಯನ ದಿನನಿತ್ಯದ ಸಹಜ ಭಾವನೆಗಳನ್ನು ಆದರ್ಶೀಕರಿಸದೆ, ತಾತ್ವಿಕ ಚಿಂತನೆಯಲ್ಲಿ ಭಾರವಾಗಿಸದೆ ಸರಳವಾಗಿ ಆಪ್ತವಾಗಿ ಚಿತ್ರಿಸುತ್ತದೆ. ಬಿ. ಎಂ. ಶ್ರೀ ಅನುವಾದಗಳ ಮೂಲಕ ಮಾಡಲು ಪ್ರಯತ್ನಿಸಿದ್ದನ್ನು, ಮುಂದೆ ಕೆ. ಎಸ್. ನ ತಮ್ಮ ಸ್ವತಂತ್ರ ಕವನಗಳಲ್ಲಿ ಸಾಧಿಸಿ ತೋರಿಸಿದರು. ಸಮಸ್ತರೂ ಕಾವ್ಯವನ್ನು ಓದುವಂತಾಗಬೇಕೆಂಬ ಬಿ. ಎಂ. ಶ್ರೀ ಅವರ ಆಶಯ 'ಮೈಸೂರ ಮಲ್ಲಿಗೆ'ಯಲ್ಲಿ ಫಲಿಸಿದೆಯೆನ್ನಬಹುದು.

---

[24] ಇಹದ ಪರಿಮಳದ ಹಾದಿ. ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ ಪುಟ ೩

ಕೆ. ಎಸ್. ನ ಅವರ ಮೇಲೆ ಪ್ರಭಾವ ಬೀರಿದ 'ಒಲುಮೆ' ಕೃತಿಯ ಬಗ್ಗೆ ಹೀಗೆ ಹೇಳುತ್ತಾರೆ.

"ಒಲುಮೆ ಪ್ರಕಟವಾದದ್ದು ೧೯೩೨ ನವೋದಯ ಕಾವ್ಯದ ಸುಪ್ರಭಾತದಲ್ಲಿ. ಆ ಕಾಲದಲ್ಲಿ ಪ್ರೇಮಕ್ಕೆ ಮೀಸಲಾದ ಒಂದು ಕವನ ಸಂಗ್ರಹವನ್ನು ರಚಿಸಿದ ಪ್ರೇರಣೆ ತೀ. ನಂ. ಶ್ರೀ ಅವರಿಗೆ ಬಂದದ್ದು ಸಂಸ್ಕೃತ ಕವಿಗಳ ವಿಶ್ವಮನೋಹರವಾದ ಪ್ರೇಮ ಕವನಗಳ ಕಡೆಯಿಂದ ಉಭಯಭಾಷಾ ವಿಶಾರದಲೂ ಸಹೃದಯರೂ ಆದ ತೀ. ನಂ. ಶ್ರೀ ಇವುಗಳ ಪ್ರಭಾವಕ್ಕೆ ಒಳಗಾದದ್ದು ಆಶ್ಚರ್ಯವೇನಲ್ಲ. ತಾವು ತುಂಬಾ ಮೆಚ್ಚಿಕೊಂಡ ಅಂಥವನ್ನು ಆಯ್ಕೆ ಮಾಡಿ ಮೆಲುಕು ಹಾಕಿ ಕನ್ನಡಕ್ಕೆ ಅನುವಾದ ಮಾಡಿ 'ಬಿಡಿಮುತ್ತಿ'ನ ಅಂಕಿತದಲ್ಲಿ ಅವರು ಬೆಳಕಿಗೆ ತಂದರು. ಅದರ ಫಲವೇ 'ಒಲುಮೆ'.... ಪ್ರೇಮದ ಮೊದಲ ಸುಳಿವಿನಿಂದ ಹಿಡಿದು ನಡುವೆ ಸರಸ ವಿರಸ ಸಮಾಗಮ ನೋವು ನಲಿವುಗಳ ತನಕ ಬಗೆಬಗೆಯಾದ ಭಾವದ ಎಳೆಗಳನ್ನು ಸೂಕ್ಷ್ಮವಾಗಿ ಹಿಡಿದು ಆ ಭಾವಗಳಿಗೆ ಸರಳವಾದ ಶಿಷ್ಟವಾದ ಮತ್ತು ಅಚ್ಚುಕಟ್ಟಾದ ಕನ್ನಡವನ್ನು ಅಳವಡಿಸಿ ಅವರು ಒಂದು ಹೊಸ ರೂಪವನ್ನು ಕೊಟ್ಟರು.

ತೀ. ನಂ. ಶ್ರೀ ಅವರು 'ಒಲುಮೆ'ಯ ಅರಿಕೆಯಲ್ಲಿ ಹೀಗೆ ಹೇಳುತ್ತಾರೆ.

"ಪ್ರೇಮಗೀತಗಳನ್ನು ಬರೆಯುವುದೂ, ಬರೆದ ಮೇಲೆ ಬೆಳಕಿಗೆ ತರುವುದೂ ಎರಡು ಸಾಹಸ ಕಾರ್ಯಗಳೇ ಈ ಬಗೆಯ ಕವನಗಳಲ್ಲಿ ಔಚಿತ್ಯದ ಹದ ಎಲ್ಲೆ ಮೀರುತ್ತದೆ. ರಸ ಎಲ್ಲಿ ಹದಗೆಟ್ಟು ಹಾಸ್ಯಕರವಾಗುತ್ತದೆ ಎಂದು ಅರಿಯುವುದು ಲೇಖಕರಿಗಂತೂ ಬಲು ಕಷ್ಟ. ಆದರೂ ಭಾವಗಳು ಪ್ರೇರಿಸಿದಾಗ ಈ ವಿಚಾರಕ್ಕೆ ಅಷ್ಟು ಮನಸ್ಸು ಕೊಡದೆ, ನಾಲ್ಕು ಚರಣಗಳನ್ನು ಆಗಾಗ ಕೂಡಿಸಿದ್ದಾಯಿತು. ಅವುಗಳನ್ನು ಪ್ರಕಟಿಸುವುದಕ್ಕೆ ಮಾತ್ರ ನನ್ನ ಆಪ್ತಮಿತ್ರರ ಒಪ್ಪಿಗೆಯೂ. ಉತ್ತೇಜನವೂ ದೊರೆಯದಿದ್ದರೆ ಧೈರ್ಯ ಬರುತ್ತಿರಲಿಲ್ಲ. ಈಗ ಕೂಡ. ಈ ಚಿಕ್ಕ ಗೀತಾವಳಿಯನ್ನು ಸ್ವಲ್ಪ ಅಳುಕಿನಿಂದಲೇ ಸಹೃದಯರ ಮುಂದೆ ಇರಿಸಿದ್ದೇನೆ."[೨೫]

ತೀ. ನಂ. ಶ್ರೀಯವರ ಮಾತಿನಲ್ಲಿ ಪ್ರಣಯ ಗೀತೆಗಳ ರಚನೆ ಕಷ್ಟಕರವಾಗಿಯೂ, ಮುಜುಗರದ ಕಾರ್ಯವಾಗಿತ್ತೆಂದು ಗೋಚರಿಸುತ್ತದೆ. ತೀ. ನಂ. ಶ್ರೀಯವರು ಸವಾಲಾಗಿ ಸ್ವೀಕರಿಸಿದ ಕಾರ್ಯವು ಕೆ. ಎಸ್. ನ ಅವರಿಗೆ ಸ್ಫೂರ್ತಿಯ ಹೆದ್ದಾರಿಯಾಯಿತು. ಕೆ. ಎಸ್. ನ 'ಒಲುಮೆ'ಯ ಪ್ರಭಾವವನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡದ್ದು ಹೀಗೆ –

"ಕನ್ನಡದಲ್ಲಿ ಪ್ರೇಮದ ಬಗೆಗೆ ಕವನಗಳು ಹೇರಳವಾಗಿರಲಿಲ್ಲ. ಆಗ ಹೊಸ ವಿಷಯವನ್ನು ಆರಿಸಿಕೊಂಡು ಬರೆಯುವ ಹಂಬಲ ಪ್ರತಿಯೊಬ್ಬ ಕವಿಗೂ ಸಹಜ........... 'ಒಲುಮೆ' ಬಂದಿತ್ತು. ಅದರ ಪ್ರಭಾವ ನನ್ನ ಮೇಲೆ ಆಗಿದೆ. (ನನ್ನ ಮದುವೆಯಲ್ಲಿ ತೀ. ನಂ. ಶ್ರೀ ಅವರು ಕೊಟ್ಟ

---

[25] ತೀ. ನಂ. ಶ್ರೀ, 'ಒಲುಮೆ' ಪುಟ ೫

ಉಡುಗೊರೆ 'ಒಲುಮೆ') ಆ ಕವನ ಸಂಕಲನದಲ್ಲಿ ಸ್ವಂತ ಕವನಗಳವೆ. ಭಾಷಾಂತರಗಳು ಸ್ವಂತ ಕವನಗಳಂತಲೂ ಚೆನ್ನಾಗಿವೆ. ಕಾವ್ಯ ಪ್ರಪಂಚದಲ್ಲಿದ್ದ ತೆರವನ್ನು ತುಂಬಲು ಇದೊಂದು ಸಂಕಲನ ಸಾಲದೇನಿಸಿ ನಾನು ಪ್ರೇಮವನ್ನು ಕಾವ್ಯವಸ್ತುವನ್ನಾಗಿ ಎತ್ತಿಕೊಂಡೆ. ಬರೆದೆ. ನನ್ನ ಉದ್ದೇಶವಿದ್ದದ್ದು ನನ್ನ–ನಿಮ್ಮ ಪ್ರೇಮ ಜೀವನದ ಬಗ್ಗೆ ಬರೆಯುವುದು...... ಜನಕ್ಕೆ ರುಚಿಸುವ ಪ್ರೇಮಗೀತೆಗಳನ್ನು ಬರೆಯುವುದು – ದಿನನಿತ್ಯದ ಮಾತಿನಲ್ಲಿ, ಹಾಡಿಕೊಳ್ಳುವ ಹಾಗೆ".

ಕೆ. ಎಸ್. ನ ಉದ್ದೇಶ ಈಡೇರಿ ಸಾರ್ಥಕ್ಯವನ್ನು ಪಡೆದಿದೆ. ಈ ಕವಿಯ ಪ್ರೇಮಗೀತೆಗಳು ನಿರಕ್ಷರಸ್ಥರ ನಾಲಗೆಯ ಮೇಲೂ ನಲಿದಾಡುತ್ತಿದೆ. ಶೃಂಗಾರ ರಸದ ಪರಾಕಾಷ್ಠೆಯ ರಸಾನುಭೂತಿಯನ್ನು ರಸಿಕರೆಲ್ಲರೂ ಚಪ್ಪರಿಸಿ. ಚಪ್ಪರಿಸಿ ಸವಿದಿದ್ದಾರೆ.

'ಮೈಸೂರು ಮಲ್ಲಿಗೆ' ಪತ್ರ ರೂಪದಲ್ಲಿ ಮುನ್ನುಡಿ ಬರೆದಿರುವ ಡಿ. ವಿ. ಗುಂಡಪ್ಪನವರು ಕೆ. ಎಸ್. ನರಸಿಂಹಸ್ವಾಮಿಯವರ ಕವಿತೆಗಳ ವೈಶಿಷ್ಟ್ಯವನ್ನು ಹೀಗೆ ಗುರುತಿಸಿದ್ದಾರೆ : –

"ನಿಮ್ಮ ಪುಸ್ತಕವನ್ನು 'ಮಲ್ಲಿಗೆ' ಎಂದು ಕರೆದಿದ್ದೀರಿ. ಮಲ್ಲಿಗೆ ನನಗೆ ಬಹು ಇಷ್ಟವಾದ ಹೂ: ಜಾಜಿಯೂ ಹಾಗೆಯೇ ಮಲ್ಲಿಗೆಯಲ್ಲಿ ನಾಲ್ಕಾರು ಜಾತಿಯಂಟಲ್ಲವೆ? ಜಾಜಿಯಲ್ಲಿಯೂ ಹಾಗೆಯೇ. ನನಗೆ ತಿಳಿದಿರುವ ಮಲ್ಲಿಗೆಗಳಲ್ಲಿ ಇರುವಂತಿಗೆಯೆಂಬುದು ಬಹು ನಾಜೂಕಾದದ್ದು. ಈ ಎಲ್ಲ ಮಲ್ಲಿಗೆಳಗಿಂತ ನನಗೆ ತಿಳಿದಿರುವ ಜಾಜಿಯಲ್ಲಿ ಮೈಯ ಸುಕುಮಾರತೆ ಹೆಚ್ಚು. ಪರಿಮಳದ ನವುರು ಹೆಚ್ಚು. ನಿಮ್ಮ ಪದ್ಯಗಳನ್ನು ಓದುವಾಗ ನನಗೆ ಅಂಥ ಜಾಜಿಯ ಹೂವು ನೆನಪಿಗೆ ಬರುತ್ತದೆ. ಅದೇ ಹಗುರವಾದ ವಿಲಾಸ; ಅದೇ ಅದೇ ಕಟುವಲ್ಲದ ಸೌರಭ; ಸಾವಕಾಶವಾಗಿ ಗಮನ ಕೊಡುವವರಿಗೆ ಅದೇ ರೀತಿ ಮನಸ್ಸಿನಲ್ಲಿ ತುಂಬಿ ನಿಲ್ಲುವ ಸದ್ದಿಲ್ಲದ ಸಂತೋಷ. ಜೀವನಾನುಭವದ ಈ ಪದ್ಯಗಳಲ್ಲಿ ಓದುವವರಿಗೆ ತಮ್ಮ ಹೃದಯ ಧ್ವನಿಯೇ ಅಲ್ಲಿ ಹೊರಡುತ್ತಿರುವಂತೆ ಕೇಳ ಬಂದೀತೆಂದು ನನಗೆ ಅನ್ನಿಸುತ್ತದೆ. ಅಂಥ ಸ್ವಾಭಾವಿಕತೆ, ಅಂಥ ಸರಳತೆ, ಋಜುತೆ ಇವುಗಳನ್ನು ನೀವು ವರವಾಗಿ ಪಡೆದುಕೊಂಡಿದ್ದೀರಿ." ಡಿ. ವಿ. ಜಿ.ಯವರ ಈ ಮಾತುಗಳು ಕೆ. ಎಸ್. ನ ಅವರ ಕಾವ್ಯದ ಜೀವಸತ್ವಕ್ಕೆ ಹಾಗೂ ವ್ಯಕ್ತಿತ್ವಕ್ಕೆ ಕೈಗನ್ನಡಿಯಾಗಿ ನಿಲ್ಲುತ್ತವೆ. [೨೬]

ಕವನದಲ್ಲಿ ಕೆ. ಎಸ್. ನ ಪ್ರಾಮಾಣಿಕವಾದ ವ್ಯಕ್ತಿತ್ವ ಹೇಗೆ ಅನಾವರಣಗೊಂಡಿದೆ ಎಂಬುದನ್ನು ಸಂದರ್ಶನವೊಂದರಲ್ಲಿ ಹೀಗೆ ಹೇಳಿಕೊಂಡಿದ್ದಾರೆ.

"ನನ್ನ ಜೀವನದಲ್ಲಿ ಏನು ನಡೀತೋ ಅದನ್ನು ನಾನು ಹೇಳಿದೀನಿ. ನನ್ನ ಕಾವ್ಯದ ಮೂಲದ್ರವ್ಯ ನಡೆದಿರಬಹುದಾದಂಥ ಅನುಭವ. ಅದು ನನಗಾಗಿರಬಹುದು.

---

26 ಡಿ. ವಿ. ಜಿ. ಚಂದನ: ಕೆ.ಎಸ್.ನ. ಅಭಿನಂದನ ಗ್ರಂಥ – ೧೯೭೨ ಪು. ೩೦೦

ಮತ್ತೊಬ್ಬರಿಗಾಗಿರಹುದು. ನಮ್ಮ ಜೀವನದಲ್ಲಿ ಯಾವು ಯಾವುದು ಸಂಭವನೀಯವೋ ಅದನ್ನೆಲ್ಲ ಕಾವ್ಯ ಮಾಡಲು ಪ್ರಯತ್ನ ಪಟ್ಟವನು ನಾನು."

ಕೆ. ಎಸ್. ನ ಅವರ ಪ್ರಣಯಗೀತೆಗಳನ್ನು ಜಾನಪದಗೀತೆಗಳಂತೆ ಜನ ಹಾಡಿಕೊಳ್ಳುತ್ತಾರೆ. ಕವಿಯ ಹೆಸರು ತಿಳಿಯದೆಯೇ ಅವುಗಳನ್ನು ಹಾಡಿ ಸಂತೋಷಪಡುವ ಜನರಿದ್ದಾರೆ. ಧಾರವಾಡದ ಬಸ್‌ಸ್ಟ್ಯಾಂಡಿನ ಬಳಿಯ ಹುಡುಗನಾಗಬಹುದು, ಸಿಟಿ ಬಸ್ಸಿನಲ್ಲಿ ಕುಳಿತು ಗುಣುಗುಣಿಸಿಕೊಳ್ಳುವ ಚಿಗುರು ಮೀಸೆಯ ತರುಣನಾಗಬಹುದು ಅಥವಾ ಕಳೆ ಕೀಳುತ್ತ ಕೆಸರು ಗದ್ದೆಯಲ್ಲಿ ಹಾಡಿಕೊಳ್ಳುವ ಹೆಣ್ಣು ಮಗಳಾಗಿರಬಹುದು. ಹೀಗೆ ಅವರಿವರೆನ್ನದೆ ಎಲ್ಲರ ನಾಲಗೆಯ ಮೇಲೆ ಇವರ ಕವಿತೆಗಳು ನೆಲೆಯಾಗಿರುವುದರಿಂದಾಗಿ ಇವುಗಳಿಗೆ ಒಂದು ರೀತಿಯ ಜಾನಪದ ಗೀತೆಗಳ ಸ್ಥಾನ ಬಂದುಬಿಟ್ಟಿದೆ. ಕವಿಯೇ ಹೇಳುವಂತೆ "ನನ್ನ ಕೆಲವು ಕವನಗಳನ್ನು ಜನಪದ ಗೀತೆ ಎಂದು ಭಾವಿಸಿ ಹಾಡುವವರಿದ್ದಾರೆ. ನನ್ನನ್ನು 'ಜನಪದ ಕವಿ' ಅನ್ನೋ ಜನಾನು ಇದ್ದಾರೆ" ಅಷ್ಟರ ಮಟ್ಟಿಗೆ ಕೆ. ಎಸ್. ನ ಕವಿತೆಗಳು ಜನಸಮುದಾಯದೊಡನೆ ಒಂದಾಗಿ ಬಿಟ್ಟಿವೆ.

"ಬರ್ನ್ಸ್ ಕವಿಗೆ ಜನಪದ ಗೀತೆಗಳೆಂದರೆ ತುಂಬ ಇಷ್ಟ. ನಾನೂ ಅವನನ್ನು ಅನುಸರಿಸಿ ಹಳ್ಳಿಗೆ ಹೋಗಿ ಜನಪದ ಕವಿತೆಯ ಸೊಬಗನ್ನು ಹೃದಯದಲ್ಲಿ ತುಂಬಿಕೊಂಡೆ."

ವಿಮರ್ಶಕರೂ ಸಹ ಕೆ. ಎಸ್. ನ ಕವಿತೆಗಳು ಜಾನಪದ ಸಂಪ್ರದಾಯಕ್ಕೆ ಸೇರುವಂಥವು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಕೆಲವರು ಇದನ್ನು ಒಪ್ಪಲಾರರು.

ಕೆ. ವಿ. ನಾರಾಯಣ ಅವರು 'ಕೆ. ಎಸ್. ನ ಅವರ ಕಾವ್ಯ ಮತ್ತು ಭಾಷೆ' ಎಂಬ ತಮ್ಮ ಲೇಖನದಲ್ಲಿ ನರಸಿಂಹ ಸ್ವಾಮಿಯವರ ಕಾವ್ಯಕ್ಕೂ ಜಾನಪದ ಕಾವ್ಯಕ್ಕೂ ಇರುವ ವ್ಯತ್ಯಾಸವನ್ನು ನಿದರ್ಶನದ ಮೂಲಕ ವಿವರಿಸಲು ಪ್ರಯತ್ನಿಸಿದ್ದಾರೆ.

"ಇಂಗ್ಲೀಷ್ ಕವಿ ರಾಬರ್ಟ ಬರ್ನ್ಸ್‌ನಂತೆ ಜನಪದ ಪ್ರೇಮ ಗೀತೆಗಳಿಂದ ತಾವೂ ತಮ್ಮ ಪ್ರೇಮಗೀತೆಗಳಿಗೆ ಸ್ಫೂರ್ತಿ ಪಡೆದುದಾಗಿ ಕೆ. ಎಸ್. ನ ಒಂದು ಕಡೆ ಹೇಳಿಕೊಳ್ಳುತ್ತಾರೆ. (ಹೊನ್ನ ಬಿತ್ತೇವು ಹೊಲಕೆಲ್ಲ) ಅವರ ಪ್ರೇಮಗೀತೆಗಳನ್ನು ಓದಿದವರಿಗೆ ಅವು ಜನಪದ ಪ್ರೇಮ ಗೀತೆಗಳಿಂದ ಭಿನ್ನವಾದುದೆಂಬುದು ಸ್ಪಷ್ಟವಾಗಿರುತ್ತದೆ." [೨೭]

---

[27] ಇಹದ ಪರಿಮಳದ ಹಾದಿ: ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು. ಸಂ. ೫೧

ಕೆ. ವಿ. ನಾರಾಯಣ ತಮ್ಮ ಈ ಅಭಿಪ್ರಾಯವನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ.

ಜಾನಪದ :

'ಹಾರುವರ ಕೇರಿಯ ಜಗಲಿಯ ಮೇಲೆ
ಲೋಲುಕಿನ್ನರಿ ನುಡಿಸೋನೆ – ಗೆಣೆಕಾರ
ಮೊಗ್ಗಾಗಿ ಬಾರೋ ತುರುಬೀಗೆ'

ಕೆ. ಎಸ್. ನ :

"............ ಎಂದೆನ್ನ ಕೇಳಲೇಕೆ?
ಎನ್ನರಸ ಸುಮ್ಮನಿರಿ ಎಂದಳಾಕೆ"

ಗೆಣೆಕಾರ, ಎನ್ನರಸ – ಶಬ್ದಗಳು ಅಭಿವಾಚಿಸುತ್ತಿರುವ ಸಂವೇದನೆಯಲ್ಲಿನ ವ್ಯತ್ಯಾಸವನ್ನು ನಾರಾಯಣ ಅವರು ಗುರ್ತಿಸುತ್ತ ಕೆ. ಎಸ್. ನ ಅವರ ಸಂವೇದನೆ ಹೆಚ್ಚು ನಯವಾದದ್ದು. ನಾಗರಿಕವಾದದ್ದು. ಜಾನಪದ ಸಂವೇದನೆಯಂತೆ ಉತ್ಕಟವಾದುದಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಕೆ. ಎಸ್. ನ ಅವರ ಮೇಲೆ ಬರ್ನ್ಸ್‌ನ ಗಾಢವಾದ ಪ್ರಭಾವವಿದೆ ಎಂಬ ಮಾತು ಕನ್ನಡ ವಿಮರ್ಶೆಯಲ್ಲಿ ಚರ್ಚೆಯಾಗಿದೆ. ಕೆ. ಎಸ್. ನ ಅವರೇ ಇದನ್ನು ಒಪ್ಪಿಕೊಂಡು. ಈ ಮಾತಿಗೆ ಒಂದು ರೀತಿಯ ಅಧಿಕೃತತೆಯ ಮುದ್ರೆಯೊತ್ತಿಬಿಟ್ಟಿದ್ದಾರೆ. ಆದರೆ ಬರ್ನ್ಸ್ ಕಾವ್ಯಕ್ಕೂ ಕೆ. ಎಸ್. ನ ಅವರ ಕಾವ್ಯಕ್ಕೂ ಅಪಾರ ವ್ಯತ್ಯಾಸವಿದೆ. ಬರ್ನ್ಸ್‌ನಂತೆ ಕೆ. ಎಸ್. ನ ಸಹ ಪ್ರೇಮಕವಿತೆಗಳನ್ನು ಬರೆದಿದ್ದಾರೆಂಬುದು ನಿಜವಾದರೂ. ಮೂಲತಃ ಇವರಿಬ್ಬರ ಮನೋಭಾವ ಬೇರೆ ಬೇರೆಯಾದುದೇ ಆಗಿದೆ. ಹಾಗೇ ನೋಡಿದರೆ ಕೆ. ಎಸ್. ನ ಬರ್ನ್ಸ್‌ನಿಂದ ಪಡೆದದ್ದು ತುಂಬ ಕಡಿಮೆ. ತಮ್ಮ ಕಾವ್ಯ ಕಲ್ಪನೆಗೆ ಅಗತ್ಯವಿದ್ದ ಒಂದು ಮೂಲ ಚೌಕಟ್ಟೊಂದನ್ನು ಅವರು ಬರ್ನ್ಸ್‌ನಿಂದ ಪಡೆದಿದ್ದಾರೆಯೇ ಹೊರತು ಆತನ ಕಾವ್ಯದಿಂದ ಕೆ. ಎಸ್. ನ ನೇರ ಪ್ರಭಾವಿತರಾಗಿದ್ದಾರೆ. ಅನ್ನಿಸುವುದಿಲ್ಲ. ಬರ್ನ್ಸ್‌ನ ಪ್ರೇರಣೆಯೇನಿದ್ದರೂ 'ಪ್ರೇಮ'ವನ್ನು ವಸ್ತುವನ್ನಾಗಿ ಆರಿಸಿಕೊಂಡದ್ದರಲ್ಲಿ ಹಾಗೂ ಆತನಂತೆ ತಾನು 'ಜನತೆಯ ಕವಿ'ಯಾಗಬೇಕೆಂಬ ಹಂಬಲ ಹೊಂದಿದ್ದರಲ್ಲಿಯೇ ಹೊರತು, ಅಭಿವ್ಯಕ್ತಿ ವಿಧಾನದಲ್ಲಾಗಲೀ, ಮನೋಭಾವದಲ್ಲಾಗಲೀ, ಕೆ. ಎಸ್. ನ ಬರ್ನ್ಸ್‌ನಿಂದ ಪ್ರಭಾವಿತರಾಗಿಲ್ಲ. ಬದಲಾಗಿ ಆತನಿಗಿಂತ ಭಿನ್ನರಾಗಿದ್ದಾರೆ.

ಬರ್ನ್ಸ್‌ನ ಪ್ರೇಮ ಕವಿತೆಗಳನ್ನು ಓದಿದಾಗ ಅನುಭವಕ್ಕೆ ಬರುವ ಸಂಗತಿಯೆಂದರೆ ಆತನ ಸ್ವಚ್ಛಂದ ಮನೋಭಾವ. ನಿರ್ಭಿಡೆಯಿಂದ ಕೂಡಿದ ಆತನ ಅಭಿವ್ಯಕ್ತಿ ಪ್ರೇಮದ ಎಲ್ಲ ಸ್ವರಸಂಚಾರಗಳನ್ನೂ ಹಾದು ಬರುತ್ತದೆ. ಪ್ರೀತಿಯ ಉತ್ಕಟತೆ ಸಾಲು ಸಾಲುಗಳಲ್ಲೂ ಅನುಭವಕ್ಕೆ

ಬರುತ್ತದೆ. ಪ್ರೀತಿಗೋಸ್ಕರ ಆತ ಸಾಯಲೂ ಸಿದ್ಧ. ಜೀನ್ ಎಂಬ ತನ್ನ ಪ್ರೇಯಸಿಯೊಬ್ಬಳಿಗೆ ಆತ ಹೇಳುವ ಈ ಮಾತುಗಳನ್ನು ಗಮನಿಸಿ :

Content am I, if Heaven shall give
But happiness to thee :
And as wi'thee I'd wish to live
For thee I'd bear to die ..[28]

ಹಾಗೆಯೇ ಆತನ ಪ್ರೇಯಸಿಯೊಬ್ಬಳು ಅನಾರೋಗ್ಯದಿಂದಿದ್ದಾಗ ತನ್ನ ಜೀವ ತೆಗೆದುಕೊಂಡು ಆಕೆಯ ಜೀವವುಳಸಬೇಕೆಂದು ಬೇಡಿಕೊಳ್ಳುತ್ತಾನೆ:

Hear me, Pow'rs divine !
Oh in pity hear me !
Take ought else of mine
But my chlorise spare me .....[29]

ಪ್ರೇಮದ ಹುಚ್ಚು ಆವೇಶ. ವಿರಹ – ಹೀಗೆ ಗಂಡು ಹೆಣ್ಣಿನ ಪ್ರೀತಿಯ ಅನೇಕ ಸ್ವರಗಳು ಬರ್ನ್ಸ್‌ನಲ್ಲಿ ಉತ್ಕಟ ಅಭಿವ್ಯಕ್ತಿ ಪಡೆದಿದೆ. ಹುಡುಗಿಯರನ್ನು ಬಿಟ್ಟರೆ ಜಗತ್ತಿನಲ್ಲಿ ಮತ್ತೇನಿದೆ? ಎಂದು ಕೇಳುವ ಬರ್ನ್ಸ್ ಹೆಣ್ಣನ್ನು. ಹೆಣ್ಣಿನ ಚೆಲುವನ್ನು ಹೃದಯ ತುಂಬಿ ವೈಭವಿಸಿ ವರ್ಣಿಸುತ್ತಾನೆ :

Love sits in her smile, a wizard ensnaring
Enthron'd in her een he delivers his law:
And still to her charms she alone is a stranger
Her modest demeanor's the level of A [30]

ಇಂಥ ಉತ್ಕಟ ಭಾವ. ಮೋಹ ಕೆ. ಎಸ್. ನ ಅವರಲ್ಲಿ ಕಂಡುಬರುವುದಿಲ್ಲ. ಉತ್ಕಟ ಸನ್ನಿವೇಶವನ್ನೂ ಸಹ ಅವರು ಎಚ್ಚರವಹಿಸಿಯೇ ಚಿತ್ರಿಸುತ್ತಾರೆ. ಬರ್ನ್ಸ್‌ನಂತೆ ಎಗ್ಗಿಲ್ಲದೆ ಹೇಳುವ ಕ್ರಮ ಕೆ. ಎಸ್. ನ ಅವರಲ್ಲ. ಕೆ. ಎಸ್. ನ. ಅವರದು ಸಾಮಾಜಿಕವಾಗಿ ಒಪ್ಪಿತವಾದ ಪ್ರೀತಿಯ ಅಭಿವ್ಯಕ್ತಿ ಬರ್ನ್ಸ್‌ದಾದರೆ ಅಪ್ಪ ಸಮಾಜ ಲೋಕ ಎಲ್ಲವನ್ನೂ ಧಿಕ್ಕರಿಸಿ ನಡೆದ ರೀತಿ ಒಮ್ಮೆ ಆತ ತನ್ನ ಪ್ರೇಯಸಿಗೆ ಈ ಎಲ್ಲ ಸಾಮಾಜಿಕ ಕಟ್ಟುಪಾಡುಗಳಲ್ಲಿ ಪ್ರೀತಿಯನ್ನು ಮಾತ್ರ ಬಲಿಕೊಡಬೇಡ ಎನ್ನುತ್ತಾನೆ.

ಬರ್ನ್ಸ್ ಹೇಳುತ್ತಾನೆ :

---

[28] ಇಹದ ಪರಿಮಳದ ಹಾದಿ: ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು. ಸಂ. ೫೩

[29] ಅದೇ ಪುಟ

[30] ಇಹದ ಪರಿಮಳದ ಹಾದಿ: ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು. ಸಂ. ೫೩

Let not woman e'ver complain
Of inconsistency of Love;
Let not woman e'ver complain
Fickle man is apt to rove;

……………

Why then ask of silly man.
To oppose great Nature's plan?
We'll be constant while we can –
You can be no more, you know ……[31]

ಪ್ರಕೃತಿಯ ನಿಯಮವನು ಸಾಮಾನ್ಯ ಮನುಷ್ಯನಾದ ನಾನು ಮೀರುವುದು ಹೇಗೆ? ಎಂಬ ತಾತ್ವಿಕತೆಯ ಪ್ರಶ್ನೆ ಹಾಕುವುದರ ಮೂಲಕ ತಾನು ಬೇರೊಂದು ಹೆಣ್ಣನ್ನು ಬಯಸಿದರೆ ಹೆಣ್ಣು ದೂರುವುದು ಬೇಡ ಎನ್ನುವ ಬರ್ನ್ಸ್‌ಗೂ ಕೆ. ಎಸ್. ನ ಅವರಿಗೂ ಅಂತರ ಅಪಾರ.

ಪ್ರೀತಿಯ ಅನುಭವವನ್ನು ಆತ ಉಳಿದೆಲ್ಲ ತನ್ನ ಅನುಭವಗಳ ಜೊತೆ ಹೋಲಿಸಿ. ಈ ಪ್ರೀತಿ ಅನನ್ಯವಾದುದೆಂದು ಸಾರುತ್ತಾನೆ.

I have been blythe wil comrades dear;
I have been merry drinking;
I have been Joyful gathering gear;
I have been happy thinking; [32]

ಹೀಗೆ ಬರ್ನ್ಸ್ ಪ್ರೀತಿಯ ಹುಚ್ಚಿನಲ್ಲಿ ಮೈ ಮರೆಯುವಂಥವನು. ಅವನ ಇಡೀ ಪ್ರೇಮ ಕವಿತೆಗಳನ್ನು ಓದಿದಾಗ ಬರ್ನ್ಸ್ ನಾಯಕ ಒಬ್ಬ 'ಪ್ರೇಮಿ'ಯಾಗಿ ನಮಗೆ ಕಾಣಿಸುತ್ತಾನೆಯೇ ಹೊರತು ಈ ಸಮಾಜದ ಎಲ್ಲ ಜವಾಬ್ದಾರಿಗಳಿಂದ ನಿಯಂತ್ರಿತನಾದ ಒಬ್ಬ 'ಸಾಮಾಜಿಕ ವ್ಯಕ್ತಿ'ಯ ರೀತಿ ಕಾಣಿಸುವುದಿಲ್ಲ. ಆದರೆ ನರಸಿಂಹಸ್ವಾಮಿಯವರ ನಾಯಕ ಒಬ್ಬ 'ಸಾಮಾಜಿಕ ವ್ಯಕ್ತಿ'ಯಾಗಿ ನಮಗೆ ಮುಖ್ಯನಾಗುತ್ತಾನೆಯೇ ಹೊರತು ಸಾಮಾಜಿಕ ನೀತಿ ರೀತಿಗಳನ್ನೆಲ್ಲ ಗಾಳಿಗೆ ತೂರಿದ ಪ್ರೇಮಿಯ ರೀತಿಯಲ್ಲಿ ಆತ ಎಂದೂ ವರ್ತಿಸುವುದಿಲ್ಲ.

[31] ಇಹದ ಪರಿಮಳದ ಹಾದಿ: ಡಾ॥ ನರಹಳ್ಳಿ ಬಾಲಸುಬ್ರಹ್ಮಣ್ಯ. ಪು. ಸಂ. ೫೫

[32] ಅದೇ ಪುಟ

ಅಧ್ಯಾಯ – ೩

ಕೆ.ಎಸ್.ನ. ಪ್ರಣಯ ಗೀತೆಗಳ ಮೇಲೆ ಒಂದು ವಿಹಂಗಮ ನೋಟ

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ;
ಹೊಳೆಯ ಸುಳಿಗಳಗಿಂತ ಆಳ ಕಣ್ಣಿನ ಚೆಲುವು
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರುಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ಗಿರಿಯ ಮೇಲೆ
ಇಳಿದಂತೆ ಇರುಳ ಮಾಲೆ [೩೩]

ದಾಂಪತ್ಯದ ಯಶಸ್ಸಿಗೆ ಒಬ್ಬರನ್ನೊಬ್ಬರು ಅರಿಯುವುದು, ಪ್ರಮುಖ ಅಂಶವಾಗುತ್ತದೆ. ಪರಸ್ಪರ ಸೌಂದರ್ಯದ ಆಕರ್ಷಣೆಯೂ ಸಹ ಇಲ್ಲಿ ಮುಖ್ಯವಾಗಿರುತ್ತದೆ. ಕೆ.ಎಸ್.ನ. ಅವರು ತನ್ನ ಪ್ರಿಯೆಯು ಹೃದಯ ಸಾಮ್ರಾಜ್ಯದಲ್ಲಿ ಹೇಗೆ ಪ್ರತಿಷ್ಠಾಪನೆಯಾಗಿದ್ದಾಳೆ ಎಂಬುದನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಶೃಂಗಾರ ರಸವು ಈ ಪದ್ಯದ ಚರಣಗಳಲ್ಲಿ ಸಮ್ಮಿಳಿತವಾಗಿರುವುದನ್ನು ಕಾಣಬಹುದು. ಬೆಳ್ಳಗಿನ ಕೆನ್ನೆ, ಆಕರ್ಷಕ ನೋಟವನ್ನು ಬಿಂಬಿಸುವ ಕಣ್ಣು, ಕೆದರಿ ಬೆನ್ನ ಬೇಲೆ ಹರಡಿರುವ ಕೂದಲೂ ಸಹ ಇವರ ವರ್ಣನೆಯ ವಸ್ತುವಾಗಿದೆ. ಅಂದರೆ ಗಂಡನಿಗೆ ಹೆಂಡತಿಯ ಚಹರೆ ನೆನಪಿಗೆ ಬರುವುದು ಈ ಬಾಹ್ಯರೂಪದಿಂದಾಗಿದ್ದರೂ ಹೃದಯದಲ್ಲಿ ಅವಳ ಸ್ಥಾನ ಹೇಗಿದೆ ಎಂಬುದಕ್ಕೆ ಮೊದಲ ಪ್ರಾಶಸ್ತ್ಯವನ್ನು ನೀಡುತ್ತಾರೆ. ಪ್ರೇಮಿಗಳು ಪರಸ್ಪರ ಒಲಿಯುವುದಕ್ಕೆ ಕಾರಣಗಳೇನು? ಎಂಬ ವಿಚಾರವು ಇಲ್ಲಿ ಸುಪ್ತವಾಗಿದೆ. ಈ ಪದ್ಯದ ಮುಂದಿನ ಸಾಲುಗಳು ಆದರ್ಶ ದಾಂಪತ್ಯದ ಕೈಗನ್ನಡಿಯಾಗಿದೆ.

ನವಿಲೂರಿನೊಳಗೆಲ್ಲ ನೀನೆ ಬಲು ಚಲುವೆ।
ಅದಕೆ ನಮ್ಮಿಬ್ಬರಿಗೆ ನಾಳೆಯೇ ಮದುವೆ
ಬೆಳ್ಳಬೆಳ್ಳಗೆ ತೆಳ್ಳತೆಳ್ಳಗಿಹೆ ನೀನು;
ಬೇಟೆಗಾರನ ಬಿಲ್ಲನಂತಿರುವೆ ನೀನು,
ಒತ್ತಾಗಿ ಕಪ್ಪಾಗಿ ಬೆಳೆದಿರುವ ಹುಬ್ಬು
ಪಾರಿವಾಳದ ಕಣ್ಗೆ ನೆರಳನಿತ್ತಿಹುದು .[೩೪]..

---

[33] ಮಲ್ಲಿಗೆಯ ಮಾಲೆ – ಗೃಹಲಕ್ಷ್ಮೀ

[34] ಮಲ್ಲಿಗೆಯ ಮಾಲೆ – ಹಳ್ಳಿಯ ಚೆಲುವೆಗೆ

ತನ್ನ ನಲ್ಲೆಯಷ್ಟು ಸುಂದರಿ ನವಿಲೂರಿನಲ್ಲೇ ಇಲ್ಲ. ಹೀಗಾಗಿ ಅವಳನ್ನು ಮದುವೆಯಾಗಲು ಹಿಂದೆ ಮುಂದೆ ಕವಿ ಯೋಚಿಸಲಾರ. 'ರಸಿಕತೆ' ಪ್ರಣಯ ಪಕ್ಷಿಗಳಿಗೆ ಇರಬೇಕಾದ ಮೂಲಭೂತ ಸಂಗತಿ. ಬೇಟೆಗಾರನ ಬಿಲ್ಲಿಗೆ ನಲ್ಲೆಯರ ಶರೀರವನ್ನು ಹೋಲಿಸಿ ಉಪಮಾಲಂಕಾರದ ಸೊಗಡನ್ನು ಕವಿ ಇಲ್ಲಿ ಎತ್ತಿ ಹಿಡಿದಿದ್ದಾರೆ. ಪಾರಿವಾಳದ ಕಣ್ಣಿನಂತಿರುವ ಕಣ್ಣಿಗೆ ನೆರಳಾಗಿದೆ. ಕಪ್ಪಾಗಿರುವ ತಿದ್ದಿ ತೀಡಿರುವಂತಹ ಹುಬ್ಬು... ಆಹಾ! ಇಂಥಾ ವರ್ಣನೆಯು ಕೆ.ಎಸ್.ನ. ಅವರಿಗೆ ಮಾತ್ರ ಸಿದ್ಧಿಸಿರಬಹುದಾದ ಚಮತ್ಕಾರ. ರೇಶ್ಮೆ ನುಣ್ಣಗಿರುತ್ತದೆ ಎಂಬುದು ಜಗತ್ತೇ ಒಪ್ಪಿರುವ ಸಾರ್ವಕಾಲಿಕ ಸತ್ಯ. ಆದರೆ ನಲ್ಲೆಯ ಮೈ ರೇಶ್ಮೆಗಿಂತಲೂ ನುಣುಪಾಗಿದೆ. ಅಂತಹ ಸೌಂದರ್ಯರಾಶಿ ಸುಖವಾಗಿ ಇರಬೇಕಾದರೆ ಕವಿ (ನಲ್ಲ)ಯನ್ನೇ ನಂಬಿ ಆಶ್ರಯಿಸು" ಎಂಬುದು ಆಜ್ಞೆಯೋ, ವಿನಂತಿಯೋ, ... ? "ನಂಬಿ ನನ್ನನು ವರಿಸಿ ಸಂತಸದಿ ಬಾಳು" ಇಲ್ಲಿ ತಾನು ಸುಖವಾಗಿಡಬಲ್ಲೆ ಎಂಬ ಆತ್ಮ ವಿಶ್ವಾಸ ನಲ್ಲನಿಗಿದೆ. ಮುಂದುವರಿದು ಇದೇ ಕವನದಲ್ಲಿ ಹೇಳುತ್ತಾರೆ.

"ಪ್ರೀತಿಯೊಂದನೆ ನಿನ್ನ ಕೇಳುವುದು ನಾನು;
ಮುಂದೆ ಹೋಗೆನ್ನದಿರು ನನ್ನ ಮನದರಸಿ.

ಎಲ್ಲ ಸಂಪತ್ತಿಗಿಂತಲೂ ಮುಖ್ಯವಾದದದು ಪ್ರೀತಿ. ಈ ಪ್ರೀತಿಯ ಮುಂದೆ ಉಳಿದುದೆಲ್ಲವೂ ನಗಣ್ಯ. ತನ್ನ 'ಮನದ ರಾಣಿ' ಎಂದು ಸಂಬೋಧಿಸಿ ಪ್ರಣಯದ ನಿವೇದನೆ ಮಾಡಿರುವುದು ನವಚೇತನದ ಪ್ರಣಯದ ಉತ್ಸಾಹವು ಇಲ್ಲಿ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಇಲ್ಲಿ ಅಶ್ಲೀಲತೆಗೆ ಆಸ್ಪದವಿಲ್ಲ. ಪವಿತ್ರವಾದ ಪ್ರೀತಿಗಾಗಿ ಕವಿ ಹಂಬಲಿಸುತ್ತಾನೆ. ಆ ಪ್ರೀತಿ ನಲ್ಲನ ಕಡೆಯಿಂದ ಪ್ರವಹಿಸಿದ್ದಾಗಿದೆ. ನಲ್ಲೆ ಸಮ್ಮತಿಸುವುದೊಂದು ಬಾಕಿ ಇದೆ. ಹಾಗಂತ ಇಲ್ಲಿ ಬಲವಂತವಿಲ್ಲ. ಅವಳನ್ನು ಚೆನ್ನಾಗಿ ನೋಡಿಕೊಳ್ಳಬಲ್ಲೆ ಎಂಬ ಭರವಸೆಯನ್ನು ನೀಡಲಾಗಿದೆ. ಆ ಭರವಸೆ ಹುಸಿಭರವಸೆ ಅಲ್ಲ ಎಂಬುದು ನಲ್ಲೆಗೆ ಭಾವನಾತ್ಮಕವಾಗಿ ನಿವೇದಿಸಲಾಗಿದೆ. ತನ್ನ 'ಮನದರಸಿ' ಎಂಬ ಸ್ಥಾನ ನೀಡಿ ಹೆಣ್ಣಿಗೆ ಗಂಡು ಕೊಡಬಹುದಾದ. ಅಥವಾ ಅವಳು ಅವನಿಂದ ನಿರೀಕ್ಷಿಸಬಹುದಾದ ಜೀವನಕ್ಕೆ 'ಭದ್ರತೆ'ಯನ್ನು ನಾವು ಈ ಕವನದಲ್ಲಿ ಕಾಣಬಹುದು.

ಪಯಣಿಸುವ ವೇಳೆಯಲಿ ಒಂದು ಅಡಿಗೆರಗಿ
ಮುಂದೆ ನಿಂದಳು ನನ್ನ ಕೈಹಿಡಿದ ಹುಡುಗಿ
ಇನ್ನೆಂದು ಬರುವಿರೆಂದೆನ್ನ ಕೇಳಿದಳು,
'ಇನ್ನೊಂದು ತಿಂಗಳಿಗೆ' ಎಂದು ಹೇಳಿದನು .[೩೫].
ಹಿಂದಿರುಗಿ ಬಂದೆನ್ನನೊಂದೆ ಮಾತಿನಲಿ
ತಿಂಗಳಾಯಿತೆ ? ಎಂದಳೆನ್ನ ಹೊಸ ಹುಡುಗಿ!

[35] ಮಲ್ಲಿಗೆಯ ಮಾಲೆ – ತಿಂಗಳಾಯಿತೆ

ಪ್ರಣಯಗಳ ವಿರಹವೇದನೆಯನ್ನು ಕವಿ ಕಾಳಿದಾಸನು ಸುಂದರವಾಗಿ ಚಿತ್ರಸಿದ್ದಾನೆ. ಅಂತೆಯೇ ಕೆ.ಎಸ್.ನ. ಕವನ ವಿರಹದ ವೇದನೆ ಇಲ್ಲಿ ಸುಂದರವಾಗಿ ಮೂಡಿಬಂದಿದೆ. ನಲ್ಲನು ಏರಬೇಕಾದ ಬಂಡಿ ಹೊರಟು ಹೋಗಿದೆ. ಹೀಗಾಗಿ ನಲ್ಲೆಯನ್ನು ಕಾಣಲೆಂದು ಆತನು ಮರಳ ಬರುತ್ತಾನೆ. ಈ ಮುಂಚೆ ಮಾತುಕೊಟ್ಟಂತೆ ಮರಳ ಬರುವುದು ತಿಂಗಳಾಗಬಹುದೆಂದು. ಕೆಲವೇ ಗಂಟೆಗಳಲ್ಲಿ ಅವನ ಪುನರಾಗಮನದಿಂದ ಅವಳು ಕೇಳದ ಪ್ರಶ್ನೆ ತಿಂಗಳಾಯಿತೆ? ಆ ಕೆಲವು ಗಂಟೆಗಳು ಅವಳಿಗೆ ಒಂದು ತಿಂಗಳನ್ನೇ ಕಳೆದಂತಾ ಅನುಭವ. ವಿರಹದ ಒಂದೊಂದು ಗಳಿಗೆಯೂ ಅವಳ ಪಾಲಿಗೆ ಅಸಹನೀಯ. ಚಿಂತಿತವಾದ ಭಾರವಾದ ಹೃದಯದಲ್ಲಿ ನಿಟ್ಟಿಸಿರನ್ನು ಬಿಡುತ್ತಾ. ನಲ್ಲನಿಗಾಗಿ ಪರಿತಪಿಸುತ್ತ ಹಂಬಲಿಸುವ ಕ್ಷಣ ಚಿತ್ರಹಿಂಸೆಯನ್ನು ನೀಡುವಂತದ್ದು. ಹೀಗಾಗಿ ಅವನ ಆಕಸ್ಮಿಕ ಆಗಮನದ ಆ ಮಧ್ಯಂತರದ ಅವಧಿಯಲ್ಲಿ ನಲ್ಲೆಗೆ ಒಂದು ತಿಂಗಳೇ ಕಳೆದು ಹೋದಂತಾ ಅನುಭವವಾಗಿತ್ತು! ವಿಪ್ರಲಂಭ ಶೃಂಗಾರದ ಕ್ಷಣವನ್ನು ಪ್ರಸುತ ಕವನವು ಅಭಿವ್ಯಕ್ತಿಸಿದೆ.

ನಿನ್ನ ಪ್ರೇಮದ ಪರಿಯ ನಾನರಿಯೆ ಕನಕಾಂಗಿ,
ನಿನ್ನೊಲಿದೆ ನನ್ನ ಮನಸು
ಹುಣ್ಣಿಮೆಯ ರಾತ್ರಿಯಲಿ ಉಕ್ಕುವುದು ಕಡಲಾಗಿ
ನಿನ್ನೊಲುಮೆ ನನ್ನ ಕಂಡು [೩೬]

ನಲ್ಲೆಯ ಪ್ರಣಯದ ಮಿತಿ ಎಷ್ಟಿದೆ ಎಂಬುದನ್ನು ನಲ್ಲನಿಗೆ ಅರಿಯುವ ಸಾಮರ್ಥ್ಯವಿಲ್ಲ. ಏನಾಗಲೀ ಅವಳ ಮೇಲೆಯೇ ಅವನ ಜೀವ. ಕನಸು. ಮನಸ್ಸು ಎಲ್ಲಾ ಬೆರೆತು ಹೋಗಿದೆ. ಹೃದಯ ಮಂದಿರದಲ್ಲಿ ಆ ಹೆಣ್ಣಿನ ದಿವ್ಯ ಮೂರ್ತಿಯನ್ನು ಕಡೆದು ಪೂಜಿಸುವ. ಆರಾಧಿಸುವ ಉತ್ಕಟ ಪ್ರೇಮವಿಲ್ಲದೆ. Coleridge (1772-1834) : Love ಎಂಬ ಪದ್ಯವನ್ನು ಅನುವಾದಿಸಿರುವ ಬಿ. ಎಂ. ಶ್ರೀಯವರು ತಮ್ಮ ಪದ್ಯದ ಶೀರ್ಷಿಕೆಯಾಗಿ ಬಳಸಿಕೊಂಡಿರುವ ಪದ 'ಕನಕಾಂಗಿ'. ಅಂತೆಯೇ ಕೆ.ಎಸ್.ನ ತನ್ನ ನಲ್ಲೆಯನ್ನು 'ಕನಕಾಂಗಿ' ಎಂದು ಸಂಬೋಧಿಸಿರುವುದು ಸಾಂದರ್ಭಿಕವಾಗಿ ಬಹಳ ಸಮರ್ಪಕವಾಗಿದೆ:

ತನ್ನದಾಗೊಂದರಿಯಳವಳು ಕೊರಗೆಂಬುದನು
ನನ್ನಾಶೆ, ಕನಕಾಂಗಿ ನನ್ನ ಜೀವ!
ಅವಳಿಗೆನ್ನಲಿ ಮೆಚ್ಚು ಹೆಚ್ಚು ನಾ ಹಾಡಿದರೆ
ಅವಳನೆದಗರಗಿಸುವ ಹಾಡುಗಳು [೩೭]
"ಅಲೆಯಿಡುವ ಮುತ್ತಿನಲೆ ಕಾಣುವುದು
ನಿನ್ನೊಲುಮೆ ಯೊಳಗುಡಿಯ ಮೂರ್ತಿ ಮಹಿಮೆ"

---

36 ಮಲ್ಲಿಗೆಯ ಮಾಲೆ-ಗೆ

37 ಇಂಗ್ಲೀಷ್ ಗೀತೆಗಳು – ಕನಕಾಂಗಿ.ಬಿ. ಎಂ. ಶ್ರೀ. ಪು ೭೮

ಈ ಪ್ರಿಯತಮೆಯನ್ನು ತನ್ನ ಹೃದಯದಲ್ಲಿ ಮೂರ್ತಿಯಂತೆ ಕಲ್ಪಿಸುವುದೂ ಸಹ ಉತ್ಕಟ ಪ್ರೇಮದ ಸಂಕೇತವೆಂಬಂತೆ ಕಾಣುತ್ತದೆ.

ನಿನ್ನ ಚಿಂತೆಯಲಿಂತು ನಾನೇಕೆ ಮುಳುಗಿರುವೆನು
ನಿನ್ನ ಮೂರ್ತಿಯನೆದೆಯ ಪೀಠದಲಿ ನಿಲಿಸಿರುವೆನು?
ನಿನ್ನ ಮೋಹದ ಮಾಯೆಯೇಕೆ ಹಗಲಿರುಳೆನ್ನದೆ
ನನ್ನ ಜೀವನಪಥವನೆಡೆಬಿಡದೆ ಕವಿದಿರುವುದು?[೩೮]

ಈ ಕವನದಲ್ಲಿ ತೀ.ನಂ. ಶ್ರೀ ಪ್ರೇಮದ ಲೋಕದಲ್ಲಿ ಆಳವಾಗಿ ಸೇರಿ ಹೋಗಿದ್ದಾರೆ. ಪ್ರಣಯದ ಗುಂಗಿನಲ್ಲಿ ಮತ್ತೇನೂ ಕಾಣಲಾರದು. ತೀ.ನಂ.ಶ್ರೀ 'ಏಕೆ' ಪದ್ಯದಲ್ಲಿ ಪ್ರಣಯದ ತನ್ಮಯತೆಯನ್ನು ಸುಂದರವಾಗಿ ಮೂಡಿಸಿದ್ದಾರೆ. ಅದರಂತೆ ಕೆ. ಎಸ್. ನ ಈ ತನ್ಮಯತೆಯನ್ನು ಹೆಚ್ಚು ಭಾವನಾತ್ಮಕವಾಗಿ ಚಿತ್ರಿಸಿದ್ದಾರೆ. – 'ಗ' ಈ ಕವನವು ಪ್ರಣಯದ ಪರಿಕಲ್ಪನೆಗೆ ಹೊಸ ವೇದಿಕೆಯನ್ನು ಸೃಷ್ಟಿಸಿದೆ.

ಒಮ್ಮೆ ನಕ್ಕು ನನ್ನ ನಗಿಸು
    ಬಿಮ್ಮೆನುತಿಹುದೆನ್ನ ಮನಸು.
ಮುನ್ನಿಲ್ಲದ ಚಿನ್ನಗನಸು
    ನಿನ್ನೆ ತಾನೆ ಕೈಗೂಡಿತು

ನಕ್ಕು ಬಿಡು ಚಿಕ್ಕ ಮುತ್ತು.
    ಸುರಿದು ಹೋಗಲಿ.
ಪಕ್ಕನೊಮ್ಮೆ ನಕ್ಕುಬಿಡು.
    ಚಿಂತೆ ತೊಲಗಲಿ.[೩೯]

ಪ್ರಣಯದಲ್ಲಿ ಮಧುರವಾದ ನವಿರಾದ ಭಾವನೆಗಳಿಗೆ ಮಾತ್ರ ಅವಕಾಶವೆಂದು ಭಾವಿಸಲಾಗದು. ಇಲ್ಲಿ ದುಃಖವೂ ಬಂದು ತೇಲಿ ಹೋಗುತ್ತದೆ. ಹುಸಿ ಕೋಪವು ಇಣುಕು ಹಾಕುತ್ತದೆ. ಆದಾಗಲೇ ಪ್ರಣಯಿಗಳು ಇನ್ನೂ ಹತ್ತಿರವಾಗುತ್ತಾರೆ. ಒಬ್ಬರಲ್ಲಿ ಒಬ್ಬರು ಬೆರೆತು ಹೋಗುತ್ತಾರೆ.

ಇದಕ್ಕೆ ಬೇಂದ್ರೆಯವರು ಹೀಗೆ ಹೇಳುತ್ತಾರೆ:

ನನ್ನ ಬೆಲ್ಲದಚ್ಚಿನ ಬೊಂಬೆಯೇ
ನೀನು ನಕ್ಕರೊಂದು ರುಚಿ:
ನೀನು ಅತ್ತರೊಂದು ರುಚಿ:

---

38 ಒಲುಮೆ–ಪ್ರೊ. ತಿ. ನಂ. ಶ್ರೀಕಂಠಯ್ಯ. ಏಕೆ – ಪು ೧೩

39 ಮಲ್ಲಿಗೆಯ ಮಾಲೆ– ನಕ್ಕು ನಗಿಸು, ಪು. ೧೨

ಬೇಂದ್ರೆಯವರಿಗೆ ಪ್ರಣಯಿಗಳು ನಕ್ಕರಾಗಲೀ, ಅತ್ತರಾಗಲೀ ಬೇಸರವಿಲ್ಲ. ಎರಡರ ಸಮನ್ವಯವೇ ಜೀವನದ ಹೂರಣ ಎಂದಿಲ್ಲಿ ಭಾವಿಸಿದ್ದಾರೆ. ಆದರೆ ಕೆ.ಎಸ್.ನ ಕವನವು ಸ್ವಲ್ಪ ಭಿನ್ನತೆಯನ್ನು ತೋರಿದೆ. ನಲ್ಲೆ ದುಃಖಿತಳಾಗಿರುವುದನ್ನು ನೋಡಲಾಗುತ್ತಿಲ್ಲ. ಕಳೆಗುಂದಿದ ಮುಖವನ್ನು ಎದುರಿಸುವ ಶಕ್ತಿಯಲ್ಲ. ಚಿಂತೆಯನ್ನು ನಿರಂತವಾಗಿ ಹಿಡಿದಿಟ್ಟುಕೊಳ್ಳಲು ಅವರ ವಾತ್ಸಲ್ಯಮಯ ಹೃದಯ ಒಪ್ಪಲಾರದು. ಆ ನಲ್ಲೆಯ ದುಃಖವು ನಲ್ಲನ ಮನಸ್ಸನ್ನು ಘಾಸಿಗೊಳಿಸಿದೆ. ಅವಳ ದುಃಖವು ಈತನಲ್ಲಿಗೆ ವರ್ಗಾವಣೆಯಾಗಿ ಸುಖೀ ಜೀವನಕ್ಕೆ ಪ್ರಹಾರ ಮಾಡಲು ಸಂಚು ಹಾಕಿದೆ. ಇದನ್ನು ನಲ್ಲನು ಚೆನ್ನಾಗಿ ಮನಗಂಡಿದ್ದಾನೆ. ಈ ಚಿಂತೆಗೆ ಮದ್ದೆಂದರೆ ನಗು. ಅವಳು ಒಂದು ಕ್ಷಣವೂ ತಡಮಾಡದೇ ನಗಬೇಕು. ಆಗಷ್ಟೇ ನಲ್ಲನಿಗೂ ಸಮಾಧಾನ. ಸರಸ-ಸಲ್ಲಾಪಕ್ಕೆ ಒಂದು ಮುತ್ತು ಬೇಕಿದೆ. ಅವಳು ಕೊಡುವ ಸಿಹಿ ಮುತ್ತು ಇವನ ಹೃದಯಕ್ಕೆ ಸಾಂತ್ವನವನ್ನು ಕೊಡುವ ಇಂಜಕ್ಷನ್. ಆ ಮುತ್ತು ಅವಳ ಭಾರವಾದ ಮನಸ್ಸನ್ನು ತಿಳಿಯಾಗಿಸುವ ದಿವ್ಯೌಷಧ. ತನ್ಮೂಲಕ ಚಿಂತೆ ತೊಲಗುತ್ತದೆ ಎಂಬ ದೂರಾಲೋಚನೆ ಇಲ್ಲಿ ಕೆ.ಎಸ್.ನ ವಾತ್ಸಲ್ಯಮಯ ಹೃದಯದ ಅನಾವರಣಗಾಗಿದೆ.

ನಿಮ್ಮ ತುಟಿಗಳಲಿರಲು
ತಾಂಬೂಲರಾಗ,
ನನ್ನ ತುಟಿ ಕೆಂಪಾದು
ದೇಕಿನಿಯ ಬೇಗ?[೪೦]

ಪ್ರಣಯಿಗಳು ಕೇವಲ ಮಾತುಕತೆಯ ಮೂಲಕ ತಮ್ಮ ಪ್ರೇಮವನ್ನು ನಿವೇದಿಸಿಕೊಳ್ಳಬೇಕೆಂಬ ನಿಯಮವೇನಿಲ್ಲ. ಅವರಲ್ಲಿನ ಪರಸ್ಪರ ಭಾವನೆಗಳನ್ನು ಆಂಗಿಕವಾಗಿಯೂ ಪತ್ತೆ ಹಚ್ಚಬಲ್ಲರು ಎಂಬುದನ್ನು ಕೆ.ಎಸ್.ನ ಇಲ್ಲಿ ಸಂವೇದನಾತ್ಮಕವಾಗಿ ಬಿಂಬಿಸಿದ್ದಾರೆ. ರಸಿಕತೆಯ ಭಾಗವಾಗಿ ತಾಂಬೂಲವನ್ನು ಹಿಂದಿನಿಂದಲೂ ಮೆಲ್ಲುತ್ತಿದ್ದರು. ಸಂಗೀತದ ಯಾವುದೋ ಒಂದು ರಾಗ 'ತಾಂಬೂಲರಾಗ' ಎಂದು ಭಾವಿಸಬೇಕಿಲ್ಲ. ಪ್ರಣಯದ ಸೇತು ತುಟಿಯಂಚಿನಲ್ಲಿ ಇಣುಕಿದೆ. ಅದರಿಂದ ನಲ್ಲೆಯು ಉತ್ತೇಜಿತಳಾಗಿದ್ದಾಳೆ. ನಾಚಿಕೆಯಿಂದ ಅವಳ ಮುಖ ವಿವರ್ಣವಾಗಿದೆ. ಆ ಭಾವನೆಗಳನ್ನು ಅದುಮಿಡಲಾಗದೇ ತುಟಿಯು ರಂಗೇರಿದೆ. ತನ್ನ ಮನದನ್ನನೊಂದಿಗೆ ಆ ಸವಿಯನ್ನು ಹಂಚಿಕೊಳ್ಳುವ ತುಡಿತ ಅವಳಿಗೆ ಹೆಚ್ಚಾಗಿದೆ.

ಸವಿ ಸುಖದೀ ಗಳಿಗೆ ಬಂದು ಮೆಲ್ಲಗೆ ಬಳಿಗೆ
ಪಲ್ಲವಿಸುತಿದೆ ಎದೆಯ ಚೈತ್ರದಂತೆ;
ಇಂದು ನಾ ಮೈಮರೆತು ಒಲೆಯುವೆ ಸೊಗ ಬೆರೆತು,
ಆಸೆಗಳ ಚಿವುಟದಿರು ಹಕ್ಕಿಯಂತೆ,[೪೧]

---

[40] ಮಲ್ಲಿಗೆಯ ಮಾಲೆ- ಪಗಡೆಯಾಟ, ಪು – ೧೫

ಕವಿ ಕೆ. ಎಸ್. ನಿಸಾರ ಅಹಮದ್ "ಆಸೆಯನು ಈಡೇರಿಸು ಇಂದು ನಾ ಆ ಸುಖದಲ್ಲಿ ಮೈ ಮರೆಯುತ್ತೇನೆ ಎನ್ನುತ್ತಾರೆ" ಒಟ್ಟಿನಲ್ಲಿ ಪ್ರಣಯಿಗಳಿಗೆ ಬೇರೆ ಪ್ರಪಂಚದ ಗೊಡವೆ ಇಲ್ಲ. ಪ್ರೇಮ ಲೋಕವಿದ್ದಾಗ ಅದರಲ್ಲಿ ಮಿಂದು ಪುನೀತರಾಗುತ್ತಾರೆ ಎಂಬುದನ್ನು ನರಸಿಂಹಸ್ವಾಮಿಯವರು ಮನಮೋಹಕವಾಗಿ ಚಿತ್ರಿಸಿದ್ದಾರೆ.

ಹೊಸಿಲ ಬಳಿ ಬಂದೊಡನೆ ಬಾಗಿಲನು ತೆರೆವಾಕೆ
'ಹೆಸರೇನು?' ಎನುವಾಕೆ ಮನೆಯೊಳಿಲ್ಲ.
ಬಿಸಿಲೊಳಗೆ. ನೆಳಲೊಳಗೆ ಪಕ್ಕದಲಿ ನಗುವಾಕೆ
ಹಸರು ಕುಪ್ಪುಸದಾಕೆ ಮನೆಯೊಳಿಲ್ಲ.

ಆದಿ ಪ್ರಾಸವನ್ನು ಹೊಂದಿರುವ 'ಅಕ್ಕರೆಯ ದನಿಯಾಕೆ' ಎಂಬ ಕವನದ ಈ ಚರಣವು ವಿರಹದ ಬೇಗುದಿಯನ್ನು ಮನದಟ್ಟು ಮಾಡುತ್ತದೆ. ದಾಂಪತ್ಯ ಗೀತೆ ಇದಾದರೂ ಪ್ರಣಯದ ಸವಿನೆನಪು ಇಲ್ಲಿ ಇಣುಕಿದೆ. ಕಷ್ಟ-ಸುಖದಲ್ಲಿ ಸಮಾನವಾಗಿ ಪಾಲ್ಗೊಳ್ಳುತ್ತಿದ್ದ ಸಖಿ ಮನೆಯಲ್ಲಿಲ್ಲದೇ ಹೋದಾಗ ಸಖನೊಬ್ಬನೇ ಪರದಾಡುವ ಸ್ಥಿತಿಯನ್ನು ಇಲ್ಲಿ ಚೆನ್ನಾಗಿ ವರ್ಣಿಸಲಾಗಿದೆ. ಯಾವುದೇ ವಸ್ತು/ವ್ಯಕ್ತಿ ಹತ್ತಿರವಿದ್ದಾಗ ಅದರ ಮಹತ್ವವು ಅಷ್ಟಾಗಿ ಗೋಚರಿಸುವುದಿಲ್ಲ. ಆದರೆ ಇಲ್ಲಿ ದೂರವಿರುವ ವ್ಯಕ್ತಿ ನಲ್ಲನ ಮನದನ್ನೆ ಅಕ್ಕರೆಯ ಧ್ವನಿಯಿಂದ ಸಕ್ಕರೆಯಂತಾ ಮಾತನ್ನಾಡುತ್ತ ನಲ್ಲನನ್ನು ಸಂತೃಪ್ತಿಗೊಳಿಸುತ್ತ. ಸದಾ ಆತನ ಶ್ರೇಯೋಭಿವೃದ್ಧಿಯನ್ನೇ ಬಯಸುತ್ತಿದ್ದ ಅವಳೀಗ ಅಲ್ಲಿಲ್ಲ. ಅವಳ ಬರುವಿಕೆಗಾಗಿ ಕಾಯುತ್ತಿರುವ ನಲ್ಲನ ಪರಿತಾಪ ಹೇಳತೀರದು. ಈ ಕವನವು ಸಾಮಾಜಿಕವಾಗಿ ಒಂದು ಸಂದೇಶವನ್ನು ನೀಡುತ್ತದೆ. ವಿವಾಹ ವಿಚ್ಛೇದನದಂತಾ ಪ್ರಕರಣಗಳು ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಕೆ.ಎಸ್.ನ ಈ ಕವನವು ಅಂತವರಿಗೆ ಪರಸ್ಪರರ ಮಹತ್ವದ ಬಗ್ಗೆ ತಿಳಿಹೇಳುತ್ತದೆ.

ರಾಯರು ಬಂದರು ಮಾವನ ಮನೆಗೆ
ರಾತ್ರಿಯಾಗಿತ್ತು;
ಹುಣ್ಣಿಮೆ ಹರಸಿದ ಬಾನಿನ ನಡುವೆ
ಚಂದಿರ ಬಂದಿತ್ತು – ತುಂಬಿದ
ಚಂದಿರ ಬಂದಿತ್ತು[೪೨]

ತನ್ನ ನಲ್ಲೆಯನ್ನು (ಹೆಂಡತಿ) ಯನ್ನು ನೋಡಿ ಬರಬೇಕೆಂಬ ತವಕ. ಮಾವನ ಮನೆಯಲ್ಲಿ ಹಬ್ಬದ ಸಂಭ್ರಮ. ವಿವಿಧ ಬಗೆಯ ಭಕ್ಷ್ಯಗಳಿರುವ ಮೃಷ್ಟಾನ್ನ, ಇದ್ಯಾವುದರ ಜ್ಞಾನವು ನಲ್ಲನಿಗಿಲ್ಲ.

---

[41] ಕೆ. ಎಸ್. ನಿಸಾರ್ ಅಹಮದ್-೭೫ ಭಾವಗೀತೆಗಳು. ನನ್ನ ನಲಿವಿನ ಬಳ್ಳಿ, ಪು. – ೨೩

[42] ಮಲ್ಲಿಗೆಯ ಮಾಲೆ – ಮಾವನಮನೆಯಲ್ಲಿ

ಎದುರಿಗಿರುವ ಗಸಗಸೆ ಪಾಯಸವನ್ನು ಹೀರಿ ಚಪ್ಪರಿಸುವ ಮನಸ್ಸಿಲ್ಲ. ಪದುಮಳಿಗಾಗಿ ಕಾತರಿಸುತ್ತಿದ್ದಾನೆ. ಅವಳ ಧ್ವನಿಯನ್ನು ಕೇಳಲು ಹಾತೊರೆಯುತ್ತಿದ್ದಾನೆ. ರಾತ್ರಿಯೆಲ್ಲ ತನ್ನ ನಲ್ಲೆಗಾಗಿ ಕಾತರಿಸುತ್ತಿರುವಾಗಲೇ ಬೆಳಗ್ಗೆಯೂ ಆಗಿ ಬಿಟ್ಟಿತ್ತು. ಬಂದ ದಾರಿಗೆ ಸುಂಕವಿಲ್ಲದಂತೆ ನಿರಾಸೆಯಿಂದ ತನ್ನ ಮನೆಗೆ ಹೊರಡಲು ಸಿದ್ಧನಾದ ನಲ್ಲ. ಸ್ನಾನ ಮುಗಿಸಿ ಹೂ ಮುಡಿದು ನಲ್ಲನ ಕೋಣೆಗೆ ಬಂದ ನಲ್ಲೆ... ಹಳ್ಳಿಯ ಕೌಟುಂಬಿಕ ಜೀವನ ಚಿತ್ರಣ ಒಂದೆಡೆಯಾದರೆ ವಿಪ್ರಲಂಭ ಸಂಭೋಗದ ಶೃಂಗಾರ ರಸ ಇನ್ನೊಂದೆಡೆ. ಕಥನ ಕವನದಂತೆ ನವಿರು ನವಿರಾಗಿ ಹೆಣೆದಿರುವ ಈ ಕವನವು ಕೆ. ಎಸ್. ನ ಅವರ ಕಲ್ಪನಾ ಶಕ್ತಿಯ ಅಗಾಧತೆಯನ್ನು ಎತ್ತಿ ತೋರಿಸುತ್ತದೆ.

ತೌರಸುಖದೊಳಗೆನ್ನ ಮರೆತಿಹಳು ಎನ್ನದಿರಿ
ನಿಮ್ಮ ಪ್ರೇಮವ ನೀವೆ ಒರೆಯನಿಟ್ಟು
ನಿಮ್ಮ ನೆನಸೇ ನನ್ನ ಹಿಂಡುವುದು ಹಗಲಿನಲಿ
ಇರುಳಿನಲಿ ಕಾಣುವುದು ನಿಮ್ಮ ಕನಸು [೪೩]

ಸ್ವತಃ ಪತಿಯೇ ಹೆಂಡತಿಯ ಅಂತರಂಗವನ್ನು ಅರಿತು ಅವಳನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡು ಬರೆದಿರುವ 'ಹೆಂಡತಿಯ ಕಾಗದ' ಕೆ. ಎಸ್. ನ ಕಾವ್ಯಾತ್ಮಕ ಶಕ್ತಿಗೆ ಒಂದು ಸಾಕ್ಷಿಯಾಗಿದೆ. ತವರಿಗೆ ಹೋದರೂ ಪತ್ನಿಗೆ ಪತಿಯದ್ದೇ ಯೋಚನೆ. ಹಗಲಿರುಳು ಪತಿಗಾಗಿ ಪರಿತಪಿಸುವ ಪತ್ನಿಯ ಭಾವನೆಗಳನ್ನು ಕವಿ ಇಲ್ಲಿ ತೆರೆದಿಟ್ಟಿದ್ದಾರೆ. ಪತಿ ಎಲ್ಲಿ ಚುಚ್ಚಿ ಮಾತನಾಡುತ್ತಾರೋ ಎಂಬ ಆತಂಕ ಅವಳಿಗಿದೆ. ಈ ಕವನದಲ್ಲಿ ಕವಿ ತನ್ನ ಪ್ರಾಮಾಣಿಕ ಮುಖವನ್ನು ಬಿಚ್ಚಿಟ್ಟು ವಾಸ್ತವ ಸತ್ಯವನ್ನು ಹೇಳ ಹೊರಟಿದ್ದಾನೆ. ಒಂದರ್ಥದಲ್ಲಿ ಕವಿಯ ಆತ್ಮವಿಮರ್ಶೆಯೂ ಹೌದು: ದಾಂಪತ್ಯದ ಸವಿಯನ್ನು ಅನುಭವಿಸಬೇಕಾದರೆ ಪರಸ್ಪರರು ಆಗಾಗ್ಗೆ ಆತ್ಮವಿಮರ್ಶೆಯನ್ನು ಮಾಡಿಕೊಳ್ಳುವುದು ಮುಖ್ಯವಾಗಿರುತ್ತದೆ. ಆಗ ನಿಜವಾದ ಪ್ರೇಮವಂಕುರಿಸಿ ಗಟ್ಟಿಯಾಗಿ ನೆಲೆನಿಲ್ಲಲು ಸಾಧ್ಯವಾಗುತ್ತದೆ. ಎಂಬುದನ್ನು ಈ ಕವನದಲ್ಲಿ ಕವಿ ರುಜುವಾತು ಮಾಡಿದ್ದಾನೆ.

ಇವಳು ಯಾರು ಬಲ್ಲೆಯೇನು?
ಇವಳ ಹೆಸರು ಹೇಳಲೇನು?
ಇವಳ ದನಿಗೆ ತಿರುಗಲೇನು?
'ಇವಳು' ಏತಕೋ ಬಂದು
ನನ್ನ ಸೆಳೆದಳು.......[೪೪]

---

43 ಹಾಡು ಹಸೆ – ಹೆಂಡತಿ ಕಾಗದ

44 ಹಾಡು ಹಸೆ – ಕಲ್ಪನಾ ಸುಂದರಿ

ಪ್ರೇಮಕ್ಕೆ ಜಾತಿ ಇಲ್ಲ. ಕುಲ ಇಲ್ಲ. ಗೋತ್ರ ಇಲ್ಲ. ಅವಳ ಹೆಸರೂ ಬೇಕಿಲ್ಲ. ಹೃದಯದ ತುಮುಲಗಳಿಗೇನೇ ಇಲ್ಲಿ ಪ್ರಾಧಾನ್ಯತೆ. ಪ್ರೇಮವೆಂದರೆ ಆಕರ್ಷಣೆ ಆ ಆಕರ್ಷಣೆಗೆ ಕಾರಣವೇನು ಎಂಬುದನ್ನು ಕವಿ ಹುಡುಕಹೊರಟಿದ್ದಾನೆ.

ಉದ್ದವಾದ ಜಡೆ, ಜಡೆಗೆ ಜೋತು ಬಿದ್ದಿರುವ ಹೂವಿನ ದಂಡೆಯೂ ಇರಬಹುದು. ಇಲ್ಲಿ ಕವಿ ಪಕ್ಕಾ ಸೌಂದರ್ಯವನ್ನು ಆರಾಧಿಸುವ ಆರಾಧಕನಾಗಿ ಕಾಣುತ್ತಾನೆ. ಕಾಲಿನ ಗೆಜ್ಜೆ, ಮಲ್ಲಿಗೆಯ ಸುವಾಸನೆ ಕವಿಯ ವರ್ಣನೆಯ ಪ್ರವಾಹದಲ್ಲಿ ತೇಲಿ ಬರುತ್ತದೆ. ಶೀರ್ಷಿಕೆಯೇ ಹೇಳುವಂತೆ 'ಕಲ್ಪನಾಸುಂದರಿ' ಸೌಂದರ್ಯದ ಕಲ್ಪನೆಯ ವಸ್ತುವನ್ನು ಕವಿ ಆಯ್ಕೆ ಮಾಡಿಕೊಂಡ ರೀತಿ ಆಶ್ಚರ್ಯವನ್ನು ತರುವಂತದ್ದು. ಕಲ್ಪನಾ ಸುಂದರಿ ಹೂವನೆಸೆದು ನಡೆದಳಂತೆ ಅವುಗಳಲ್ಲಿ ಒಂದೆರಡನ್ನು ಮಾತ್ರ ಕವಿ ತಂದನಂತೆ. ಹೂವು-ಪ್ರಣಯಿಗಳು ತಮ್ಮ ಪ್ರೇಮ ನಿವೇದನೆಗಾಗಿ ಬಳಸುವ ಅಪರೂಪದ ಕಾಣಿಕೆ. ಹೂವು – ಕವಿ ನರಸಿಂಹಸ್ವಾಮಿಯವರ ಪ್ರಣಯ ಗೀತೆಗಳಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ತಂದಂತಹ ಹೂವನ್ನು ಕನಸಿನ ಹುಡುಗಿಯೇ ಮುಡಿದುಕೊಂಡರೆ ಆಗ ಅದರ ಸೌಂದರ್ಯವೇ ಬೇರೆ ಇಂಥಾ ಮಧುರ ಕಲ್ಪನೆಯನ್ನು ತಂದುಕೊಂಡ ಕವಿ ಇಲ್ಲಿ ಭಾವಪರವಶನಾಗುತ್ತಾನೆ. ಹದಿಹರೆಯದವರು ಸಾಮಾನ್ಯವಾಗಿ ಕನಸನ್ನು ಕಾಣುತ್ತಾ ಮನದಲ್ಲಿಯೇ ಮಹಲನ್ನು ಕಟ್ಟಿಕೊಂಡು ಆ ಬಂಧನದಲ್ಲಿಯೇ ಸಿಲುಕಿ ಮಧುರ ವೇದನೆಯನ್ನು. ರಸಾನುಭವವನ್ನು ಹೊಂದುತ್ತಾರೆ. ಆ ವಯೋಮಾನದವರಿಗೆ ಇಷ್ಟವಾಗುವಂತಾ ಈ ಪದ್ಯವು ಕವಿಯನ್ನು ಕಾಲೇಜಿನ ದಿನಗಳಿಗೆ ಎಳೆದುಕೊಂಡು ಹೋಗಿದೆ ಎಂದರೆ ತಪ್ಪಾಗಲಾರದು.

> ಹತ್ತು ವರುಷದ ಹಿಂದೆ ಮುತ್ತೂರ ತೇರಿನಲಿ
> ಅತ್ತಿತ್ತ ಸುಳಿದವರು ನೀವಲ್ಲವೆ?
>
> ....
>
> ಬಡತನವೋ, ಸಿರಿತನವೋ, ಯಾರಿರಲಿ, ಎಲ್ಲಿರಲಿ,
> ದೊರೆಯಾಗಿ ಮೆರೆದವರು ನೀವಲ್ಲವೆ?[45]

ಪ್ರೇಮಿಸಲು ಕಾರಣವು ಇಂತದ್ದೇ ಇರಬೇಕೆಂಬ ನಿಯಮಗಳಿಲ್ಲ. ಆಕರ್ಷಣೆಗೊಳ್ಳಲು ಜಾತ್ರೆ. ಹಬ್ಬ, ಮದುವೆ, ಮುಂಜಿ, ಶಿಕ್ಷಣ ಸಂಸ್ಥೆ, ಕಛೇರಿ ಎಂಬ ಕಟ್ಟುಪಾಡುಗಳಿಲ್ಲ. ಒಬ್ಬರಿಗೊಬ್ಬರು ಪ್ರೇಮದ ಪಾಶಕ್ಕೆ ಬೀಳುವುದು ಕೇವಲ ಆಕಸ್ಮಿಕ. ವಿವಾಹದ ಸಂದರ್ಭದಲ್ಲಿ ಮಾತ್ರ ಕಾರಣಗಳು. ಸ್ಥಳ, ಜಾತಿ, ಗೋತ್ರ ಎಲ್ಲವೂ ಪ್ರಾಮುಖ್ಯತೆಯನ್ನು ಪಡೆದು ಬಿಡುತ್ತದೆ. ಜಾತ್ರೆಯಲ್ಲಿ ಇಷ್ಟವಾದಳು ಹುಡುಗಿ. ನಂತರ ಹತ್ತಿರದ ಊರಿನವಳೆಂದು ಮದುವೆ. ಹಾಗಂತ ದಾಂಪತ್ಯದ ಬದುಕಿಗೆ ಯಾವ ಅಡ್ಡಿಯೂ ಉಂಟಾಗಿಲ್ಲ. ಬಡತನ, ಸಿರಿತನವೆಲ್ಲ ಇಲ್ಲಿ ಗೌಣ. ಅವಳ ಪಾಲಿಗೆ ಆತ ಪ್ರೀತಿಯನ್ನು ಕೊಡುವ ದೊರೆ. ಈಕೆಗೂ ಒಂದು ಅಹಮ್ಮು. ತಾನು ತನ್ನ ಗಂಡನಿಗೆ ಅನುಸರಿಸಿಕೊಂಡು

---

[45] ಹಾಡು ಹಸೆ– ನೀವಲ್ಲವೆ?

ಮಗುವಿಗೆ ಆಶ್ರಯವನ್ನು ನೀಡುತ್ತಾ ಪತಿಯೊಡನೆ ಸರಿಸಮವಾಗಿ ಜವಾಬ್ದಾರಿಯನ್ನು ಹೊತ್ತಂತಹ ಬಿಂಕವು ಅವಳಲ್ಲಿದೆ. ಹೀಗಾಗಿ ಅವಳಲ್ಲಿ ಸಾರ್ಥ್ಯಕ್ಯ ಮನೋಭಾವವಿದೆ ಮತ್ತು ಪ್ರಣಯದ ಆಸ್ವಾದನೆಯಲ್ಲಿ ತನ್ನನ್ನು ಆಕೆ ತೊಡಗಿಸಿಕೊಂಡಿದ್ದಾಳೆ. ಬೇಂದ್ರೆಯವರು ನಾದಲೀಲೆಯ ಒಂದು ಕವನದಲ್ಲಿ ಹೀಗೆ ಹೇಳುತ್ತಾರೆ:

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು ಇದಕು ಎದಕು

ಆದರ್ಶ ಪ್ರಣಯದಲ್ಲಿ ಆರ್ಥಿಕ ಸ್ಥಿತಿ, ಬಾಹ್ಯ ಸೌಂದರ್ಯ ಯಾವುದೂ ಬೇಕಿಲ್ಲ. ಪ್ರೀತಿಯೇ ಎಲ್ಲ ಎಂಬ ಭಾವವನ್ನು ಬೇಂದ್ರೆಯವರೂ ಸಹ ವ್ಯಕ್ತಪಡಿಸಿದ್ದಾರೆ.

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನನಗದೆ ಕೋಟಿ ರುಪಾಯಿ!
ಹೆಂಡತಿಯೊಬ್ಬಳು ಹತ್ತಿರವಿದ್ದರೆ
ನಾನೂ ಒಬ್ಬ ಸಿಪಾಯಿ![46]

ಈ ಕವನವಂತೂ ಲೋಕಪ್ರಸಿದ್ಧವಾಗಿದೆ. ಭ್ರೂಣ ಹತ್ಯೆ. ಸ್ತ್ರೀ ಶೋಷಣೆ, ವರದಕ್ಷಿಣೆ ಪಿಡುಗು ಇವೆಲ್ಲ ಆಧುನಿಕ ಸಮಾಜದಲ್ಲಿಯೂ ಮುಂದುವರಿಯುತ್ತಿರುವ ಅಪಾಯಗಳಾಗಿವೆ. ಹೆಂಡತಿಯನ್ನು ವರದಕ್ಷಿಣೆಯ ಕಿರುಕುಳದಿಂದ ಸತಾಯಿಸುವ, ಸಾಯಿಸುವ ಗಂಡಸರಿದ್ದಾರೆ. ಈ ಮುಗ್ಧ ಆದರ್ಶ ದಂಪತಿಗಳಿಗೆ ಅದ್ಯಾವ ಸಮಸ್ಯೆ ಇಲ್ಲ. ಹೆಂಡತಿಯೇ ಅವನ ಬಹುದೊಡ್ಡ ಆಸ್ತಿ. ಶಿಸ್ತಿನ ಸೈನಿಕನಂತಿರಲು ಹೆಂಡತಿಯೇ ಕಾರಣ ನಲ್ಲೆಯು ಮನೆಯಲ್ಲಿದ್ದರೆ ಎಲ್ಲ ಸಂಭ್ರಮವು ಸಿಗುತ್ತದೆ. ಲೋಕದಲ್ಲಿ ಕಾಣುವ ಅಶಾಂತಿಯ ಬಗ್ಗೆ ಇವಳಿಗೆ ಅರಿವಿಲ್ಲ. ಮುತ್ತು ನೀಡುವಾಗ ಜಿಪುಣಳಾಗುವುದಿಲ್ಲ. ದಿನಿತ್ಯವೂ ಈಕೆಗೆ ಹೂ ಬೇಕೇ ಬೇಕು. ಬಡತನವಿದ್ದರೂ ಗೊತ್ತು ಮಾಡದಂತಾ ಹೆಣ್ಣು ಆಕೆ. ಅಡಿಗೆಯ ಸವಿಯಲ್ಲಿಯೂ ಅವಳ ಸಿಹಿಯಾದ ಹೃದಯದ ಪಾತ್ರವಿದೆ. ಪ್ರೀತಿಯ ಭರಾಟೆಯಲ್ಲಿ ಬಡತನವೂ ಸಹ ಮಾರಾಚೆ ದೂರ ಹೋಗಿ ಬೀಳುತ್ತದೆ. ಯಾವ ಗಂಡನು ಹೆಂಡತಿಯ ಪ್ರೇಮವನ್ನು ಅರಿಯಲು ಅಸಮರ್ಥನಾಗುತ್ತಾನೋ ಆತನು ಎಲ್ಲ ರಂಗದಲ್ಲಿಯೂ ವಿಫಲನಾಗುತ್ತಾನೆ ಎಂಬ ಕಾಳಜಿ ಇಲ್ಲಿ ವ್ಯಕ್ತವಾಗುತ್ತದೆ. ಹೆಣ್ಣನ್ನು ಕೇವಲ ಭೋಗದ ವಸ್ತುವೆಂದು ಭ್ರಮಿಸುವವರಿದ್ದಾರೆ. ಮಾರಾಟಕ್ಕೆ ಇಡುವ ಜಾನುವಾರುಗಳಂತೆ ತಮ್ಮನ್ನು ವರದಕ್ಷಿಣೆಗಾಗಿ ಮಾರಿಕೊಳ್ಳುವ ಪುರುಷರಿದ್ದಾರೆ. ಪುರುಷ ಪ್ರಧಾನ ಕುಟುಂಬದಲ್ಲಿ ಹೆಣ್ಣಿನ ಮೇಲೆ ದಬ್ಬಾಳಿಕೆಯನ್ನು ನಡೆಸುವ ಗಂಡಸರಿದ್ದಾರೆ. ಕೆ. ಎಸ್. ನ ಈ ಕವನ ಅಂಥಾ ಗುಣವನ್ನು ಹೊಂದಿರುವ ಗಂಡಸರ

---

[46] ಹಾಡು ಹಸೆ – ಗಂಡ ಹೆಂಡತಿ

ಹೃದಯವನ್ನು ಇರಿಯುತ್ತದೆ. ಅವರ ನಿರಂಕುಶ ಪ್ರಭುತ್ವವನ್ನು ಪ್ರತಿಭಟಿಸುತ್ತದೆ. ತನ್ಮೂಲಕ ಹೆಣ್ಣಿನ ಸ್ವಾತಂತ್ರ್ಯ, ಗೌರವವನ್ನು ಕಾಪಾಡುವ ಸಂವೇದನಾ ಶೀಲ ಕವನವಾಗಿ ಹೊರಹೊಮ್ಮಿದೆ.

ಎನ್ನಿನಿಯನ ಪಾದಸೇವೆಯಿಲ್ಲದೆ ನಾ
ನೆನ್ನೆಗಮಿಂತಿರ್ಪೆನೆಂದು
ತನ್ನೊಳು ತಾನೆ ತವಕಗೊಂಬ ಸತಿಯ ಮ
ಹೋನ್ನತಿಗಿನ್ನೆಣೆಯುಂಟೆ [೪೭]

ಸಂಚಿಹೊನ್ನಮ್ಮಳೂ ಸಹ ಹೆಂಡತಿಯ ಮಹತ್ವವನ್ನು ೧೭ ನೇ ಶತಮಾನದಲ್ಲಿಯೇ ಪ್ರತಿಪಾದಿಸಿದ್ದನ್ನು ನಾವು ಕಾಣಬಹುದು.

ನೀ ಬರುವ ದಾರಿಯಲಿ
ಹಗಲು ತಂಪಾಗಿ
ಬೇಲಿಗಳ ಸಾಲಿನಲಿ
ಹಸುರು ಕೆಂಪಾಗಿ
ಪಯಣ ಮುಗಿಯುವ ತನಕ
ಎಳಬಿಸಿಲ ಮಣಿ ಕನಕ
ಸಾಲುಮರಗಳ ಮೇಲೆ ಸೊಬಗ ಸುರಿದಿರಲಿ! [೪೮]

ನಲ್ಲನಿಗೆ ಪ್ರಿಯತಮೆಯ ಬಗೆಗಿನ ಕಾಳಜಿ ಅಷ್ಟಿಷ್ಟಲ್ಲ. ಬಿಸಿಲ ಬೇಗೆಯಲ್ಲಿ ನಲ್ಲೆ ಎಲ್ಲಿ ಬೆಂದು ಬಿಡುತ್ತಾಳೋ ಎಂಬ ನಲ್ಲನ ಬೇಗುದಿಯನ್ನು ಕವಿ ಇಲ್ಲಿ ಸುಂದರವಾಗಿ ಕಲ್ಪಿಸಿದ್ದಾನೆ. ಪ್ರಯಾಣವು ಪ್ರಯಾಸವಾಗದೇ ಸುಖಕರವಾಗಿರಲಿ ಎಂದು ನಲ್ಲನು ಹಾರೈಸುತ್ತಾನೆ. ಕನಸಿನ ಲೋಕದಲ್ಲಿ ವಿಹರಿಸುತ್ತಾ ಬಂದರೆ ಅವಳಿಗೆ ಹಾದಿ ಸವೆದದ್ದು ತಿಳಿಯಲಾರದು. ಇಲ್ಲಿ ನಲ್ಲನ ನಿಷ್ಕಲ್ಮಶ ಪ್ರೇಮದಂತರಂಗವನ್ನು ಕವಿ ಎಳೆಎಳೆಯಾಗಿ ನಿರೂಪಿಸಿದ್ದಾನೆ.

ಅಂಥಿಂಥ ಹೆಣ್ಣು ನೀನಲ್ಲ;
ನಿನ್ನಂಥ ಹೆಣ್ಣು ಇನ್ನಿಲ್ಲ
....
....
ನಡುಬೆಟ್ಟದಲ್ಲಿ ನಿನ್ನೂರು;
ಅಲ್ಲಿಹವು ನವಿಲು ಮುನ್ನೂರು
ಮುನ್ನೂರು ನವಿಲು ಬಂದಂತೆ
ನೀ ಬಂದರೆನಗೆ, ಸಿರಿವಂತೆ [೪೯]

---

[47] ಸಂಚಿ ಹೊನ್ನಮ್ಮ – ಹದಿಬದೆಯ ಧರ್ಮ

[48] ಹಾಡು ಹಸೆ – ನೀ ಬರುವ ದಾರಿಯಲಿ

'ಅಂಥಿಂಥ ಹೆಣ್ಣು ನೀನಲ್ಲ !' ಈ ಕವನದಲ್ಲಿ ಕೆ. ಎಸ್. ನ ಅವರ ಶೃಂಗಾರ ರಸದ ಪರಿಪಕ್ವತೆಯನ್ನು ನೋಡಬಹುದು. ಹೆಣ್ಣಿನ ಸೌಂದರ್ಯವನ್ನು ವರ್ಣಿಸುತ್ತಾ, ಆ ರಸಾನುಭವದಲ್ಲಿ ಸಂಪೂರ್ಣ ತನ್ಮಯರಾಗುವುದನ್ನು ನಾವಿಲ್ಲಿ ಕಾಣಬಹುದು. ಜಡೆ ಮೇಲೆ ಕಂಡುಬರುವ ಹೂವಿನಿಂದ ನಲ್ಲೆಯ ಸೌಂದರ್ಯವು ಹೆಚ್ಚಾಗಿದೆ. ಕಣ್ಣನ್ನು ಹೊರಳಿಸಿದರೆ ಮಿಂಚು ಸುಳಿದಂತೆ ಭಾಸವಾಗುತ್ತದೆ. ಕೊರಳು ಮಣಿಮಾಲೆಯಿಂದ ಶೋಭಿಸುತ್ತಿದೆ. ಎದೆಯ ಗೂಡಿನಲ್ಲಿ ಚಿನ್ನದಂತ ಆಸೆಯು ಮನೆಮಾಡಿದೆ. ಅಲ್ಲಿ ಪ್ರೇಮವು ಸಹಜವಾಗಿಯೇ ಅಂಕುರಿಸಿದೆ. ಯಾರ ಒತ್ತಾಯವಾಗಲೀ ಬಲಾತ್ಕಾರವಾಗಲೀ ಅಲ್ಲಿಲ್ಲ. ಅವಳು ಜೊತೆಯಲ್ಲಿದ್ದರೆ ತನ್ನ ಜೀವನಕ್ಕೆ ಭಾಗ್ಯ ಜ್ಯೋತಿ ಎಂದು ಕವಿ ಒಪ್ಪುತ್ತಾನೆ. ಮರದ ಆಶ್ರಯವನ್ನು ಬೇಡುವ ಬಳ್ಳಿಯಂತೆ ಬಂದರೆ ತಾನು ಮರದಂತಾಗಬಲ್ಲೆ ಎಂಬ ಭರವಸೆಯನ್ನು ಕವಿ ನೀಡುತ್ತಾನೆ. ಬೆಟ್ಟದ ಮಧ್ಯದಲ್ಲಿ ನಲ್ಲೆಯ ಊರಿದೆ. ಅಲ್ಲಿ ಸುಂದರವಾದ ಪಕ್ಷಿ ಎಂದೇ ಬಿಂಬಿತವಾಗಿರುವ ನವಿಲುಗಳು ಹೇರಳವಾಗಿವೆ. ಆ ಎಲ್ಲ ನವಿಲುಗಳು ಒಟ್ಟಿಗೆ ಬಂದರೂ, ಇವಳ ಸೌಂದರ್ಯದ ಮುಂದೆ ಅವುಗಳ ಸೌಂದರ್ಯವು ಗೌಣವಾಗುತ್ತದೆ, ಎಂದು ಹೇಳುತ್ತಾ ತನ್ನ ನಲ್ಲೆಯ ಗುಣಗಾನವನ್ನು ಮಾಡುತ್ತಾನೆ. ಅವಳಿಂದ ಇವನಿಗೆ ಹೊಸ ಜೀವನದ ಕನಸು ಪ್ರಾರಂಭವಾಗಿದೆ. 'ಪುರುಷನ ಸಾಧನೆಯ ಹಿಂದೆ ಪ್ರೇರಣಶಕ್ತಿಯಾಗಿ ಸ್ತ್ರೀ ಇರುತ್ತಾಳೆ' ಎಂಬ ವಿಚಾರಕ್ಕೆ ಈ ಕವನವು ಪುಷ್ಟಿಯನ್ನು ನೀಡುತ್ತದೆ. ಪುರುಷನಾದವನಿಗೆ ಕೆ. ಎಸ್. ನ ಅಂಥಾ ವಿಶಾಲ ಹೃದಯವಿರಬೇಕಷ್ಟೇ. ಆಗಲೇ ಈ ಕವನವು ಇನ್ನೂ ಅರ್ಥಗರ್ಭಿತವಾಗುತ್ತದೆ.

ಒಬ್ಬಳೇ ಬಂದಳು –
    ತಡೆತಡೆದು. ಕನಕ !
ನಗುನಗುತ ಬಂದಳು
    ನನ್ನೆದೆಯ ತನಕ [50]

'ಕಣ್ಣೆತ್ತಿ ನೋಡಿದಳು ಚಂದಿರನ ತನಕ' ಕವನದಲ್ಲಿ ಕೇವಲ ಮೌನರಾಗವೇ ಎದ್ದು ಕಾಣುತ್ತದೆ. ಮಾತಿಲ್ಲದ ಪ್ರಣಯವೆಂಬ ಭಾವನಾ ಲೋಕಕ್ಕೆ ಕವಿ ಮುಳುಗಿ ಬಿಡುತ್ತಾನೆ. ಅವಳ ಮೌನದಲ್ಲಿ ಒಂದು ಸವಿಯಾದ ಗಾನವಿದೆ. ಹಿತವಾದ ಅನುಭವವಿದೆ. ಅವಳ ಮೌನದಲ್ಲಿ ಏನಿದೆ? ಎಂಬ ಕಾರಣವನ್ನು ಹುಡುಕಲು ನಲ್ಲನು ಹೊರಟಿದ್ದಾನೆ. ಎಲ್ಲೋ ಒಂದು ಕಡೆ ಕೋಪ ನಲ್ಲೆಗೆ ಬಂದುಬಿಟ್ಟಿದೆ. ಅದು ಶಾಶ್ವತವಲ್ಲದ್ದು ಎಂಬುದು ನಲ್ಲನಿಗೂ ತಿಳಿದಿದೆ. ಆದರೆ ಅವಳು ಕೋಪ ಮಾಡಿಕೊಳ್ಳಬಾರದು ಎಂಬ ಸಂವೇದನೆ ಅವನಲ್ಲಿ ಜಾಗೃತವಾಗಿದೆ. ಹೀಗಾಗಿ ಏನಾಯ್ತು? ಎಂದು ಕೇಳಿ ಪರಿಹಾರವನ್ನು ಹುಡುಕಲು ಯತ್ನಿಸಿದ್ದಾನೆ. ಕವನದಾದ್ಯಂತ ಅಂತ್ಯಪ್ರಾಸವು ಹರಿದಾಡಿ

---

[49] ಹಾಡು ಹಸೆ– ಅಂಥಿಂಥ ಹೆಣ್ಣು ನೀನಲ್ಲ

[50] ಹಾಡು ಹಸೆ – ಕಣ್ಣೆತ್ತಿ ನೋಡಿದಳು

ಕವನದ ಚೆಲುವನ್ನು ಹೆಚ್ಚಿಸಿದೆ. ನಲ್ಲೆಯ ಅಂತರಂಗದೊಳಗೆ ಪ್ರವೇಶಿಸುವ ಪ್ರಯತ್ನ ಕೆ. ಎಸ್. ನ ಅವರ ಈ ಕವನದಲ್ಲಿ ಅದ್ಭುತವಾಗಿ ಮೂಡಿಬಂದಿದೆ.

ಮುನಿಯದಿರು, ಮಾನಿನಿಯೆ, ಮುಡಿದ ಹೂವಿನ ಮೇಲೆ
ಪರಿಮಳವೆ ಹಗೆಯೆ ನಿನಗೆ?
ಹೊಂದಾರೆ ಸೆರಗಿನಲಿ ಚಂದುಟಿಯನೊರಸಿದರೆ
ಆ ಮುತ್ತು ಮಾಯವಹುದೆ?
....
....
ಈ ಸಣ್ಣ ಮಳೆಗೆ ಈ ಕಿರುಗಾಳಿಯಬ್ಬರಕೆ
ಬಲ್ಲವನು ಬೆದರಬಹುದೆ?
ಒಲಿದೆದೆಗೆ 'ಒಲ್ಲೆ'ನೆನ್ನುವ ಅಚ್ಚ ಕನ್ನಡವೆ
ಒಪ್ಪಾಯ್ತೆ ಒಂದು ಗಳಿಗೆ ![51]

ನಲ್ಲನು ತನ್ನ ಪ್ರೇಯಸಿಗೆ ಕೋಪಗೊಳ್ಳದಿರೆಂದು ರಮಿಸುತ್ತಿದ್ದಾನೆ. ಜೀವನದಲ್ಲಿ ಒಬ್ಬರಿಗೊಬ್ಬರು ಒಪ್ಪಿ ನಡೆಯುತ್ತಿರುವಾಗ ಮತ್ತೇಕೆ ಕೋಪ? ಎಂಬುದು ನಲ್ಲನಿಗೆ ಕಾಡುವ ಪ್ರಶ್ನೆ. 'ಮುಡಿದ ಹೂವು' ಎಂಬ ಅಭೇದವಾದ ಮತ್ತು ಅಪರೂಪದ ನಿದರ್ಶನದ ಮೂಲಕ ಕವಿ ಇಲ್ಲಿ ಓದುಗರನ್ನು ಆಕರ್ಷಿಸುತ್ತಾನೆ. ನೆನಪು, ಅನುಭವ ಇವೆಲ್ಲ ಹೃದಯದಲ್ಲಿ ಒಂದು ಸಲ ಸೇರಿತೆಂದರೆ ಅದನ್ನು ಗೀಚಿ ತೆಗೆಯಲಾಗುವುದಿಲ್ಲ. ಇಲ್ಲಿ ಕವಿ ತಮ್ಮ ಅಪಾರ ಅನುಭವವನ್ನು ಸಾಣೆ ಹಿಡಿದಿದ್ದಾನೆ. ಒಂದು ಸಲ ಸಂಭವಿಸಿದ ಘಟನೆ, ಅದನ್ನು ಮರೆಮಾಚಲು ಅಸಾಧ್ಯ ಎನ್ನಲು ಹಲವು ದೃಷ್ಟಾಂತಗಳನ್ನು ಕವಿ ಇಲ್ಲಿ ಬಳಸಿದ್ದಾನೆ. ಒಬ್ಬರೊಬ್ಬರು ಇಷ್ಟಪಟ್ಟು ಒಪ್ಪಿರುವಾಗ 'ಒಲ್ಲೆ' ಎಂಬ ಪದ ಇಲ್ಲಿ ಅಸಮಂಜಸ. ಅಪ್ಪಿತಪ್ಪಿಯೂ ಆ ಮಾತು ಬಾಯಿಂದ ಉದುರಬಾರದು. ಆಗ ಪರಸ್ಪರರಿಗೆ ಹೃದಯವನ್ನೇ ಕಿತ್ತು ತಿಂದಂತಃ ಅನುಭವ ಆಗುವುದು ಖಂಡಿತ. ಅವಳು ಮಾತಾಡದೇ ಹೋದಾಗ, ನಗದೇ ಇದ್ದಾಗ ನಲ್ಲನ ಹೃದಯವು ವಿಹ್ವಲಗೊಳ್ಳುತ್ತದೆ. ಪ್ರಣಯಿಗಳ ಸರಸ ಸಲ್ಲಾಪದಲ್ಲಿ ಇದೆಲ್ಲ ಇದ್ದದ್ದೇ. ಆದರೆ ಅತೀ ಆದರೆ ಕಷ್ಟ. ಈ ಪ್ರಣಯಿಗಳು ಅಂತವರಲ್ಲ. ಒಬ್ಬರು ಗೆದ್ದಾಗ ಇನ್ನೊಬ್ಬರು ಸೋಲುತ್ತಾರೆ. ಹೊಂದಾಣಿಕೆ ಅಂದರೆ ಇದೇ ತಾನೆ?

[51] ಹಾಡು ಹಸೆ– ಮುನಿಯದಿರು ಮಾನಿನಿಯೆ

ಬಿ. ಎಂ. ಶ್ರೀಯವರ ಇಂಗ್ಲೀಷ್ ಗೀತೆಗಳ "ಮೇಲು ನೋಟಕ್ಕೆ ಮರೆಯಲಾರಳು" ಎಂಬ ಕವನ (H. Coleridge (1769-1849) – She is not fair to out ward view ಇದರ ಅನುವಾದ)

ಈಗ ನೋಡಳು ನಾಚಿ ನುಲಿವಳು,
ನಾನು ನೋಡಲು ಮುನಿವಳು;
ಏನೆ ಮಾಡಲಿ, ಹಿಡಿಯಬಲ್ಲೆನು
ಕಣ್ಣೊಳೊಲವಿನ ಬೆಳಕನು
ಅವಳ ಹುಬ್ಬಿನ ಗಂಟೆ ಚೆಂದವೊ!
ಏತಕುಳಿದರೆ ನಗೆಗಳು?

ಪ್ರಣಯಿಗಳೆಂದರೆ ನಾಚಿಕೆ, ಕೋಪ, ದುಃಖ, ನಗು ಇವೆಲ್ಲ ಇದ್ದೇ ಇರುತ್ತದೆ. ರಸಿಕನಾದವನು ಅದರಲ್ಲಿಯೂ ಸೌಂದರ್ಯವನ್ನು ಆಸ್ವಾದಿಸುತ್ತಾನೆ ಎಂಬುದನ್ನು ಬಿ. ಎಂ. ಶ್ರೀಯವರ ಕವನದಲ್ಲಿಯೂ ಅಭಿವ್ಯಕ್ತವಾಗಿದೆ.

ಅಕ್ಕಿಯಾರಿಸುವಾಗ ಚಿಕ್ಕ ನುಚ್ಚಿನ ನಡುವೆ
ಬಂಗಾರವಿಲ್ಲದ ಬೆರಳು;
ತಗ್ಗಿರುವ ಕೊರಳಿನ ಸುತ್ತ ಕರಿಮಣಿಯೊಂದೆ
ಸಿಂಗಾರ ಕಾಣದ ಹೆರಳು; [52]

ಕವಿ ಸಮಯವೆಂದರೆ ಇದು. ರಸಾನುಭೂತಿಯ ರಸಪಥವಾಗಿ ಈ ಘಟನೆಯನ್ನು ಕವಿ ಕೆ. ಎಸ್. ನ ಆರಿಸಿಕೊಂಡಿದ್ದಾರೆ. ತನ್ನ ಪ್ರೇಯಸಿ ಶ್ರೀಮಂತ ಮನೆಯಿಂದ ಬಂದವಳಾಗಲೀ, ಶ್ರೀಮಂತರ ಮನೆಯ ಸೊಸೆಯಲ್ಲ ಎಂಬುದನ್ನು ಮೊದಲೇ ಕವಿ ಹೇಳಿಬಿಡುತ್ತಾನೆ. ಕರಿಮಣಿಯೊಂದೇ ಅವಳ ಆಭರಣವಾಗಿ ಶೋಭಿಸುತ್ತಿರುತ್ತದೆ. ಹಳ್ಳಿಯ ಜೀವನದ ಶೈಲಿಯನ್ನು ಇದು ನೆನಪಿಸುತ್ತದೆ. ಶೃಂಗಾರವಿಲ್ಲದ ಕೂದಲಾಗಿದ್ದರೂ ಆ ಕೂದಲು ಒತ್ತಾಗಿರುವುದರಿಂದ ಆ ಹೆಣ್ಣು ಷೋಡಶಿಯಂತೆ ಕಂಗೊಳಿಸುತ್ತಾಳೆ. ಕಣ್ಣು ಬಹು ಆಕರ್ಷಕ, ಮುಂಗುರುಳು ಅವಳ ಸೌಂದರ್ಯವನ್ನು ಹೆಚ್ಚಿಸಿದೆ. ಅವಳನ್ನು ಬೊಗಸೆಯಿಂದ ಹಿಡಿದು ಮುದ್ದಾಡುವ ತವಕ, ಮನೆಗೆಲಸ ಬೆಟ್ಟದಷ್ಟಿದೆಯಲ್ಲಾ ಎಂಬ ಆತಂಕ. ಚಿತ್ರಗಾರನು ಬರೆದ ಚಿತ್ರದಂತೆ ತನ್ನವಳ ರೂಪ. ಈ ವರ್ಣನೆಯಿಂದ ಕವಿ ಸರಳಜೀವನವನ್ನು ಪ್ರೀತಿಯಿಂದ ಅಪ್ಪಿಕೊಂಡಂತೆ ಕಾಣುತ್ತದೆ.

---

[52] ಹಾಡು ಹಸೆ – ಅಕ್ಕಿಯಾರಿಸುವಾಗ

ತೀ. ನಂ. ಶ್ರೀಯವರ 'ಒಲುಮೆ' ಕವನದ ಸಂಕಲನದ 'ಉಪೇಕ್ಷಿತೆ' ಕವನದಲ್ಲಿ :

ಚಿನ್ನದೆಳೆ, ಡಾಬು, ಬಳೆ, ಮಣಿಯೋಲೆಯೇಕೆ?
ಸರಿಗೆಗುಪ್ಪಸವೇಕೆ, ಹಿರಿದುಗುಲವೇಕೆ?
ನಿನ್ನ ಸಿರಿಯಿದನೆಲ್ಲ ಮೈ ತುಂಬ ಮೆರಸಿ
ಲೋಕಕೆ ಪ್ರದರ್ಶಿಸುವ ಪ್ರತಿಮೆಯೊಂದೆನಿಸಿ.
ನಿನ್ನೊಲವೆ ಸೋಕದೀ ನನ್ನ ಬದುಕೇಕೆ?

ಇಲ್ಲಿಯೂ ಸಹ ಧನಕನಕಗಳಗಿಂತ ಒಲುಮೆಯೇ ನಿಜವಾದ ಸಂಪತ್ತು ಎಂದು ಕವಿ ಹೇಳುತ್ತಾನೆ.

ನಿನ್ನೊಲುಮೆಯಿಂದಲೇ ಬಾಳು ಬೆಳಕಾಗಿರಲು
ಚಂದ್ರಮುಖಿ ನೀನೆನಲು ತಪ್ಪೇನೆ?
ನಿನ್ನ ಸೌಜನ್ಯವೇ ದಾರಿ ನೆರಳಾಗಿರಲು
ನಿತ್ಯಸುಖಿ ನೀನೆನಲು ಒಪ್ಪೇನೆ?[53]

ಬೆಳದಿಂಗಳನ್ನು ನೀಡಿ ಧರೆಗೆ ತಂಪನ್ನು ನೀಡುವವನು ಚಂದ್ರ. ಕವಿಯ ಬಾಳನಲ್ಲಿ ಬೆಳದಿಂಗಳನ್ನು ನೀಡುತ್ತಿರುವವಳು ಆತನ ನಲ್ಲೆ. ಹೀಗಾಗಿ ಅವಳನ್ನು 'ಚಂದ್ರಮುಖಿ' ಎಂದು ಸಂಬೋಧಿಸಿದ್ದಾನೆ. ಅದರಲ್ಲಿ ಯಾವುದೇ ತಪ್ಪಿಲ್ಲದೇ ಆತನು ಅದಕ್ಕೆ ಸ್ಪಷ್ಟೀಕರಣವನ್ನು ನೀಡುತ್ತಾನೆ. ನೆರಳು ಬಿಸಿಲಲ್ಲಿ ಬೆಂದು ಬಂದವರಿಗೆ ತಂಪಾದ ಸುಖವನ್ನು ನೀಡುತ್ತದೆ. ಅಂತೆಯೇ ಅವಳು ಸೌಜನ್ಯವೆಂಬ ನೆರಳನ್ನು ನೀಡುತ್ತಿರುವುದರಿಂದ ಅವಳನ್ನು 'ನಿತ್ಯಸುಖಿ' ಎಂದು ಸಂಬೋಧಿಸುತ್ತಿದ್ದಾನೆ. ತನ್ನ ನಲ್ಲೆಯನ್ನು 'ಅಮೃತವೆಂದೂ' 'ಗಂಗೆ' ಎಂದೂ ಕಲ್ಪಿಸುವುದರಲ್ಲಿ ಹಲವು ಕಾರಣಗಳವೆ. 'ರೂಪಕ'ವನ್ನು ಯಥೇಚ್ಛವಾಗಿ ಕವಿ ಇಲ್ಲಿ ಬಳಸಿ ವರ್ಣನೆಯ ಕಳೆಯನ್ನು ದ್ವಿಗುಣಗೊಳಸಿದ್ದಾನೆ. ಅವಳನ್ನು ಹಾಡಿ ಹೊಗಳದಷ್ಟೂ ಅದರಲ್ಲಿ ಸಂತೃಪ್ತಿಯನ್ನು ಕಾಣುವ ಪ್ರೇಮ ಯೋಗಿಯಂತೆ ಕವಿ ಕಾಣುತ್ತಾನೆ.

ಬೇಂದ್ರೆಯವರ 'ಸಖೀಗೀತೆ' ಕವನ ಸಂಕಲನದ 'ರಾಧೆಯ ಪಾಡು' ಈ ಪದ್ಯದ ಚರಣಕ್ಕೆ ಸಾದೃಶ್ಯವಾಗಿ ಕೆ. ಎಸ್. ನ ಕವನವು ಹೋಲುತ್ತದೆ:

ರೂಪ ಗುಣಕೆ ಮೆಚ್ಚಿ
ಬಂದನೆಂದೆನು ಹುಚ್ಚಿ
ಅಂದೆನೇ । ಮನದಿ? ಅಂದೆನೇ
ಕಾಣುವಂತಹನಲ್ಲ
ಕಾಣದಾದನು ಗೊಲ್ಲ
ಚೆಂದೇನೆ? ಇದು ಚೆಂದೇನೆ?

---

[53] ಹಾಡು ಹಸೆ – ನಿನ್ನೊಲುಮೆ

ಬೇಂದ್ರೆ, ಕೆ. ಎಸ್. ನ ಇವರಿಬ್ಬರು ನಲ್ಲೆಗೆ ಪ್ರಶ್ನೆ ಕೇಳಿ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ.

ಸಿರಿಗೆರೆಯ ನೀರಲ್ಲಿ ಬಿರಿದ ತಾವರೆಯಲ್ಲಿ
ಕೆಂಪಾಗಿ ನಿನ್ನ ಹೆಸರು
ಗುಡಿಯ ಗೋಪುರದಲ್ಲಿ ಮೆರೆವ ದೀಪಗಳಲ್ಲಿ
ಬೆಳಕಾಗಿ ನಿನ್ನ ಹೆಸರು.[54]

ನಲ್ಲನು ಎಲ್ಲೆಲ್ಲೂ ತನ್ನ ನಲ್ಲೆಯನ್ನು ಕಾಣುವ ಪರಿ ಅನನ್ಯವಾದದು. ಅರಳಿದ ತಾವರೆ, ಗುಡಿಯ ಗೋಪುರ, ಮೆರೆವ ದೀಪ, ಕೆಂಗರುವಿನ ಕಣ್ಣು, ಕರುವಿನ ತುಟಿಯಿಂದ ಚೆಲ್ಲಿಸಿದ ಹಾಲಲ್ಲೆಲ್ಲ ನಲ್ಲೆಯನ್ನು ಕಾಣುವ ತವಕ, ಪ್ರಕೃತಿಯ ಕಣ ಕಣದಲ್ಲಿಯೂ ನಲ್ಲೆ ಸೇರಿ ಹೋಗಿದ್ದಾಳೆ.

ನೀನೇ ಎದುರಿಗೆ ಬಂದಾಗ ನಿನ್ನಲ್ಲೆ
ಕರಗುವ ಬಲು ಚಿಕ್ಕ ಹೆಸರು
ನೀನಿಲ್ಲದಾಗ ಈ ಮನೆಯಲ್ಲೆ ಮನದಲ್ಲೆ
ಹೊಳೆಗಾಳಿಯಂತಲೆವ ಹೆಸರು[55]

ಈ ಎಲ್ಲಾ ಸಂಗತಿಗಳಲ್ಲಿಯೂ ಅವಳ ಹೆಸರಿನ ಹುಡುಕಾಟ ನಡೆದಿದೆ. ಆದರೆ ಕವಿಗೆ ಅಷ್ಟು ಮಾತ್ರಕ್ಕೆ ಸಂತೋಷವಿಲ್ಲ. ಮನೆಯಲ್ಲೆಲ್ಲ ಸುಳಿದಾಡುವ ತಂಪಾದ ಗಾಳಿಯಲ್ಲಿಯೂ ಅವಳೇ ಸೇರಿಹೋಗಿದ್ದಾಳೆ.

ಇಂತದ್ದೇ ಒಂದು ಕವನ ಕೋಲರಿಜ್ I asked my fair one happy day ಇದನ್ನು ತೀ. ನಂ. ಶ್ರೀ ಅವರು 'ಹೆಸರು' ಎಂಬ ಶೀರ್ಷಿಕೆಯಡಿ ಅನುವಾದಿಸಿದ್ದಾರೆ.

ಸುಖದ ದಿವಸವೊಂದರಲ್ಲಿ ನುಡಿದೆ ನನ್ನ ಚೆನ್ನೆಗಿಂತು,
ಬೆಸಸು, ನನ್ನ ಕವನದಲ್ಲಿ ನಿನ್ನ ಕರೆದ ಹೆಸರದೆಂತು
ಕಾವ್ಯಗಳಲಿ ಮೆರೆದ ಯಾವ ಸವಿಯ ಹೆಸರದು?
ಇಂದುಮತಿಯೆ, ಶಕುಂತಲೆಯೆ,
ಕಾದಂಬರಿಯೆ, ಯಶೋಧರೆಯೆ,
ಉಷೆಯೆ, ಉಮೆಯೆ, ರಮೆಯೆ – ಯಾವ ಹೆಸರ ನಿಡುವುದು?

---

[54] ಹಾಡು ಹಸೆ– ನಿನ್ನ ಹೆಸರು
[55] ಹಾಡು ಹಸೆ– ನಿನ್ನ ಹೆಸರು

ತೀ. ನಂ. ಶ್ರೀ ಯವರಿಗೆ ನಲ್ಲೆಗೆ ಹೆಸರನ್ನಿಡಲು ಕೆಲವಾದರೂ ಆಯ್ಕೆಗಳವೆ. ಕೆ. ಎಸ್. ನ ಅವರು ಹೆಸರನ್ನು ನಿರ್ದಿಷ್ಟವಾಗಿ ಸೂಚಿಸದೇ ಅವಳಗೇ (ಓದುಗರಿಗೆ) ಆಯ್ಕೆಯನ್ನು ನೀಡುವುದರಿಂದ ಈ ಕವನದ ಸೊಗಸುಗಾರಿಕೆ ಹೆಚ್ಚಿದೆ.

ನಿನ್ನ ಪ್ರೀತಿಗೆ, ಅದರ ರೀತಿಗೆ
ಕಣ್ಣ ಹನಿಗಳೆ ಕಾಣಿಕೆ?
ಹೊನ್ನ ಚಂದಿರ, ನೀಲಿ ತಾರಗೆ
ಹೊಂದಲಾರದ ಹೋಲಿಕೆ.[56]

ಪ್ರೀತಿಯ ಉತ್ಕಟತೆಗೆ ನಲ್ಲೆ ಮನಸೋತಿದ್ದಾಳೆ. ಭಾವನಾ ಲಹರಿಯಲ್ಲಿ ಮುಳುಗೇಳುತ್ತಾಳೆ. ಅವಳಗೆ ಅರಿವಿಲ್ಲದಂತೆಯೇ ಕಣ್ಣೀರು ಪ್ರವಹಿಸುತ್ತಿದೆ. ಅದು ಪ್ರೀತಿಯಿಂದ ನಲ್ಲನಿಗೆ ನೀಡಿದ ಉಡುಗೊರೆಯಾಗಿರಬಹುದೆಂಬ ಕಲ್ಪನೆ. ನೀಲವಾದ ನಕ್ಷತ್ರ – ಚಿನ್ನದಂತ ಚಂದ್ರನಿಗೆ ಹೋಲಿಕೆ ಮಾಡುವುದು ಹೇಗೆ ಕಷ್ಟವೋ ಅಂತೆಯೇ ಪ್ರೀತಿಗೂ – ರೀತಿಗೂ ಹೋಲಿಸುವುದು ಕಷ್ಟವೆಂಬಂತಾಗಿದೆ. ಅವಳ ದುಃಖದ ಪರಿಧಿಯೂ ಕವಿಯ ವರ್ಣನೆಯಲ್ಲಿ ಅದ್ಭುತವೆಂಬಂತೆ ಚಿತ್ರಿತವಾಗಿದೆ. ಹೂವಿನಂತಹ ಕೋಮಲವಾದ ಹೃದಯದಲ್ಲಿ ಗಾಯವಾದಂತಹ ಅನುಭವ. ಊರಿನಾದ್ಯಂತ ಎಲ್ಲೆಲ್ಲೂ ನಗುತ್ತಿರುವ ಮುಖ ಕಾಣುತ್ತಿದ್ದರೆ. ಇವರ ಮನೆಯಂಗಳದಲ್ಲಿ ನಗದಿರುವ ಒಂದು ಮುಖವಿದೆ ಎಂಬ ಚಿಂತೆ ನಲ್ಲನಿಗೆ ಕಾಡುತ್ತಿದೆ. ಬಾಡಿದ ಮುಖದಲ್ಲಿ ಅಸೌಖ್ಯವು ಕಾಣುತ್ತಿದೆ. ಹೇಗೆ ತನ್ನ ಪ್ರಿಯತಮೆಯನ್ನು ಗೆಲ್ಲಲಿ? ಅವಳ ಪ್ರೀತಿಗೆ ತಾನು ಹೇಗೆ ಸ್ಪಂದಿಸಿದರೆ ನ್ಯಾಯ ಸಿಕ್ಕೀತು? ಎಂಬ ಜಿಜ್ಞಾಸೆ ನಲ್ಲನಿಗೆ ಶುರುವಾಗಿದೆ. ರಾಷ್ಟ್ರಕವಿ ಎಂ. ಗೋವಿಂದ ಪೈ ಅವರ 'ನಂದಾದೀಪ' ಎಂಬ ಕವನ ಸಂಕಲನದ 'ನೀನೆನ್ನ ಚಿಂತೆಯಲಿ ಸಂತಸಂ ತಳೆಯೆ' ಕವನದಲ್ಲಿ ಹೀಗೆ ಹೇಳುತ್ತಾರೆ:

ನೀನೆನ್ನ ಚಿಂತೆಯಲಿ ಸಂತಸಂ ತಳೆಯೆ
ಎಂಬುದಂ ಬಲ್ಲೆ ನಿನ್ನಂ ಬರಿದೆ ದೂರೆ!
ಕಂಬನಿಯ ಸಂಬಳಮಿದಂ ಬಾಳೆ ಬೀರೆ,
ಹಣೆಯ ಬರೆಹಂ ಬಗೆದಣಂ ಬಾಳ ಹಳಯೆ![57]

ಇಲ್ಲಿಯೂ ಕಣ್ಣೀರಿನ ಜೀವನದ ಚಿತ್ರಣವಿದೆ. ಇಲ್ಲಿ ನಲ್ಲನಿಗೆ ಚಿಂತೆ ಇದೆ. ಸಂತಸವನ್ನು ನಲ್ಲೆ ಹೊಂದಬೇಕು. ಕಷ್ಟಪಟ್ಟು ಸಂಪಾದಿಸಿದ ಸಂಬಳ ಕಣ್ಣೀರಿನ ಸಂಬಳವೆಂದು ಕರೆಯುತ್ತಾನೆ. ಆದರೂ ಚಿಂತೆಯನ್ನು ಮರೆತು ಆನಂದವನ್ನು ಹೊಂದಲು ಆತನು ಕರೆನೀಡುತ್ತಾನೆ.

---

[56] ಹಾಡು ಹಸೆ– ನಿನ್ನ ಪ್ರೀತಿಗೆ

[57]

ಬಿರಿದ ಹೂವ ಮೇಲೆ ಗಾಳ

ಸುಳಿದು ಬರುವ ಸಮಯದಲ್ಲಿ

ತೆರೆಯ ಹಿಂದೆ ತೆರೆಗಳೋಡಿ

ಕೆರೆಯ ಕವಿತೆಯಾಗುವಲ್ಲಿ

ನಿನ್ನ ನೆನೆವೆ, ನಿನ್ನ ನೆನೆವೆ

ನನ್ನೊಲವಿನ ಸ್ಫೂರ್ತಿಯೆ![೫೮]

ಕವಿಗೆ ಕವನ ಬರೆಯುವಾಗ ಬೇರೆ ಏನೂ ತೋಚುವುದಿಲ್ಲ. ಬರೆಯುವ ಕೈ ನಿಂತು ಹೋಗುತ್ತದೆ. ಯೋಚಿಸುವ ಬುದ್ಧಿ ತಟಸ್ಥವಾಗಿ ಬಿಡುತ್ತದೆ. ಆಗ ನಲ್ಲೆಯನ್ನು ಒಂದು ಕ್ಷಣ ನೆನಪು ಮಾಡಿಕೊಂಡರೆ ಸ್ಫೂರ್ತಿಯ ಚಿಲುಮೆ ಚಿಮ್ಮುತ್ತದೆ. ಬರೆಯುವ ಕೈ ಓಡಲಾರಂಭಿಸುತ್ತದೆ. ಬುದ್ಧಿ ಯೋಚಿಸಲು ಆರಂಭಿಸುತ್ತದೆ. ಪ್ರೇಮವೆಂಬ ಮಾಂತ್ರಿಕತೆಯು ಏನೆಲ್ಲ ಪವಾಡವನ್ನು ಮಾಡಿಸುತ್ತವೆ ಎನ್ನಲು ಈ ಸಾಲುಗಳೇ ಸಾಕ್ಷಿ. ಅಂತರಂಗದ ಧ್ವನಿಗೆ ಅವಳ ಧ್ವನಿಯು ಸೋಕಿದಾಗ ಮತ್ತೆ ಕವಿಗೆ ನವೋಲ್ಲಾಸವು ಉಕ್ಕುತ್ತದೆ. ದಿಕ್ಕು ಕಾಣದಾದಾಗ, ನಲ್ಲೆಯ ಸವಿನೆನಪು ಪ್ರತಿಯೊಂದನ್ನು ಒದಗಿಸುವ ಪ್ರೇರಕಶಕ್ತಿಯಾಗಿ ನಿಲ್ಲುತ್ತದೆ. ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೇ ಕೋಟಿ ರೂಪಾಯಿ..................... ಹೆಂಡತಿಯೊಬ್ಬಳು ಹತ್ತಿರವಿದ್ದರೆ ನಾನೂ ಒಬ್ಬ ಸಿಪಾಯಿ ಎಂಬ ಸಾಲುಗಳಿಗೆ ಈ ಕವನದ ಚರಣವು ಹತ್ತಿರವಾಗಿದೆ. ಆದರೂ ಇಲ್ಲಿ ಇಣುಕುವ ದೃಶ್ಯಾವಳಿಗಳು ಕೆ. ಎಸ್. ನ. ಅವರ ವೈಚಾರಿಕ ಪ್ರಭುತ್ವವನ್ನು ಎತ್ತಿ ತೋರಿಸುತ್ತದೆ.

ಮಣ್ಣಿನೊಡನೆ ಮಣ್ಣಿನಂತೆ ನನ್ನ ನಿನ್ನ ಸಂಗಮ;

ನೀರಿನೊಡನೆ ನೀರಿನಂತೆ ನನ್ನ ನಿನ್ನ ಸಂಗಮ;

ಬೆಳಕಿನೊಡನೆ ಬೆಳಕಿನಂತೆ ನನ್ನ ನಿನ್ನ ಸಂಗಮ;

ಗಾಳಿಯೊಡನೆ ಗಾಳಿಯಂತೆ ನನ್ನ ನಿನ್ನ ಸಂಗಮ;[೫೯]

'ಸಂಗಮ' ಎಂಬ ಶೀರ್ಷಿಕೆಯಡಿ ಬರೆದ ಈ ಕವನದ ಪ್ರತಿ ಸಾಲಿನಲ್ಲಿಯೂ 'ಸಂಗಮ' ವೆಂಬ ಪದದ ಪ್ರಯೋಗವಿದೆ. ಇಲ್ಲಿ ಕವಿ ಕೆ. ಎಸ್. ನ ಶಬ್ದ ಚಮತ್ಕಾರದಿಂದ ತಮ್ಮ ಅಪಾರ ಪಾಂಡಿತ್ಯವನ್ನು ತೋರಿಸಿಕೊಟ್ಟಿದ್ದಾರೆ. ನಲ್ಲ-ನಲ್ಲೆಯರ ಸಂಗಮಕ್ಕೆ ಕೊಟ್ಟಂತಹ ನಿದರ್ಶನಗಳು ಅಪರೂಪದ್ದು ಮತ್ತು ಇದಕ್ಕಿಂತ ಬೇರೆ ಉದಾಹರಣೆಗಳು ಸಿಗಲಾರದು ಎಂಬಂತೆ ಕವಿ ಚಿತ್ರಿಸಿದ್ದಾನೆ. ಕವಿ ಇದನ್ನು ಅನುಭವಿಸಿ ಬರೆದಿದ್ದಾನೆ ಎಂಬುದರಲ್ಲಿ ಸಂಶಯವಿಲ್ಲ. ಮಣ್ಣಿನೊಂದಿಗೆ ಮಣ್ಣು, ನೀರಿನೊಡನೆ ನೀರು, ಬೆಳಕಿನೊಡನೆ ಬೆಳಕು, ಗಾಳಿಯೊಡನೆ ಗಾಳಿ, ಗಗನದೊಡನೆ ಗಗನ ಇಂತಾ ಪ್ರಾಕೃತಿಕ ಹಿನ್ನೆಲೆಯನ್ನು ಭೂಮಿಕೆಯನ್ನಾಗಿ ಸೃಷ್ಟಿಸಿ ನಲ್ಲ-ನಲ್ಲೆಯರ ಬೆರೆಯುವಿಕೆಯನ್ನು ಗಟ್ಟಿಗೊಳಿಸಿದ್ದಾರೆ. ಹೃದಯದಲ್ಲಿ ಇನ್ನೊಂದು ಹೃದಯವನ್ನು ಕಿತ್ತು ಹಾಕಲು ಅಸಾಧ್ಯವೆಂಬಂತೆ

---

[58] ಹಾಡು ಹಸೆ- ನಿನ್ನ ನೆನೆವೆ

[59] ಹಾಡು ಹಸೆ- ಸಂಗಮ

ಕೂಡಿಸಿ ಬಿಟ್ಟಿದ್ದಾರೆ. ಪ್ರೇಮಿಗಳ ಹೃದಯ ಬಡಿತವೇ ಅಂಥದ್ದು. ಅವರಿಬ್ಬರ ಅನುರಾಗವೇ ಅಪರೂಪದ ಚಿತ್ತಾರ. ಅವರಿಬ್ಬರ ಬೆರೆಯುವಿಕೆಯೇ ಈ ಕವನದಾದ್ಯಂತ ಇರುವ ಒಡಲಾಳ. ಎಲ್ಲಿಯೂ ಚ್ಯುತಿ ಬರದಂತೆ ಕೆ. ಎಸ್. ನ ಕಾಳಜಿಯಿಂದ, ತುಂಬಾ ಸೃಜನಾತ್ಮಕವಾದ ವಿವೇಚನೆಯಿಂದ ಈ ಕವನವನ್ನು ಚಿತ್ರಿಸಿದ್ದಾರೆ. Burns : O my Love's like a red, red rose ಕವಿ ಬಿ. ಎಂ. ಶ್ರೀ ಅನುವಾದಿಸಿದ 'ನನ್ನ ಪ್ರೇಮದ ಹುಡುಗಿ' ಕವನದ ಚರಣಗಳನ್ನು ಗಮನಿಸಿದಾಗ;

ನನ್ನ ಪ್ರೇಮದ ಹುಡುಗಿ ತಾವರೆಯ ಹೊಸಕೆಂಪು,
ತಾವರೆಯ ಹೊಸ ಅರಳ ಹೊಳೆವ ಕೆಂಪು
ನನ್ನ ಪ್ರೇಮದ ಹುಡುಗಿ ಕೊಳಲ ಮೆಲುನುಡಿಯಿಂಪು
ಕೊಳಲು ಮೋಹಿಸಿ ನುಡಿದ ಗಾನದಿಂಪು

ಇಲ್ಲಿ ಕವಿ ತನ್ನ ಹುಡುಗಿಯೊಂದಿಗೆ ಬೆರೆತು ಹೋಗಿರುವುದನ್ನು ಚಿತ್ರಿಸುತ್ತಾನೆ; ಅವಳ ಪ್ರೇಮ ಎಷ್ಟು ಅಮರ ಎಂಬಾಗ ಹೀಗೆ ಹೇಳುತ್ತಾನೆ.

ಬತ್ತುವುವು ಮುಂದಾಗಿ ಕಡಲುಗಳು ಎಲೆ ಚೆಲುವೆ
ಕರಗುವುವು ಬಂಡೆಗಳು ಬಿಸಿಲಿನೊಳಗೆ,
ಕರಗಲಾರದು ಚೂರು ಪ್ರೇಮದೊಳಗೆಲೆ ಚೆಲುವೆ
ಬೆರೆದಿರಲು ಜೀವಕಳೆ ದೇಹದೊಳಗೆ

ಬರ್ನ್ಸ್ ಬರೆದ ಈ ಕವನವು ಕೆ. ಎಸ್. ನ ಅವರ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿದಂತೆ ತೋರುತ್ತದೆ. ಕವಿ ಕೆ. ಎಸ್. ನ ಇಲ್ಲಿ ತಮ್ಮದೇ ಆದ ವಿಭಿನ್ನ ದೃಷ್ಟಿಕೋನದಿಂದ ನಲ್ಲ-ನಲ್ಲೆಯರ ಸಂಗಮಕ್ಕೆ ಹೆಚ್ಚು ಜೀವವನ್ನು ತುಂಬಿದ್ದಾರೆ.

ಓ ನನ್ನ ನಲ್ಲೆ, ನಗುತಿರುವೆಯಲ್ಲೆ!
　　ನನ್ನೆದೆಯ ತುಂಬ ನೀನೆ
ಈ ಕತ್ತಲೊಳಗೆ ಹುಡುಕುವುದ ಬೇಡ
　　ಇಲ್ಲಿಹುದು ನಿನ್ನ ವೀಣೆ
ನೀ ನುಡಿಸಿ ತೆರೆದ ಹೊಂಗನಸಿನಲ್ಲಿ
　　ನನಗಿರಲಿ ಒಂದು ತಾಣ
ನಾ ಬಡವನಹುದು; ಈಗೇನ ಕೊಡಲಿ?
　　ಈ ಮುತ್ತು ನನ್ನ ಪ್ರಾಣ[೬೦]

---

[60] ಹಾಡು ಹಸೆ- ನಾ ನಿನ್ನ ಕಂಡೆ

'ನಾ ನಿನ್ನ ಕಂಡೆ' ಎಂಬ ಈ ಕವನದಲ್ಲಿ ಕವಿ ಪ್ರಣಯದ ಸಾಗರದಲ್ಲಿ ಸಂಪೂರ್ಣವಾಗಿ ಮುಳುಗಿ ಬಿಡುತ್ತಾನೆ. ಕಣ್ಣು ತೆರೆದಲ್ಲಿ ಪ್ರೀತಿ, ಕಣ್ಣು ಮುಚ್ಚಿದಲ್ಲಿ ಪ್ರೀತಿ, ಎಲ್ಲೆಲ್ಲೂ ಪ್ರೀತಿ ಪ್ರೀತಿ. ಈ ಪ್ರೀತಿಯ ಆವೇಗವೇ ಅಂಥದ್ದು, ಎಂಥವನನ್ನಾದರೂ ತನ್ನ ಕೈಯಲ್ಲಿಡಿದು ಆಡಿಸಿ ಬಿಡುತ್ತದೆ. ಹಗಲಿರಲಿ, ಇರುಳಿರಲಿ, ಬೆಳಕಿರಲಿ, ಕತ್ತಲೆಯಿರಲಿ ಹೃದಯದಲ್ಲಿ ಸ್ಥಾಪಿತವಾದ ಪ್ರೇಮ ಮೂರ್ತಿಗೆ ಇದರ ಪರಿವೆಯಿಲ್ಲ. ಪ್ರೇಮಿಯ ಕನಸಿನಲ್ಲಿ ಒಂದು ತಾಣವು ಪರಸ್ಪರರಿಗೇ ಮೀಸಲಾಗಿರುತ್ತದೆ. ಪ್ರೇಮ ತೀರ ಹೆಚ್ಚಾದಾಗ, ಉದ್ವೇಗಕ್ಕೆ ಒಳಗಾದಾಗ ಸಿಹಿಯಾದ ಮುತ್ತು ತನ್ನ ಕಾರ್ಯವನ್ನು ತೋರಿಸಿಬಿಡುತ್ತದೆ. ಮುತ್ತು ಅವನಲ್ಲಿರುವ ಸಂಪತ್ತು. ಹಣಕಾಸಿನಲ್ಲಿ ಬಡತನವಿದ್ದರೂ ಮುತ್ತಿನ ವಿಚಾರದಲ್ಲಿ ಅಂದರೆ ಪ್ರೀತಿಯ ವಿಷಯದಲ್ಲಿ ಮಾತ್ರ ಬಡತನವಿಲ್ಲವೆಂದು ನಲ್ಲನು ಸಮಾಧಾನ ಪಟ್ಟುಕೊಳ್ಳುತ್ತಾನೆ.

ನಿಜದ ಸಂತಸದಲ್ಲಿ ಬಿರಿದ ಮಲ್ಲಿಗೆಯಿಂದ
        ಬರುವ ಕಂಪಿನ ಹೆಸರು ಪ್ರೇಮವೆಂದು;
ನೀಲಾಂತರಿಕ್ಷದಲಿ ಹೊಳೆವ ನಕ್ಷತ್ರಗಳ
        ಕಣ್ಣಸನ್ನೆಯ ಹೆಸರು ಪ್ರೇಮವೆಂದು[61]

ಪ್ರೇಮವೆಂದರೆ ಅದೊಂದು ಸುಗಂಧ ದ್ರವ್ಯ. ಆಘ್ರಾಣಿಸಿದಷ್ಟು ಸುಖವಿದೆ. ಆಸ್ವಾದಿಸಿದಷ್ಟು ರುಚಿಯಿದೆ. ಮಲ್ಲಿಗೆಯ ಕಂಪಿನಂತೆ ಪ್ರೇಮವೆಂಬುದು ಕವಿಯ ಅಭಿಪ್ರಾಯ. ನಕ್ಷತ್ರದಂತೆ ಪ್ರೇಮವೂ ಸಹ ಮಿನುಗುತ್ತಿರುತ್ತದೆ. ಹಕ್ಕಿಗಳ ಇಂಪಾದ ಗಾನದಲ್ಲಿ ತಂಪಾದ ಪ್ರೇಮವಿದೆ. ತುಟಿಯಂಚಿನ ಕಿರುನಗೆಯಲ್ಲಿಯೂ ಮಧುರವಾದ ಪ್ರೇಮವಡಗಿದೆ. ಹಾಡಿದ ಹಾಡಿನಲ್ಲಿ, ಮಿಡಿಯುವ ಹೃದಯದಲ್ಲಿ ಪ್ರಣಯವೇ ಅಡಗಿದೆ. ನಲ್ಲೆ ಹತ್ತಿರ ಬಂದಾಗ ಅವಳ, ಕೆನ್ನೆಗೆ ನೀಡುವ ಮಧುರ ಚುಂಬನದಲ್ಲಿಯೂ ಪ್ರೀತಿ ಇದೆ. ಬಾಳನೇರಿತಗಳ ಪಯಣದಲ್ಲೆಲ್ಲ ಪ್ರೇಮವೆಂಬುದು ಬೆರೆತೇ ಇರುತ್ತದೆ. ನಲ್ಲನು ಇಲ್ಲಿ ಪ್ರೇಮವನ್ನು ಚಪ್ಪರಿಸುತ್ತಾನೆ. ಸವಿಯುತ್ತಾನೆ. ಹೀರುತ್ತಾನೆ, ಆನಂದಿಸುತ್ತಾನೆ. ಭಾವನಾ ಜೀವಿಯಾಗಿ ಪ್ರೇಮದ ಲೋಕದಲ್ಲಿಯೇ ತನ್ಮಯನಾಗಿ ಬಿಡುತ್ತಾನೆ. ಕೆ. ಎಸ್. ನ ಅವರು 'ಪ್ರೇಮ' ಕವನದಲ್ಲಿ ಪ್ರೇಮ ತಪಸ್ವಿಯಾಗಿ ಕಂಡುಬರುತ್ತಾರೆ.

ಸರಗೂರ ಸಂತೆಯಲಿ
ಹೂವ ಮಾರಿದ ಹುಡುಗಿ
ನೀನಲ್ಲವೆನ್ನುವುದು ನನಗೆ ಗೊತ್ತು
ಕೋಗಿಲೆಯ ಹಾಡಿನಲಿ ಮಲ್ಲಿಗೆಯ ಹೂವರಳಿ
ಉಗುರು ಬೆಚ್ಚಗೆ ಇತ್ತು ಅವಳ ಮುತ್ತು.

---

[61] ಹಾಡು ಹಸೆ– ಪ್ರೇಮ

ಅವಳ ತುಟಿ ಮಾಂದಳಿರು;

ಅವಳುಸಿರು ತಂಬೆಲರು;

ಅವಳ ಕಣ್ಣುಗಳಂತು ಜಿಂಕೆಗಣ್ಣು

ಅವಳ ಬೈತಲೆ ಚೆಲುವು;

ನುಡಿಗೆ ಸಿಲುಕದ ಒಲವು;

ಒಳದನಿಯ ಮರುದನಿಯೆ ತುಂಬ ಚೆನ್ನ.[೬೨]

ಹೂವಿನ ಮನಸ್ಸಿನ ಹುಡುಗಿ, ಹೂವಿನಷ್ಟೇ ಕೋಮಲವಾದ ಹುಡುಗಿ, ಹೂವಿನಷ್ಟೇ ಶ್ರೇಷ್ಠವಾದ ಹುಡುಗಿ ಕವಿಯ ನಲ್ಲೆ. ಅವಳ ಚುಂಬನವು ಚಳಿಗಾಲದಲ್ಲಿ ಕಂಬಳಿಯನ್ನು ಹೊದೆದಷ್ಟು ಬೆಚ್ಚಗಿನ ಅನುಭವವನ್ನುಂಟು ಮಾಡಿದೆ. ಮಾಧುರ್ಯ ವರ್ಣವನ್ನು ಬಳಸಿ ಬರೆದಿರುವ 'ಅವಳು ಯಾರು?' ಎಂಬ ಕವನವು ಹಿತವಾದ ಅನುಭವವನ್ನುಂಟು ಮಾಡುತ್ತದೆ. ಶೃಂಗಾರ ರಸವನ್ನು ಕವಿ ಇಲ್ಲಿ ಯಥೇಚ್ಛವಾಗಿ ಬಳಸಿದ್ದಾನೆ. ಅವಳ ಕಣ್ಣುಗಳನ್ನು ಜಿಂಕೆಯ ಕಣ್ಣಿಗೆ ಹೋಲಿಸುವ ಪರಿ ಅನನ್ಯವಾದುದು. ಅಂತರಾಳದ ಪಿಸುಮಾತು ನಲ್ಲನ ಹೃದಯವನ್ನು ಸೂರೆಗೊಂಡಿದೆ. ಅವಳ ನೆನಪು 'ಬಾಂದಳದಲ್ಲಿ ಚಂದ್ರ ಬಿಂಬ' ಈ ಹೋಲಿಕೆಯು ನಲ್ಲನ ಪ್ರೇಮವನ್ನು ಬಹು ಎತ್ತರಕ್ಕೆ ಕೊಂಡೊಯ್ದಿದೆ. ನನ್ನೊಂದಿಗೆ ಹೇಗೆ ಇವಳು ಬಂದಳು? ಏಕೆ ಬಂದಳು? ಕಾರಣವನ್ನು ಹುಡುಕಲು ಕವಿ ಇಲ್ಲಿ ಸೋತಿದ್ದಾನೆ. ಆದರೆ ಅವನಲ್ಲಿರುವ ಪ್ರಣಯಾಸಕ್ತಿ ಗೆದ್ದಿದೆ. ಸಮಾಜದಲ್ಲಿ ಗಂಡು ಹೆಣ್ಣುಗಳ ಆಕರ್ಷಣೆಯೇ ಅಂಥಾದ್ದು. ಪ್ರೇಮದ ಸೇತುವೆಗೆ ಕಾರಣವನ್ನು ಹುಡುಕುವುದು ಬಹಳ ಪ್ರಯಾಸದ ಕೆಲಸವೆಂಬುದನ್ನು ನಾವು ಕಾಣಬಹುದು. ಹೊಸಗನ್ನಡದ ಕಾವ್ಯವಾಹಿನಿಯಲ್ಲಿ ಪ್ರೇಮಗೀತೆಗಳಿಗೇ ಮೀಸಲಾಗಿ ಹೊರಬಿದ್ದ ಮೊದಮೊದಲಿನ ಪುಸ್ತಕ ತೀ. ನಂ. ಶ್ರೀ ಅವರ 'ಒಲುಮೆ' ಅದಕ್ಕೆ ಸಂವಾದಿ ಪದ 'ಪ್ರೇಮ'ದ ಮೇಲಿನ ಈ ಕವನವು ತೀ. ನಂ. ಶ್ರೀ ಯವರ ಹಲವು ಅಭಿಪ್ರಾಯಗಳನ್ನು ಒಮ್ಮೆಲೆಯೇ ನೆನಪಿಸಿಬಿಡುತ್ತದೆ. ಅಂತ ಚಮತ್ಕಾರವನ್ನು ಕೆ. ಎಸ್. ನ ಪ್ರಸ್ತುತ ಕವನದ ಮೂಲಕ ತೋರಿಸಿದ್ದಾರೆ.

ಗಿರಿಗಳೆತ್ತರದಲ್ಲಿ ಬೆಳ್ದಿಂಗಳಿಳಿದಾಗ

ನರುಗೆಂಪು ಸುಳಿದಾಗ ಹೂ ಬನದಲಿ

ಕೆರೆಯ ಏರಿಯ ಮೇಲೆ ನಾನು ಬರುತಿರುವಾಗ

ನಿನ್ನ ನೆನಪಾಗುವುದು ಸಂಜೆಯಲ್ಲಿ [೬೩]

ಪ್ರೇಮಿಗಳಿಗೆ ಬೆಳದಿಂಗಳು ಪ್ರಣಯವನ್ನು ಉತ್ತೇಜಿಸುವ ಅಂಶವಾಗಿದೆ. ಸಂಜೆ ಇಳಿಯುತ್ತಿದ್ದಂತೆ ವಾತಾವರಣವು ತಂಪನ್ನು ಉಂಟಾಮಾಡುತ್ತದೆ. ಆ ಸಮಯದಲ್ಲಿ ನಲ್ಲೆಗಾಗಿ ಕಾತರಿಸುವ ನಲ್ಲನ ಮನಸ್ಸನ್ನು ಕವಿ ಇಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾನೆ. ಒಂಟಿತನವು ಅವನಲ್ಲಿ ಸುಳಿದು ಕಾಡುತ್ತದೆ.

---

[62] ಹಾಡು ಹಸೆ- ಅವಳು ಯಾರು

[63] ಹಾಡು ಹಸೆ- ಮೊದಲಸಲ ಕಂಡಾಗ

ನಲ್ಲೆಯ ಸಾಮಿಪ್ಯಕ್ಕಾಗಿ ಅವನ ಮನಸ್ಸು ಹಾತೊರೆಯುತ್ತದೆ. ಹೃದಯದಲ್ಲಿ ಅನುರಾಗದ ಹಾಡು ಹೊಮ್ಮುತ್ತದೆ. ಅವಳ ಭೇಟಿಯೂ ಅವನಿಗೆ ಸಿಕ್ಕೇ ಬಿಡುತ್ತದೆ. ಅವನ ತುಮುಲವನ್ನು ಪ್ರೇಮಕ್ಕಾಗಿ ಹಾತೊರೆಯುವ ನಲ್ಲನ ಸ್ಥಿತಿಯನ್ನು ಚೆನ್ನಾಗಿ ನಲ್ಲೆಯು ಮನಗಾಣುತ್ತಾಳೆ. ಆದರೆ ಅವಳಿಗೆ ಸಂಕೋಚ, ನಾಚಿಕೆ ಒಮ್ಮೇಲೆ ಅವನೊಂದಿಗೆ ಬೆರೆಯಲು ಅಡ್ಡಿಪಡಿಸುತ್ತದೆ. ನಲ್ಲನು ಅವಳೊಂದಿಗೆ ಮುಕ್ತವಾಗಿ ಪ್ರಣಯವನ್ನು ಹಂಚಿಕೊಳ್ಳಲು ಒತ್ತಾಯಿಸುತ್ತಾನೆ. ಮನಸ್ಸನ್ನು ಹೇಳಿಕೊಳ್ಳಲು ರಹಸ್ಯವೇಕೆ? ಅವಳೇ ಅವನ ಪ್ರೇಮದ ಪಲ್ಲವಿ. ಅವನೇ ಅವಳ ಜೀವನದಲ್ಲಿ ಸಂಪೂರ್ಣ ಸೇರಿಕೊಂಡಿರುವಾಗ, ನಾಚಿಕೆ ಬೇಡವೆಂಬ ಆತನ ಅಭಯವು ಮೆಚ್ಚುವಂತದ್ದಾಗಿದೆ. ಮೊದಲ ಸಲ ಕಂಡವನಾಗಿದ್ದರೂ, ಜೀವನ ಪೂರ್ತಿ ಅವಳೊಂದಿಗೆ ತಾನಿರುತ್ತೇನೆ ಎಂಬ ವಿಶ್ವಾಸದ ನುಡಿಯು ಆಕೆಯ ಆತಂಕವನ್ನು ದೂರ ಮಾಡುತ್ತದೆ.

ಹಸಿರ ಮೇಲೆ ಮೊಸರು ಚೆಲ್ಲಿದೆಲ್ಲ ಬಿಳಿಯ ಹೂಗಳಲ್ಲಿ
ತೋಟದೊಂದು ತೆರವಿನಲ್ಲಿ ಕುಣಿದ ನೀಲಿ ನವಿಲಿನಲ್ಲಿ
ತಾರಾಗ್ನಿಯ ಕಿಡಿಗಳಿಂದ ಬರೆದ ಭಾವಗೀತೆಯಲ್ಲಿ
ಕಡಲ ತಡಿಗೆ ಏರಿ ಬಂದ ಪೆರ್ದೆರೆಗಳ ಗಾನದಲ್ಲಿ ನಾನು ಕಂಡೆನೊಲವನು![೬೪]

ಪ್ರೇಮವು ಹೃದಯದಲ್ಲಿ ಸುಪ್ತವಾಗಿರುತ್ತದೆ. ಅದು ಪ್ರಕಟವಾಗಲು ಜಾಗೃತಗೊಳ್ಳಲು ಮನಸ್ಸು ಸದಾ ಕಾತರವಾಗಿರುತ್ತದೆ. ಪ್ರೇಮಿಯ ದುರ್ಬಲ ಮನಸ್ಸಿನ ಚಿತ್ರಣವಾಗಿ ಕವಿ ಈ ಕವನವನ್ನು ಬಿಂಬಿಸಿದ್ದಾನೆ. ಕಾದ ಹೃದಯವು ನಲ್ಲೆಯ ಆಗಮನಕ್ಕಾಗಿ ಹಪಹಪಿಸುತ್ತಿರುತ್ತದೆ. ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುತ್ತಿರುವಾಗ ಹೃದಯದ ಮೂಲೆಯೊಂದರಲ್ಲಿ ಪ್ರೇಮದ ಪಿಸುಮಾತೂ ಸಹ ಭಾವಕೋಶದಿಂದ ಹೊರ ಹೊಮ್ಮಿ ಬಿಡುತ್ತದೆ. ಕುಣಿದಾಡುವ ನವಿಲಿನಲ್ಲಿ ಹೊರಚೆಲ್ಲುವ ಕಿರಣಗಳಲ್ಲಿ, ಹೆದ್ದೆರೆಗಳ ಆರ್ಭಟದಲ್ಲಿ ಪ್ರಣಯದ ರಾಗವು ತೇಲಿ ಬರುತ್ತದೆ. ಕಾಮನಲ್ಲಿನ ಬಣ್ಣದಲ್ಲಿ, ಹಸುಕರುಗಳು ಎಬ್ಬಿಸಿದ ಧೂಳಿನಲ್ಲಿ, ಗೊಲ್ಲನೊಬ್ಬನು ತನ್ನ ನಲ್ಲೆಗೆ ಕೊಟ್ಟ ಮುತ್ತಿನಲ್ಲಿ ಈ ಪ್ರೇಮಿಯು ತನ್ನ ಪ್ರೇಮವನ್ನು ಒರೆಗೆ ಹಚ್ಚುತ್ತಾನೆ. ತಂಬೂರಿ ತಂತಿಯ ನಾದದಲ್ಲಿ ಈ ಪ್ರೇಮಿಯು ತನ್ನ ಪ್ರೇಮದ ಸಂಗೀತವನ್ನು ಕೇಳಿಸಿಕೊಳ್ಳುತ್ತಾನೆ. ಪ್ರಕೃತಿಯೊಂದಿಗೆ ತನ್ನ ಪ್ರೇಮವನ್ನು ಸಮೀಕರಿಸಿಕೊಳ್ಳುವ ಕವಿಯ ಕಲ್ಪನೆ ಇಲ್ಲಿ ವೈಶಿಷ್ಟ್ಯಪೂರ್ಣವಾಗಿ ಮೂಡಿ ಬಂದಿದೆ.

ಮಿಕ್ಕವರೊಂದಿಗೆ ನಗುನಗುತಿರುವೆ,
ನನ್ನೊಂದಿಗೆ ಬರಿ ಗೋಳನೆ ಕರೆವೆ,
ನಲಿವನು ಬೀರುತ ಬಂದೇ ಬಿಡುವೆ,
ಕಮಲಿನಿ, ಕಮಲಿನಿ, ನಿನಗಿದು ತರವೆ,
– ಒಲವೋ ಹಗೆಯೋ ಏನು ಇದು?[೬೫]

---

[64] ಹಾಡು ಹಸೆ– ಕಂಡೆನೊಲವನು
[65] ಹಾಡು ಹಸೆ– ಏನು ಇದು

ನಲ್ಲನಿಗೆ ನಲ್ಲೆಯದ್ದೇ ಸದಾ ಧ್ಯಾನ. ಅವಳು ಅವನೊಂದಿಗೆ ಸದಾ ಇರಬೇಕು. ಸದಾ ಅವನೊಂದಿಗೆ ಮಾತ್ರ ನಗುತಿರಬೇಕು. ಮಿಕ್ಕವರೊಂದಿಗೆ ಅವಳು ನಕ್ಕಾಗ ತನ್ನ ಪ್ರೇಮಕ್ಕೆ ಭಂಗ ಉಂಟಾಯಿತೇನೋ ಎಂಬ ಆತಂಕ ಆತನಿಗೆ. ಅವಳು ನಲ್ಲನೊಂದಿಗೆ ದುಃಖವನ್ನು ಮಾತ್ರ ಹಂಚಿಕೊಂಡಾಗ ಹೃದಯವೇ ಕಿತ್ತು ಬಂದ ಅನುಭವ ಆತನಿಗೆ. ಆದರೆ ಕ್ಷಣದಲ್ಲಿಯೇ ಅವಳು ಬದಲಾಗಿ ನಗಲು, ನಲಿಯಲು ಆರಂಭಿಸಿದಾಗ ಇವನಿಗೆ ಆಗುವ ಸಂತಸ ವರ್ಣಿಸಲು ಅಸಾಧ್ಯ ನಗುವನ್ನು ಹಂಚಿಕೊಳ್ಳಲು ನೂರಾರು ಜನ. ಅಳುವನ್ನು ಹಂಚಿಕೊಳ್ಳಲು ಎಷ್ಟು ಜನ ಮುಂದೆ ಬಂದಾರು? ಕಂಡವರಲ್ಲೆಲ್ಲ ಅಳುವನ್ನು ಹಂಚಿಕೊಳ್ಳುವುದು ನ್ಯಾಯ ಸಮ್ಮತವಲ್ಲ. ತನ್ನ ಹೃದಯಕ್ಕೆ ತುಂಬಾ ಆತ್ಮೀಯರಾದವರಲ್ಲಿ ಮಾತ್ರ ನೋವನ್ನು ಹಂಚಿಕೊಳ್ಳುತ್ತೇವೆ. ಈ ನಲ್ಲೆಯೂ ಇದೇ ರೀತಿ ನಡೆದುಕೊಂಡಿದ್ದಾಳೆ. ನಲ್ಲನು ಈ ಸೂಕ್ಷ್ಮತೆಯನ್ನು ಅರಿಯದೇ ಹಗೆಯೋ? ಒಲವೋ? ಎಂದು ಪ್ರಶ್ನಿಸುತ್ತಾನೆ. ಪ್ರಣಯಿಗಳ ಜೀವನವೇ ಅಂಥದ್ದು. ಹತ್ತಿರ ಬಂದಾಗ ದೂರ ಸರಿಯುತ್ತಾ. ದೂರವಿದ್ದಾಗ ಹತ್ತಿರವಾಗಲು ಬಯಸುತ್ತಾ ಪ್ರೇಮವನ್ನು ಗಟ್ಟಿ ಮಾಡಿಕೊಳ್ಳುತ್ತಲೇ ಸಾಗುತ್ತಾರೆ. ಕವಿ ಇಲ್ಲಿ 'ಬಿಂಕದ ಹೆಣ್ಣು' ಇವಳು ಎಂದು ಸಂಭೋದಿಸುತ್ತಾರೆ. ಇದು ಪ್ರೀತಿಯಿಂದ ಬಂದ ಸಂಭೋಧನೆಯಷ್ಟೇ. Scott (1771-1832) Proud Maisie ವಿರಚಿತ ಕವನವನ್ನು ಬಿ. ಎಂ. ಶ್ರೀ ಯವರು 'ಬಿಂಕದ ಸಿಂಗಾರಿ' ಎಂಬ ಶೀರ್ಷಿಕೆಯಡಿ ಅನುವಾದಿಸುತ್ತಾ ಹೀಗೆ ಹೇಳಿದ್ದಾರೆ:

ಚಿಮ್ಮುತ ನಿರಿಯನು ಬನದಲಿ ಬಂದಳು
ಬಿಂಕದ ಸಿಂಗಾರಿ;
ಹೊಮ್ಮಿದ ಹಸುರಲಿ ಮೆರೆಯಿತು ಹಕ್ಕಿ
ಕೊರಲಿನ ದನಿದೋರಿ.

ಕೆ. ಎಸ್. ನ ಅವರು ಕವನದಲ್ಲಿ 'ಬಿಂಕದ ಹೆಣ್ಣು' ಎಂದು ಸಂಬೋಧಿಸುವುದಕ್ಕೂ ಬಿ. ಎಂ. ಶ್ರೀ ಅವರು 'ಬಿಂಕದ ಸಿಂಗಾರಿ' ಎಂದು ಕರೆಯುವುದಕ್ಕೂ ಈ ಪದದ ವೈಶಿಷ್ಟ್ಯವು ಮಹತ್ವವನ್ನು ಪಡೆದುಕೊಂಡಿದೆ.

ಆಡಾಡು ಬಾ, ನವಿಲೆ ತೆರೆದೆರಡು ಸಾವಿರದೆರಡು ಕಣ್ಣ
ಪಚ್ಚೆಗಡಿಗಳ ನಡುವೆ ರತ್ನದೆಳೆಯಿಟ್ಟ ಕಣ್ಣ
ತೋಟ ಸಿರಿವಂತನದು ಹೂವು ಬಳ್ಳಿಯದು;
ನಾನು ಮಾತ್ರವೆ ಇಲ್ಲಿ ನನ್ನದಾಗಿಹೆನು [66]

ಹಿಂದಿನಿಂದಲೂ ಪ್ರೇಯಸಿಯನ್ನು, ಚಿನ್ನ, ರನ್ನ, ಬೆಳದಿಂಗಳ ಬಾಲೆ, ಅರಗಿಣಿ ಎಂದೆಲ್ಲ ಕರೆದುಕೊಂಡು ಬಂದಿದ್ದಾರೆ. ಆದರೆ ನಲ್ಲ ಇಲ್ಲಿ ತನ್ನ ನಲ್ಲೆಯನ್ನು 'ನವಿಲು' ಎಂದು ಕರೆದಿರುವುದು

---

[66] ಹಾಡು ಹಸೆ- ನವಿಲಿಗೆ

ಬಹಳ ಔಚಿತ್ಯವೆನಿಸುತ್ತದೆ. ತನ್ನ ಅಂತರಾಳವನ್ನು ಅರ್ಥೈಸಿಕೊಂಡು ಬಳಿಗೆ ಬರುವಂತೆ ಅವಳಲ್ಲಿ ಬೇಡಿಕೊಳ್ಳುತ್ತಿದ್ದಾನೆ. ತಮ್ಮಿಬ್ಬರ ಹೊಂದಾಣಿಕೆ ಸೂಕ್ತವಾಗಿದೆ ಎಂದು ಆತನು ಭಾವಿಸಿದ್ದಾನೆ. ಸೌಂದರ್ಯದಲ್ಲಿ ಶ್ರೀಮಂತಿಕೆಯಿರುವ ಆಕೆ ಮನೆಗೆ ಬಂದರೆ ಬಡತನದ ಅರಿವು ಆತನಿಗಿರುವುದಿಲ್ಲ. ಅವಳ ಇಂಪಾದ ಧ್ವನಿಯು ಅವನನ್ನು ಹುಚ್ಚನನ್ನಾಗಿಸಿದೆ. ಪ್ರಣಯಿಗಳು ಚೆಲುವನ್ನು ಆಸ್ವಾದಿಸುವ ಪರಿಯನ್ನು ಕವಿ ಇಲ್ಲಿ ಚೆನ್ನಾಗಿ ಚಿತ್ರಿಸಿದ್ದಾನೆ. ಆ ಚೆಲುವು ತನ್ನ ಬಳಿಯೇ ಸದಾ ಇರಲಿಕ್ಕಾಗಿ ಎಂಥಾ ತ್ಯಾಗಕ್ಕೂ ಇವರೀರ್ವರೂ ಸಿದ್ಧರಿರುತ್ತಾರೆ ಎನ್ನುವದು ವಾಸ್ತವದ ಸಂಗತಿ.

ನಿನ್ನ ನಗೆ-ಮಲ್ಲಿಗೆಯ ಪರಿಮಳದ ಪರಿಧಿಯಲಿ
ನೀನು ಆಡಿಸಿದಂತೆ ಕುಣಿವೆ ನಾನು
ನಿನ್ನ ಫಲಪುಷ್ಪಗಳ ಹೆಗ್ಗಾಡಿನೊಲವಿನಲಿ
ನಿನ್ನ ಮನಬಂದಂತೆ ನಡೆಸು ನೀನು[೬೭]

ಹಿಂದಿನ ಕಾಲದಿಂದಲೂ ನಗುವಿಗೊಂದು ವಿಶೇಷ ಸ್ಥಾನವನ್ನು ನೀಡಲಾಗಿದೆ. ಎಂಥವರನ್ನಾದರೂ ಚುಂಬಕ ಶಕ್ತಿಯಂತೆ ಸೆಳೆಯುವ ಶಕ್ತಿಯು ನಗುವಿಗಿದೆ. ನಲ್ಲೆಯ ನಗುವು ನಲ್ಲನನ್ನು ಆಕರ್ಷಿಸಿದೆ. ಅದಕ್ಕಾಗಿ ಆತನು, ಅವಳು ಹೇಳಿದಂತೆ ಕುಣಿಯುವ ಬೊಂಬೆಯಾಗಿದ್ದಾನೆ. ಅವಳ ಅಭೀಷ್ಟದಂತೆ ಕುಣಿಯಲು ಈತನು ಸಿದ್ಧನಿದ್ದಾನೆ. ಅವಳು ಅವನ ಪಾಲಿಗೆ ಹರ್ಷೋಲ್ಲಾಸವನ್ನು ನೀಡುವ ಅಧಿದೇವತೆ. ಭವಿಷ್ಯದ ಹೊಂಗನಸಿಗೆ ಅವಳು ಕೈಜೋಡಿಸಿದ್ದಾಳೆ. ಸೋಲು-ಗೆಲುವಿನಲ್ಲಿ ಅವಳು ಪಾಲು ಅಧಿಕವಾಗಿದೆ. ನೆರಳಿನಲಿ ಬಿಸಿಲಿನಲಿ ಸಾಗುತಿಹೆನು...ಅವಳೊಂದಿಗೆ ಈತನಿದ್ದರೆ ಆಯಾಸದ ಅರಿವಿಲ್ಲ. ಅವಳ ಇಂಪಾದ ಧ್ವನಿಯಲ್ಲಿ ಹೃದಯದ ತಂಪನ್ನು ಉಣ್ಣುತ್ತಿದ್ದಾನೆ. "ನಗೆ-ಮಲ್ಲಿಗೆ" ಎಂಬ ಸಾದೃಶ್ಯವಾದ ಹೋಲಿಕೆಯಲ್ಲಿ ಕವಿ ಬಾಳಿನ ಸಾರ್ಥಕ್ಯವನ್ನು ಕಾಣುತ್ತಾನೆ. ಕವಿ ಕೆ.ಎಸ್.ನ ಅವರ ಚಿಕಿತ್ಸಕ, ಸಂಶೋಧನಾತ್ಮಕ ಬುದ್ಧಿಯನ್ನು ಈ ಕವನದಲ್ಲಿ ಕಾಣಬಹುದಾಗಿದೆ.

ನಲ್ಲೆಯ ತುಟಿ ಅದುರುತ್ತಿದೆ ನಲ್ಲನ ತುಟಿಯಲ್ಲಿ:
ನಸುಗೆಂಪಿನ ಉಂಗುರವಿದೆ ಆಕೆಯ ಬೆರಳಲ್ಲಿ.
ಮಲ್ಲಿಗೆ ಹೂ ಪರಿಮಳವಿದೆ ತುಂಬಿದ ಹೆರಳಲ್ಲಿ;
ಹೊಸ ವರ್ಷದ ಹೊಸ ಹಾಡಿದೆ ಆಕೆಯ ಕೊರಳಲ್ಲಿ [೬೮]

ಪ್ರಣಯದಲ್ಲಿ ಪರಸ್ಪರರು ಮುಳುಗೇಳುತ್ತಿದ್ದಾರೆ. ಚುಂಬನದ ವಿನಿಮಯವು ನಡೆದಿದೆ. ತುಟಿಗೆ ತುಟಿಯನ್ನು ಒತ್ತಿ ನೀಡುವ ಚುಂಬನವು ಲೋಕ ಪ್ರಸಿದ್ಧವಾಗಿದೆ. ಹೃದಯದ ಎಲ್ಲಾ ಭಾವನೆಗಳನ್ನು ಈ ದೀರ್ಘ ಚುಂಬನವು ಒಟ್ಟಿಗೇ ಹೇಳಿಬಿಡುತ್ತದೆ. ಪ್ರಣಯದ ಸಿಹಿಯಾದ ಮಕರಂದವನ್ನು ಹೀರುವ ದುಂಬಿಯಂತೆ ನಲ್ಲೆ ಎಂದು ಕವಿ ಹೇಳುತ್ತಾನೆ. ಅವಳ ಬೆರಳೇ ಬಹು ಸುಂದರ. ಅದರಲ್ಲೂ

---

[67] ಹಾಡು-ಹಸೆ ನಿನ್ನ ನಗೆ ಮಲ್ಲಿಗೆ

[68] ಮಲ್ಲಗೆ ಮಾಲೆ: ಪಲ್ಲವಗಳ ಪಲ್ಲವಿಯಲಿ

ತಿಳಿಗೆಂಪಿನ ಉಂಗುರವು ಅವಳ ಬೆರಳಲ್ಲಿರುವುದರಿಂದ ಬೆರಳಿನ ಸೌಂದರ್ಯವು ಇನ್ನೂ ಹೆಚ್ಚಾಗಿದೆ. ಜಡೆಗೆ ಮುಡಿದಿರುವ ಮಲ್ಲಿಗೆಯು ಅವಳ ರೂಪವನ್ನು ಇಮ್ಮಡಿಗೊಳಿಸಿದೆ. ಹೊಸ ವರ್ಷವು ಬಂದರೆ ಹೇಗೆ ಆನಂದವು ಹೆಚ್ಚುತ್ತದೋ, ಅಂತೆಯೇ ಅವಳು ಹೊಸತನದಿಂದ ಉಲ್ಲಸಿತಳಾಗಿದ್ದಾಳೆ. ಪ್ರಣಯಿಗಳು ಸದಾ ನವೋಲ್ಲಾಸದಿಂದ ಇರಲು ಬಯಸುತ್ತಾರೆ. ಅಲಂಕಾರಿಕ ವಸ್ತುಗಳು ಸಹ ಇದನ್ನೇ ಹೇಳುತ್ತದೆ. ಶೃಂಗಾರ ರಸ ವೈಭವನ್ನು ಕವಿ ಕೆ.ಎಸ್.ನ ಇಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ.

ಎದೆಯ ಕತ್ತಲೆಯ ಪೊದೆಯಲ್ಲಿ ಕಮಲಾ,
ವಜ್ರದುಂಗುರ:
ನಿನ್ನ ಕೆನ್ನೆಯಲಿ ಮೆಲ್ಲಗೆ ನನ್ನಾ
ಪ್ರೇಮದುಂಗುರ [೬೯]

ಹೃದಯದಲ್ಲಿ ಎಲ್ಲೋ ಒಂದು ಕಡೆ ಕತ್ತಲೆಯು ಆವರಿಸಿ ಬಿಟ್ಟಿದೆ. ಮುಂದೇನು? ಎಂಬ ಚಿಂತೆಯಲ್ಲಿರುವಾಗಲೇ ನಲ್ಲೆಯ ನೆನಪಾಗಿದೆ. ಅಲ್ಲಿ ಮಿಂಚಿನ ಸೆಳೆತವಿದೆ. ಅದು ಭರವಸೆಯ ಹೊಂಗನಸು ಎಂಬಂತೆ ಕಾಣುತ್ತಿದೆ. ಇವನ ಅಂತರಂಗದಲ್ಲಿ ನಲ್ಲೆಯ ಪ್ರೇಮದ ನುಡಿಯು ಮಾರ್ದನಿಸುತ್ತಿದೆ. ಪ್ರೇಮವನ್ನು ಸೂಚಿಸುವ ಮುತ್ತನ್ನು ಅವಳ ಕೆನ್ನೆಗೆ ಒತ್ತುವ ಬಯಕೆ ಉತ್ಕಟವಾಗಿದೆ. ನಲ್ಲನಿಗೆ ಬೇಸರವಾದಾಗ ನಲ್ಲೆಯ ನೆನಪೇ ಆತನಿಗೆ ಸಂಜೀವಿನಿ ಹೊಸ ಬೆಳಕಿನ ಬುಗ್ಗೆ ಅಲ್ಲಿ ಉಕ್ಕುತ್ತದೆ. ಇಲ್ಲಿ ಕವಿಯು ಬಾಳಿನ ಆಧಾರಸ್ತಂಭವನ್ನು ನೆನಪು ಮಾಡಿಕೊಂಡು ವರ್ಣಿಸುವ ರೀತಿ ಮನೋಜ್ಞವಾಗಿದೆ.

ನನ್ನ ಗುಡಿಸಿಲ ಮೇಲೆ ಮಲಗಿಹುದು ಬೆಳ್ಳಿ ಬೆಳಕು:
ಅರೆಬೆಳೆದ ಚಂದಿರನ ತಂಪಾದ ಎಳೆಯ ಬೆಳಕು
ನನ್ನಿನಿಯ ನಿನ್ನನ್ನೇ ಬಯಸುವೆನು ಅಗಲಿ ಕೊರಗಿ:
ನಾನಿಲ್ಲಿ ಕರಗುವೆನು ದುಃಖದಲ್ಲಿ ತೇಲಿ ಮುಳುಗಿ[೭೦].

"ವಿರಹಿಣಿ" ಕವನದ ಈ ಚರಣವು ಪ್ರೇಮದ ಆಳದ ತೀವ್ರತೆಯನ್ನು ಬಿಂಬಿಸುತ್ತದೆ. ಹೃದಯವನ್ನು ಒಂದು ಮನೆಯನ್ನಾಗಿ ಚಿತ್ರಿಸಿದ ರೀತಿ ವಿಸ್ಮಯವನ್ನುಂಟು ಮಾಡುತ್ತದೆ. ನಲ್ಲೆಯು ನಲ್ಲನ ಕುರಿತಾದ ಅಭಿಪ್ರಾಯವನ್ನು ಹೀಗೆ ಹೇಳುತ್ತಾಳೆ; ಏಳೇಳು ಜನ್ಮದಲ್ಲೂ ಆತನೇ ತನ್ನ ಇನಿಯ. ಅವನಿಂದ ಆಕಸ್ಮಿಕವಾಗಿ ದೂರವಾದರೂ ಅವನ ನೆನಪಿನಲ್ಲಿಯೇ ಆಕೆ ಉಳಿದು ಬಿಡುತ್ತಾಳೆ. ಅವಳ ಮುಗ್ಧ ಪ್ರೇಮದಲ್ಲಿ ಆನ್ಯರಿಗೆ ಸ್ಥಾನವೇ ಇಲ್ಲ, ತನ್ನ ಜೀವಮಾನವನ್ನೆಲ್ಲ ಅವನಿಗಾಗಿಯೇ ಸಮರ್ಪಿಸುವ ಆಕೆ ಹೃದಯವಂತೆ: ಕನಸಿನಲ್ಲಾಗಲಿ, ನನಸಿನಲ್ಲಾಗಲೀ ಎಂದೆಂದಿಗೂ ಅವನೇ ತನ್ನವನು, ಎಂಬ ಅವಳ ನಿರ್ಧಾರ ಇಂದಿನ ಸಮಾಜಕ್ಕೆ ಒಂದು ಆದರ್ಶವನ್ನು ಹೇಳುತ್ತದೆ. ಆ

---

[69] ಮಲ್ಲಿಗೆಯ ಮಾಲೆ : ಉಂಗುರ

[70] ಮಲ್ಲಿಗೆಯ ಮಾಲೆ–ವಿರಹಿಣಿ

ನಲ್ಲೆಗೆ ನಲ್ಲನ ಅಗಲುವಿಕೆಯೆಂದರೆ ಅದೊಂದು ಯಾತನೆ. ದುಃಖ ಸಾಗರದಲ್ಲಿ ಮುಳುಗೇಳುವ ಆಕೆಗೆ ಮತ್ತೊಂದು ಆಶ್ರಯವನ್ನು ಹುಡುಕುವ ಹಂಬಲವಿಲ್ಲ. ವಿರಹದ ಈ ಕವನವು ವಿರಹಿಗಳ ಮಾನಸಿಕ ತುಮುಲವನ್ನು ಬಹಳ ಮನಮೋಹಕವಾಗಿ ಚಿತ್ರಿಸಿದೆ.

ಹಬ್ಬದೂಟವನುಂಡು, ಒಬ್ಬಳೇ ಬಂದಾಳು
ಬಂದಾಳು ನೀರಬಳಿಗೆ;
ಹಳ್ಳದಿಣ್ಣೆಯ ದಾಟಿ, ಮುಳ್ಳುಬಾಗಿಲ ಮೀಟಿ
ಬಂದಾಳು ನನ್ನ ಚೆಲುವೆ
ಚೆಂದಮ್ಮ ಬಂದಾಳು, ಚಂದಿರನ ಬೆಳಕಾಗಿ
ಬಂದಾಳು ನನ್ನ ಬಳಿಗೆ[71]

ಕೆ.ಎಸ್.ನ ಅವರು ತನ್ನ ಪ್ರಿಯತಮೆಯನ್ನು ಹಲವಾರು ಹೆಸರಿನಿಂದ ಸಂಬೋಧಿಸಿದ್ದಾರೆ. ಪದುಮ, ಲಕ್ಷ್ಮಿ, ಶಾರದೆ, ಉಮಾ, ನವಿಲು, ಗೌರಿ, ಸ್ವಪ್ನಸುಂದರಿ, ಚೆಂದಮ್ಮ, ಕಮಲಾ, ಕನಕ ಇವೆಲ್ಲ ಸಾಂದರ್ಭಿಕವಾಗಿ ಬಳಸಿದ ಹೆಸರುಗಳಾಗಿವೆ. ಒಂದೊಂದು ಕವನದಲ್ಲೂ ಅವರು ಬಳಸಿದ ಹೆಸರುಗಳು ಸಮಯೋಚಿತವಾಗಿದೆ. ಇಲ್ಲಿ ಚೆಂದಮ್ಮ ಎಂಬ ನಲ್ಲೆ ಒಬ್ಬಳೇ ಇನಿಯನಿಗಾಗಿ ಬರುತ್ತಿದ್ದಾಳೆ. ಬರುವಾಗ ದಾರಿಯಲ್ಲಿ ಅವಳಿಗೆ ಹಲವು ಅಡೆತಡೆಗಳಿವೆ. ಅದರ ಪರಿವೆಯಿಲ್ಲದೆ ನಲ್ಲನ ಬಳಿ ಅವಳು ಬರುವ ರೀತಿ ಅತ್ಯಾಕರ್ಷಕ. ನಲ್ಲ-ನಲ್ಲೆಯರು ಪರಸ್ಪರ ಭೇಟಿಯಾಗುವ ತಾಣ ಯಾವುದೋ ಒಂದು ನದಿಯ ತೀರ. ಏಕಾಂತವನ್ನು ಈರ್ವರು ಬಯಸುತ್ತಾರೆ. ಪ್ರಶಾಂತವಾದ ಪರಿಸರದಲ್ಲಿ ಸರಸ-ಸಲ್ಲಾಪಕ್ಕೆ ತೊಡಗುತ್ತಾರೆ. "ಅವಳು ಬರುತ್ತಾಳೆ" ಎಂಬ ಕಲ್ಪನೆಯೇ ಆತನ ಹೃದಯದಲ್ಲಿ ತಂಗಾಳಿಯು ಬೀಸಿದಂತಾಗುತ್ತದೆ. ಇಲ್ಲಿ ಕಾಮದ ಪ್ರಸ್ತಾಪವಿಲ್ಲ, ಅಶ್ಲೀಲತೆಯ ವಾಸನೆಯಿಲ್ಲ, ಪವಿತ್ರವಾದ ಪ್ರೇಮದ ಸಮಾಗಮ ಮಾತ್ರ ಇಲ್ಲಿ ಕಾಣುತ್ತದೆ.

ನಲ್ಲೆ ಮುಡಿದ ಮೊಲ್ಲೆಯರಳು
"ಇಲ್ಲೆ ನಿಲ್ಲಿರೆಂದಿತು";
ಓರೆಗಣ್ಣಿನೊಂದು ಹೊರಳು
ಹೋಗಬೇಡಿ ರೆಂದಿತು [72]

ನಲ್ಲನು, ಸಂಜೆ ಪ್ರಯಾಣಿಸುತ್ತಿದ್ದಾನೆ ಎಂದು ತಿಳಿದ ನಲ್ಲೆಗೆ ಮನದಲ್ಲಿ ಬೇಗುದಿ ಹೆಚ್ಚಾಗಿದೆ. ಅವಳ ಕಣ್ಣಿನಿಂದ ಜಾರಿದ ಹನಿ ಈತನ ಮನಸ್ಸನ್ನು ತೊಳೆದು ಬಿಟ್ಟಿದೆ. ತುಟಿಯಲ್ಲಿ ಹೊರಡ ಬೇಕಿದ್ದ ಮಾತು ಅಲ್ಲಿಯೇ ನಿಂತಾಗ, ನಲ್ಲನ ಹೃದಯಕ್ಕೆ ಘಾಸಿಯಾಗಿದೆ. ಅವಳ ಮೌನದಲ್ಲಿ ಪ್ರಣಯರಾಗವಿರುವುದು, ನಲ್ಲನಿಗೆ ತಿಳಿದಿದೆ. ಅವಳು ಮುಡಿದ ಮಲ್ಲಿಗೆಯೂ ಸಹ ನಲ್ಲನು

---

[71] ಮಲ್ಲಿಗೆಯ ಮಾಲೆ- ಹೂವಿನ ಚೆಂದಮ್ಮ

[72] ಮಲ್ಲಿಗೆಯ ಮಾಲೆ-ಪಶ್ಚಾತ್ತಾಪ

ದೂರವಾಗದಿರಲೆಂದು ಆಶಿಸುತ್ತಿದೆ. ನೇರವಾಗಿ ನಲ್ಲನನ್ನು ದಿಟ್ಟಿಸುವ ಧೈರ್ಯ ಅವಳಿಗಿಲ್ಲ, ಹಾಗಾಂತ ಅವನನ್ನು ನೋಡದಿರಲೂ ಅವಳಿಂದ ಸಾಧ್ಯವಿಲ್ಲ. ನೂರಾರು ಭಾವನೆಗಳನ್ನು ಕಣ್ಣೇ ಹೇಳುತ್ತದೆ ಎಂಬುದು ಸರ್ವರೂ ಒಪ್ಪಿರುವ ಸಂಗತಿ. ಅವಳು ಕೋರೆಗಣ್ಣಿನಿಂದ ಓರೆ ನೋಟದಿಂದ ಆತನನ್ನು ನೋಡಿಬಿಟ್ಟಳು. ಅಲ್ಲೊಂದು ವಿನಂತಿಯಿತ್ತು. "ಹೋಗಬೇಡಿ" ಎಂಬ ದೈನ್ಯತೆ ಇತ್ತು ಅವನನ್ನು ಬಿಟ್ಟಿರಲಾರದ ಅಸಹಾಯಕತೆ ಇತ್ತು, ಮುಂದೇನು? ಎಂಬ ಪ್ರಶ್ನೆ ಇತ್ತು, ನಿಜವಾದ ಆದರ್ಶ ಪ್ರೇಮಿಗಳು ಮಾತ್ರ ಮುಖದ ಭಾವನೆಗಳಲ್ಲಿಯೇ ಹೃದಯದ ಪುಸ್ತಕವನ್ನು ಓದಿ ಬಿಡುತ್ತಾರೆ. ಇಲ್ಲಿ ಕವಿ ಭಾವನಾತ್ಮಕವಾಗಿ ಪ್ರೇಮಿಗಳ ಮೌನರಾಗ(ಪ್ರಣಯರಾಗ) ವನ್ನು ಚಿತ್ರಿಸಿದ್ದಾನೆ.

> ಇನಿಯ ಬಂದನು ಬಂದ: ಬಂದನೆ?
> ಎಂದು ಕಾದಿಹ ಹೆಣ್ಣಿಗೆ
> ಅವನೆ ಚಂದಿರ, ತಾನೆ ಚಂದ್ರಿಕೆ:
> ಬೇರೆ ಹುಣ್ಣಿಮೆ ಇವರಿಗೆ!

ಹೆಣ್ಣಿನ ಬಾಳಿನಲ್ಲಿ ನಲ್ಲನೇ ಚಂದ್ರ. ಇವಳೇ ಬೆಳದಿಂಗಳು. ಇವರಿಬ್ಬರ ಅನುರಾಗ ಸಂಗಮಕ್ಕೆ ಹುಣ್ಣಿಮೆ ಬೇರೆ ಬೇಕಿಲ್ಲ. ಇಲ್ಲಿ ಕೆ.ಎಸ್.ನ ಅವರು ಪ್ರೇಮಾನುಭೂತಿಯನ್ನು ಅಭೇದ್ಯ ಹೋಲಿಕೆಯೊಂದಿಗೆ ಚಿತ್ರಿಸಿ ಭಾಷಾ ಪ್ರೌಢಿಮೆಯನ್ನು ಮೆರೆದಿದ್ದಾರೆ.

> ನರ್ತಕಿಯಲ್ಲವೆ ಇವಳು? ರತಿಯಲ್ಲವೆ? ಗರತಿ
> ನಲವತ್ತರ ಮೇಲೊದಗಿದೆ ಹೊಸಪ್ರಾಯದ ಸರದಿ;
> ನಗರದ ಅಚ್ಚರಿ ಬೆಳಕಿಗೆ ಬಾಯಾರಿದ ಬದುಕು;
> ಸಾಕಾಗದು ಸಂಸಾರದ ಸಾಧಾರಣ ಸರಕು! [೭೩]

ಪ್ರೇಮ, ಪ್ರಣಯ ಇವೆಲ್ಲ ಸಾಮಾನ್ಯವಾಗಿ ಹದಿಹರಯದಲ್ಲಿ ಹೆಚ್ಚಾಗಿ ಮೂಡುವಂತದ್ದು, ತಾರುಣ್ಯಾವಸ್ಥೆಯಲ್ಲಿ ಅದಕ್ಕೊಂದು ತಾರ್ಕಿತ ಅಂತ್ಯವು ಕಾಣುತ್ತದೆ. ಮಧ್ಯವಯಸ್ಸಿನಲ್ಲಿ ಅಂಥಾ ಆಕರ್ಷಣೆಯೇನೂ ಇರುವುದಿಲ್ಲ. ಯಾಂತ್ರಿಕತೆಯಂತೆ ಸಂಸಾರವು ಏಕತಾನತೆಯಿಂದ ಕೂಡಿರುತ್ತದೆ. ಆದರೆ ಕೆ.ಎಸ್.ನ ಅವರು ಇಲ್ಲೊಂದು ಅಪರೂಪವೆಂಬಂತೆ ಒಂದು ಹೊಸತನವನ್ನು ನೀಡಿದ್ದಾರೆ. ನಲ್ವತ್ತು ದಾಟಿದ ನಲ್ಲೆಯು ನವ ತರುಣಿಯಂತೆ ಕಂಗೊಳಿಸುತ್ತಿದ್ದಾಳೆ. ಹೊಸ ಪ್ರಾಯವು ಬಂದಿದೆ ಎಂದು ಹೇಳುವಲ್ಲಿ ಆ ವಯಸ್ಸಿನಲ್ಲಿಯೂ ಸೌಂದರ್ಯವನ್ನು ಆಸ್ವಾದಿಸುವ ಪರಿ

---

[73] ಮಲ್ಲಿಗೆಯ ಮಾಲೆ: ನಲವತ್ತರ ಚೆಲುವೆ

ಮನನೀಯ. ಪ್ರೇಮ ನಿರಂತರ ಪ್ರಕ್ರಿಯೆ. ಯಾವುದೋ ಒಂದು ಹಂತಕ್ಕೆ ಮುಗಿದು ಹೋಗುವಂತದ್ದಲ್ಲ. ಅಲ್ಲಿ ಲವಲವಿಕೆ ಇರಬೇಕು. ಜೀವನವನ್ನು ಪ್ರೀತಿಸುವ ಗುಣವಿರಬೇಕು. ಪ್ರಣಯೋತ್ಸಾಹ ನಿರಂತರವಾಗಿದ್ದರೆ ಮಾತ್ರ ದಾಂಪತ್ಯದ ಸುಖವನ್ನು ಸವಿಯಬಹುದು. ಪ್ರತಿಯೊಬ್ಬ ವ್ಯಕ್ತಿಯೂ ಇಂಥಾ ಸಂದಿಗ್ಧತೆಯನ್ನು ಹೊಂದುತ್ತಾನೆ. ಕವಿ "ನಲವತ್ತರ ಚೆಲುವೆ" ಕವನದ ಮೂಲಕ ಹತಾಶೆಯನ್ನು ಮೆಟ್ಟಿ ನಿಲ್ಲುವ ಪ್ರಯತ್ನವನ್ನು ಮಾಡಿದ್ದಾನೆ.

ನೋಡಿದ್ದು ಕೆಲವು: ನೋಡುವುದಿಲ್ಲ ಬಹಳವಿದೆ;
ಸೋಲು ಗೆಲುವುಗಳಾಚೆಗಿರಿವುದೊಲುಮೆ,
ಎಲ್ಲ ಚಿತ್ರಗಳಾಚೆಗಿನ್ನೊಂದು ಚಿತ್ರವಿದೆ;
ರಂಗು ರಂಗಿನ ಬೆಳಕಿನ್ನೊಂದು ಚೆಲುಮೆ [೭೪]

ಜೀವನವೊಂದು ನಿರಂತರ ಪ್ರಕ್ರಿಯೆ. ಅನುಭವ ಕಡಿಮೆಯೇ ಸಿಕ್ಕಿರಬಹುದು ನೋಡುವುದು ತಿಳಿಯುವುದು ಬಹಳಷ್ಟಿರ ಬಹುದು. ಜೀವನದ ಪಯಣದಲ್ಲಿ ಸೋಲು-ಗೆಲುವುಗಳಾಗಬಹುದು. ಇಷ್ಟೇ ಜೀವನವಲ್ಲ. ಒಲುಮೆಯೇ ನಿಜವಾದ ಜೀವನ. ಎಲ್ಲೆಲ್ಲೂ ಒಲುಮೆಯನ್ನು ಹುಡುಕುವ ಒಲುಮೆಗಣ್ಣಿರಬೇಕು. ಎಲ್ಲ ಚಿತ್ರಗಳಲ್ಲಿಯೂ ಇನ್ನೊಂದು ಚಿತ್ರವನ್ನು ಹುಡುಕುವ ಮನಸ್ಸು ಮಾಡಬೇಕು. ನಿರಾಶಾವಾದಿಯಾಗದೇ ಅಶಾವಾದಿಯಾಗಿದ್ದಾಗ ಮಾತ್ರ ಜೀವನದ ಮರ್ಮವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಕೆ.ಎಸ್.ನ ಅವರು ಇಲ್ಲಿ ತತ್ವಜ್ಞಾನಿಯಂತೆ ಯೋಚಿಸುತ್ತಾರೆ. ಪ್ರೇಮವನ್ನು ಪಸರಿಸುವ ಜ್ಞಾನಿಯಾಗಿ ಆಲೋಚಿಸುತ್ತಾರೆ. ಸಮಾಜದಲ್ಲಿ ಒಲುಮೆಯನ್ನು ಪ್ರಸಾರ ಮಾಡುವ ಸಮಾಜ ಸುಧಾರಕರಂತೆ ಕಾರ್ಯ ನಿರ್ವಹಿಸುತ್ತಾರೆ. ಅವರ ಪ್ರಣಯದ ಎಲ್ಲ ಕವನಗಳಲ್ಲಿಯೂ ಆದರ್ಶ ಜೀವನದ ಪಾಕವಿದೆ. ಗಂಡು-ಹೆಣ್ಣುಗಳ ಆಕರ್ಷಣೆಗೆ ಪವಿತ್ರಸ್ಥಾನವನ್ನು ನೀಡಲಾಗಿದೆ. ಹೆಣ್ಣನ್ನು ಕಾಮಕ್ಕಾಗಿ, ಭೋಗಕ್ಕಾಗಿ ಬಳಸಿಕೊಳ್ಳುವ ದುಷ್ಟತನವನ್ನು ಮೌನವಾಗಿ ಪ್ರತಿಭಟಿಸಲಾಗಿದೆ. ಗಂಡಿಗೆ ಹೆಣ್ಣು ಹೆಗಲೆಣೆ, ಹೆಣ್ಣಿಗೆ ಗಂಡು ಹೆಗಲೆಣೆ ಎಂದು ಸಾರಿಸಾರಿ ಹೇಳಲಾಗಿದೆ. ಪ್ರಣಯದ ಸನ್ನಿವೇಶದಲ್ಲಿ ಬರುವ ಪ್ರಕೃತಿಯ ವೈಭವ, ಹಳ್ಳಿಯ ಚಿತ್ರಣವೆಲ್ಲವೂ ಓದುಗರನ್ನು ಸಹೃದಯಿಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸುವಂತವುಗಳಾಗಿವೆ. ಅಶ್ಲೀಲ, ಅಸಹ್ಯಕರ ಪದ ಪ್ರಯೋಗವಿಲ್ಲದೇ ಪ್ರೇಮ ನಿವೇದನೆಯನ್ನು ಕವನದಲ್ಲಿ ಮೂಡಿಸಿದ ಕೆ.ಎಸ್.ನ ಅವರ ಈ ಪ್ರಯತ್ನವು ವಿನೂತನವಾಗಿದೆ. ಹೀಗಾಗಿ ಅವರ ಕವನಗಳು ಅಪಾರ ಜನಪ್ರಿಯತೆಯನ್ನು ಪಡೆದಿದೆ. 'ಒಲುಮೆಯ ಕವಿ' 'ಪ್ರೇಮ ಕವಿ' ಎಂದು ಕೆ.ಎಸ್.ನ ಅವರು ಹೆಸರುಗಳಸಲು ಕಾರಣವೇನು? ಎಂಬುದಕ್ಕೆ ಈ ಅಧ್ಯಯನವು ಸಾಕಷ್ಟು ಬೆಳಕು ಚೆಲ್ಲಿದೆ. ಶೃಂಗಾರ ರಸದ ವೈಭವದೊಂದಿಗೆ ಮೂಡಿದ ಈ ಕವನಗಳು ರಸಿಕರನ್ನು ಆಕರ್ಷಿಸುತ್ತದೆ.

---

[74] ಮಲ್ಲಿಗೆಯ ಮಾಲೆ- ಹಿಂದೆ ಎಂದಾದರೂ.

ಕೆ.ಎಸ್.ನ ಅವರ ಕವನಗಳಲ್ಲಿ ಕಾಣುವ ಪ್ರಕೃತಿವರ್ಣನೆ.

ಕೆ.ಎಸ್.ನ ಅವರ ಕವನಗಳೆಲ್ಲವೂ ಪ್ರಣಯಕ್ಕೆ ಮಾತ್ರ ಸೀಮಿತವೆಂದರೆ ತಪ್ಪಾದೀತು. ಅವರ ಕವನಗಳು ಪ್ರಕೃತಿಯ ಮಧ್ಯದಲ್ಲಿ ಅರಳಿದಂತಹವು. ಹೀಗಾಗಿ ಅವರು ಪರಿಸರದ ವರ್ಣನೆಯನ್ನು ಅಭೂತವೆಂಬಂತೆ ಚಿತ್ರಿಸಿದ್ದಾರೆ. 'ಋತು ವೈಭವ' ಕೆ.ಎಸ್.ನ ಅವರ ಪ್ರಕೃತಿ ಮೇಲೆ ಕೇಂದ್ರೀಕೃತವಾದ ಕವನ, ಹೆಸರೇ ಹೇಳುವಂತೆ ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ, ಶಿಶಿರ ಋತುಗಳ ವೈಭವದ ಮೇಲೆ ರಚನೆಯಾದ ಕವನವು ಸಹೃದಯಿಗಳನ್ನು ಆಕರ್ಷಿಸುವಂತದ್ದು. ಋತುಗಳಲ್ಲಿ ಬದಲಾವಣೆಯಾದಂತೆ ಪ್ರಕೃತಿಯಲ್ಲಾಗುವ ಬದಲಾವಣೆಯ ಮೇಲೆ ಕವಿ ಬೆಳಕನ್ನು ಚೆಲ್ಲುವ ವಿನೂತನ ಪ್ರಯತ್ನವನ್ನು ಮಾಡಿದ್ದಾನೆ. ಅಂತೆಯೇ 'ನವಪಲ್ಲವ' ಕವನ ಸಂಕಲನದಲ್ಲಿ ಮರ-ಬಳ್ಳಿಗಳ, ಹೊಸತನವನ್ನು ವರ್ಣಿಸಲಾಗಿದೆ. ಹಕ್ಕಿಗಳ ಕಲರವ, ಅರುಣೋದಯದ ಚಿತ್ತಾರ, ನೀಲ ಆಗಸ. ನದಿಗಳ ಭೋರ್ಗರೆತ ಇವೆಲ್ಲ ಕವಿಯ ಚಿಂತನೆಯ ಮೂಸೆಗೆ ಸಿಲುಕಿ ಶೃಂಗಾರದ ಕಾವ್ಯದ ಹೊನಲೇ ಪ್ರವಹಿಸುವಂತೆ ಮಾಡಿದ್ದಾನೆ. ಜೀವನದ ಬವಣೆಯನ್ನೂ ಸಹ ಕವಿ ಪ್ರಕೃತಿಯೊಂದಿಗೆ ಸಮೀಕರಿಸಿದ ಪರಿ ಅನನ್ಯ. ಭೂಮಿ ತಾಯಿಯ ಆಶೀರ್ವಾದ ಸದಾ ನಮ್ಮೆಲ್ಲರಲಿ ಎಂಬ ಕವಿಯ ಬೇಡಿಕೆಯು ಪ್ರಕೃತಿಯ ಮೇಲಿರುವ ಮಮತೆಯನ್ನು ಸಾಕ್ಷಾತ್ಕರಿಸುತ್ತದೆ.

ತರು ಲತೆಗಳ ಜೀವನದಲಿ
ನವ ಚೇತನದ ಉಸಿರು:
ನವಪಲ್ಲವದುಡುಗೊರೆಯಲಿ
ಉರಿಬಿಸಿಲೂ ಹಸಿರು ... [೭೫]

ಕೆ. ಎಸ್. ನ ಅವರು ಪ್ರಕೃತಿಯ ಬಗ್ಗೆ ತಾಳುವ ಕಾಳಜಿಯು ಮನಮೋಹಕವಾಗಿದೆ ಪ್ರಕೃತಿಯ ಹೊಸತನದಿಂದ ಕೂಡಿರುವುದರ ಬಗ್ಗೆ ಕವಿಯು ಉತ್ತಮವಾದ ನಿದರ್ಶನಗಳನ್ನು ತೆಗೆದುಕೊಂಡಿದ್ದಾನೆ. ಕೋಗಿಲೆಯ ಇಂಚರವೂ ಸಹ ಪ್ರಕೃತಿಯ ಸೊಬಗನ್ನು ಹೆಚ್ಚಿಸಿದೆ. ಮಾವು ಬೇವು ಚಿಗುರುವುದರ ಮೂಲಕ ಎಲ್ಲೆಲ್ಲೂ ಹಸಿರು ನಳನಳಿಸುತ್ತಿದೆ ಎಂದು ಕವಿ ವರ್ಣಿಸಿದ್ದಾನೆ. 'ನವಪಲ್ಲವ' ಕವನವು ಅದ್ಭುತವಾದ ಪ್ರಕೃತಿಗೀತೆಯಾಗಿದೆ.

ಹಸಿರೆಲೆಗಳಲ್ಲಿ ಮಾಸದ ಕಣ್ಣು ಥಳಥಳಿಸಿ
ತಪ್ಪು ಹೆಜ್ಜೆಗಳನ್ನು ಸರಿಪಡಿಸಲಿ !
ನೆಲದಾಳದಲ್ಲಿ ಬೇರಿಳಿದ ಮರಗಳು ಬದುಕಿ
ಎಲ್ಲ ಕಾಲಗಳಲ್ಲಿ ಹೂವ ತೊಡಲಿ ! [೭೬]

---

[75] ಮಲ್ಲಿಗೆ ಮಾಲೆ – ನವಪಲ್ಲವ

[76] ಮಲ್ಲಿಗೆ ಮಾಲೆ – ಕುಂಕುಮ ಭೂಮಿ

ಕೆ.ಎಸ್.ನ ಅವರಿಗೆ ಭವಿಷ್ಯತ್ತಿನ ಬಗ್ಗೆ ಕಳಕಳಿಯಿದೆ ಪರಿಸರವನ್ನು ನಾಶಮಾಡುವುದನ್ನು ವಿರೋಧಿಸುತ್ತಾರೆ. ಮಾನವನು ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂದು ಹಾರೈಸುತ್ತಾರೆ. ಪ್ರಕೃತಿಯು ನಿತ್ಯಹರಿದ್ವರ್ಣದಿಂದ ಕಂಗೊಳಿಸಲಿ ಎಂದು ಅವರು ಆಶಿಸುತ್ತಾರೆ.

ಕವಿ ಕೆ.ಎಸ್.ನ ಅವರ ಹೃದಯವು ಬಹಳ ನಿಷ್ಕಲ್ಮಶವಾದುದು. ಹೆಣ್ಣನ್ನು ಪ್ರಣಯದಲ್ಲಿ ವೈಭವೀಕರಿಸಿದಂತೆ ಪ್ರಕೃತಿಯನ್ನು ಸಹ ಆರಾಧಿಸುವುದನ್ನು ನಾವು ನೋಡಬಹುದು. ಪ್ರಕೃತಿ ಮತ್ತು ಜೀವನದ ನಡುವಿನ ಸೇತುವೆಯಾಗಿ ಕೆ.ಎಸ್.ನ ಅವರ ಗೀತೆಗಳವೆ. ಹೀಗಾಗಿ ಕೆ.ಎಸ್.ನ ಕವನಗಳು ನಿಸರ್ಗಾರಾಧಕರಿಗೂ ಬಹು ಪ್ರಿಯವಾಗಿವೆ.

ಅಧ್ಯಾಯ –೨

ಹೊಸ ಹೊಳಹು

ಕೆ.ಎಸ್.ನ ಅವರ ಕವನಸಂಕಲನಗಳನ್ನು ಅಧ್ಯಯನ ಮಾಡುವಾಗ ಕೆಲವು ಅಂಶಗಳನ್ನು ನಾನು ಗಮನಿಸಿರುತ್ತೇನೆ. ಅವರು ತಮ್ಮ ಕವನಗಳಲ್ಲಿ ಹೆಣ್ಣನ್ನು ಅದ್ಭುತವೆಂಬಂತೆ ವರ್ಣಿಸುತ್ತಾರೆ. ವಾಸ್ತವವಾಗಿ ಅವರು ಪರಿಭಾವಿಸಿದ ಹೆಣ್ಣು ಸುಂದರಿಯಲ್ಲ. ಆದರೆ ಚೆನ್ನಾಗಿಲ್ಲದಿದ್ದರೂ ಚೆನ್ನಾಗಿದೆ ಎಂದು ವರ್ಣಿಸುವ ರೀತಿ ಕವನದಲ್ಲಿ ಬಹಳಷ್ಟು ಅಪ್ಯಾಯಮಾನವಾಗುತ್ತದೆ. ಕವಿಯ ಕವನದ ನಾಯಕಿಯನ್ನು ಕಲ್ಪಿಸಿದರೆ ಇವಳೆನೋ ದೇವಲೋಕದ ರಂಭೆಯೋ, ಊರ್ವಶಿಯೋ ಆಗಿರಬಹುದೆಂದು ಭಾವನೆ ಬರುವುದು ಸಹಜ. ಕವಿ ತನ್ನ ನಿಜವಾದ ಬಾಳಸಂಗಾತಿಯನ್ನೇ ಗುರಿಯಾಗಿಸಿಕೊಂಡು ಕವನ ಬರೆದಿದ್ದಾನೆ ಎಂದು ಓದುಗರು ಭಾವಿಸುವುದು. ಸರಿಯಷ್ಟೇ: ಆದರೆ ಅವರ ಧರ್ಮಪತ್ನಿಯಾದ ಶ್ರೀಮತಿ ವೆಂಕಮ್ಮನವರು ಸಾದಾಸೀದಾ ಮೈಮಾಟದ ಹೆಣ್ಣು, ಅಷ್ಟೇ ಅಲ್ಲದೇ ಸುಂದರಿಯರ ಸಾಲಿನಲ್ಲಿ ನಿಲ್ಲುವಂತವರಲ್ಲ ಎಂಬುದು ಹಲವರ ಅನಿಸಿಕೆ. ಅಂತಾ ಸಾಧಾರಣ ಚೆಲುವೆಯನ್ನು ಕವನದಲ್ಲಿ 'ನ ಭೂತೋ ನ ಭವಿಷ್ಯತಿ' ಎಂಬಂತೆ ಚಿತ್ರಿಸಿರುವುದು. ಕೆ.ಎಸ್.ನ ರಂಥ ಅಗಾಧ ಪ್ರತಿಭೆಗೆ ಮಾತ್ರ ಸಾಧ್ಯವಾಗುವಂತಹದ್ದು. ಅವರ ಕವನವನ್ನು ಓದಿದ ಸಹೃದಯಿಗಳಿಗೆ ಕೆ.ಎಸ್.ನ ಅವರ ಹೆಂಡತಿಯನ್ನು ನೋಡಲೇಬೇಕೆಂಬ ಕುತೂಹಲ ಮೂಡಿದ್ದಂತೂ ಸುಳ್ಳಲ್ಲ. ಅವಳು ಹೇಗೇ ಇರಲಿ ಕವಿಗೆ ಮಾತ್ರ ಆಕೆ ಸುರಸುಂದರಿ.

ಇಲ್ಲಿ ಕವಿಯ ಕಳಕಳ ಅರ್ಥವಾಗುವಂತದ್ದು. ಏಕೆಂದರೆ ಬಾಳಿನಲ್ಲಿ ಸಂಗಾತಿಯಾದವಳು ಸುಂದರಿಯಾಗಿರಬೇಕೆಂದು ಹಲವು ಗಂಡಸರು ಬಯಸುತ್ತಾರೆ. ಆದರೆ ಅದಕ್ಕೆ ಅದೃಷ್ಟವೆನ್ನುವುದು ಇರುವುದಿಲ್ಲ. ಇಂಥಾ ಸನ್ನಿವೇಶದಲ್ಲಿ ಅವಳನ್ನು ದೂಷಿಸುವುದಾಗಲೀ, ತಿರಸ್ಕರಿಸುವುದಾಗಲೀ ಮಾಡಬಾರದು. ಅವಳನ್ನೇ ಸುಂದರಿಯಾಗಿ ಪರಿಭಾವಿಸಿದರೆ ಅತೃಪ್ತಿಗೆ, ಅಶಾಂತಿಗೆ ಅವಕಾಶವಿರಲಾರದು. ಕವನಗಳ ಮೂಲಕ ಕವಿ ಒಂದು ಉತ್ತಮವಾದ ಸಂದೇಶವನ್ನು ರವಾನಿಸಿದ್ದಾರೆ.

ಪ್ರತಿಯೊಬ್ಬರಿಗೂ ಪ್ರಕೃತಿಯೇ ತೊಟ್ಟಿಲು: ಪ್ರಕೃತಿಯ ಮಧ್ಯದಲ್ಲಿ ಅರಳಿದ ಹೂವಿನಂತೆ ಕೆ.ಎಸ್.ನ ಹೀಗಾಗಿ ಅವರ ಕವನದುದ್ದಕ್ಕೂ ಪ್ರಕೃತಿಯ ನಂಟು ಚಾಚಿಕೊಂಡೇ ಬಂದಿದೆ. ಆದರೆ ಪ್ರಕೃತಿಯೇ ಅತಿರೇಕವೆಂಬಂತೆ ವರ್ಣಿಸಿಲ್ಲ. ಜೀವನಕ್ಕೆ ಜೀವನದ ಪ್ರೀತಿಗೆ ಮೊದಲ ಆದ್ಯತೆಯನ್ನು ಕವಿ ನೀಡಿದ್ದಾನೆ. ಪ್ರಣಯವನ್ನು ಬಿತ್ತರಿಸುವಾಗ, ನಿಸರ್ಗವನ್ನು ಒಂದು ಭೂಮಿಕೆಯನ್ನಾಗಿ ಕವಿ ಬಳಸಿಕೊಂಡಿರುವುದು ಸ್ಪಷ್ಟವಾಗುತ್ತದೆ. ಕವಿಯ ಚಿತ್ತವೆಲ್ಲ ಪ್ರಣಯವನ್ನು ಚಿತ್ರಿಸುವುದರಲ್ಲೇ ಇರುತ್ತದೆಯೇ ಹೊರತು ಪ್ರಕೃತಿಯನ್ನಲ್ಲ. ಪ್ರಕೃತಿ ವರ್ಣನೆಗೆಂದೇ ಕೆಲವು ಕವನಗಳನ್ನು ಮೀಸಲಾಗಿಟ್ಟಿದ್ದಾರೆ. ಅಲ್ಲಿ ಪ್ರಣಯದ ಸಂಗತಿ ಇಲ್ಲ. ಕವಿಯು ಸ್ಪಷ್ಟವಾದ ಕಲ್ಪನೆಯೊಂದಿಗೆ

ಕವನವನ್ನು ಬರೆದಿರುವುದು ಇಲ್ಲಿ ವೇದ್ಯವಾಗುತ್ತದೆ. ಹೀಗಾಗಿ ಓದುಗರಿಗೆ ಗೊಂದಲವಿರುವುದಿಲ್ಲ. ಕೆಲವು ಕವಿಗಳು ಕವನವನ್ನು ಬರೆದಾಗ ಅದರ ಅಂತರಾಳವೇನೆಂದು ಬರೆದಂತಹ ಕವಿಗೂ ಸ್ವತಃ ಗೊತ್ತಾಗಿರುವುದಿಲ್ಲ. ಆದರೆ ಕೆ.ಎಸ್.ನ ಕವನ ಹಾಗಲ್ಲ ನವಿರು ನವಿರಾಗಿದ್ದು, ಸಕ್ಕರೆಪಾಕದಿಂದ ತೆಗೆದ ಎಳೆಯಂತೆ ಸರಳವಾಗಿರುತ್ತದೆ. ಎಷ್ಟೋ ಕವಿಗಳು ತಮ್ಮ ಪಾಂಡಿತ್ಯ ಪ್ರದರ್ಶನಕ್ಕಾಗಿ ಕ್ಲಿಷ್ಟಕರವಾದ ಪದಪ್ರಯೋಗವನ್ನು ಮಾಡಿಬಿಡುತ್ತಾರೆ. ಕೆ.ಎಸ್.ನ ಕವನದಲ್ಲಿ ಈ ಸಮಸ್ಯೆಯಿಲ್ಲ. ಸದಾ ಬಳಕೆಯಲ್ಲಿರುವ ಸರಳ ಪದಗಳನ್ನು ಬಳಸಿ ಕವನವನ್ನು ಬರೆದಿರುವುದರಿಂದ ಜನಪ್ರಿಯತೆಯನ್ನು ಪಡೆಯಲು ಸಾಧ್ಯವಾಗಿದೆ. ಇನ್ನಿತರ ಕವಿಗಳ ಬಹಳಷ್ಟು ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಲು ಸಾಧ್ಯವಾಗುವುದಿಲ್ಲ. ಕೆ.ಎಸ್.ನ ಕವನಗಳೆಲ್ಲ ಹಾಡಲೂ ಇಂಪು. ಕೇಳಲೂ ಇಂಪು. ಕೆ.ಎಸ್.ನ ಕವನದ ಸಾಲುಗಳು ಉದ್ದುದ್ದವಾಗಿಯೂ ಇಲ್ಲ. ಹಾಗಂತ ತುಂಬಾ ಚಿಕ್ಕ ಸಾಲೂಗಳೂ ಅಲ್ಲ. ಅವರ ಕೆಲವು ಕವನಗಳಲ್ಲಿ ಏಕತಾನತೆ ಕಂಡು ಬಂದರೂ ಪ್ರಣಯದ ವಿಷಯದಲ್ಲಿ ಮಾತ್ರ ವೈವಿಧ್ಯತೆಯನ್ನು ಮೆರೆಸಿದ್ದಾರೆ. ತನ್ಮೂಲಕ ಮನಸ್ಸಿಗೆ ಅಪರಿಮಿತವಾದ ಮುದವನ್ನು ನೀಡಿದ್ದಾರೆ. ಆಂಗ್ಲ ಕವಿ ಬರ್ನ್ಸ್, ನವೋದಯ ಕವಿ ಪು.ತಿ.ನ ಅವರನ್ನು ಅನುಕರಿಸಿದಂತೆ ಕೆಲವು ಕವನದಲ್ಲಿ ಗೋಚರಿಸುತ್ತದೆ. ರತ್ನನ ಪದದಂತೆ ಜಿ.ಪಿ.ರಾಜರತ್ನಂ ಅವರನ್ನು ಅನುಕರಿಸುವ ಪ್ರಯತ್ನವನ್ನು ಕೆಲವು ಕವನಗಳಲ್ಲಿ ಕಾಣಬಹುದು. ಇಲ್ಲಿ ಕೆ.ಎಸ್.ನ ಬಹಳ ಪರಿಣಾಮಕಾರಿಯಾಗಿ ಸಫಲತೆಯನ್ನು ಕಂಡಿದ್ದಾರೆ:

ಉದಾ: ಜೊತೇಲ್ ಬಂದು ಮರೇಲ್ ನಿಂತು
ನನ್ನೇ ನೋಡ್ತಾಳ ನನ್ ಲಚ್ಮಿ।
ಮೋಡದ ಮರೇಲ್ ಮುಂಗಾರ್ ಮಿಂಚು
ಹಾಡಿನ್ ತುಂಬಾ ನನ್ ಲಚ್ಮಿ॥ [೭೭]

ಕೆ.ಎಸ್.ನ ಕವನದಲ್ಲಿ ಪ್ರಮುಖವಾಗಿ ಕಾಣುವ ಸಂಗತಿಯೊಂದಿಗೆ. ಹದವರಿತ ಶೃಂಗಾರ ರಸವನ್ನು ತನ್ನ ಕವನಗಳಲ್ಲಿ ಬಳಸಿಕೊಂಡದ್ದು ಇವರ ಹೆಗ್ಗಳಿಕೆ. ಶೃಂಗಾರ ರಸವನ್ನು ಚಿತ್ರಿಸುವಾಗ ಸ್ವಲ್ಪ ಅತೀಯಾದರೂ ಅಸಹ್ಯವಾಗಿ ಬಿಡುವ ಸಾಧ್ಯತೆ ಇದೆ. ಅದರಂತೆ ತುಂಬಾ ಕಾಳಜಿವಹಿಸಿದರೂ ಕಾವ್ಯ ಸಪ್ಪೆಯಾಗಿ ಬಿಡುತ್ತದೆ. ಕೆ.ಎಸ್.ನ ಮಾತ್ರ ತಮ್ಮ ಕವನದುದ್ದಕ್ಕೂ ಅಪಾರ ಜಾಣ್ಮೆಯನ್ನು ಮೆರೆದಿದ್ದಾರೆ. ಪ್ರೇಮ ಮನರಂಜನೆಗೆ ಮಾತ್ರ ಎಂಬಂತೆ ಎಲ್ಲೂ ಕವಿ ನಿರೂಪಿಸಿಲ್ಲ. ತಾತ್ವಿಕ ಚಿಂತನೆಯಡಿ ಜೀವನದ ಪರಮ ಮೌಲ್ಯವೆಂದು ಪ್ರೇಮವನ್ನು ಕೆ.ಎಸ್.ನ ಎತ್ತಿ ಹಿಡಿದಿದ್ದಾರೆ.

[77] ಮಲ್ಲಿಗೆಯ ಮಾಲೆ-ಇರುವಂತಿಗೆ

ಅಧ್ಯಾಯ – ೮
ಉಪಸಂಹಾರ

ಸುಮಾರು ಅರವತ್ತು ವರ್ಷಗಳ ಕಾಲ ಕಾವ್ಯ ಕೃಷಿ ಮಾಡಿದ ಕೆ.ಎಸ್.ನರಸಿಂಹಸ್ವಾಮಿ ಆಧುನಿಕ ಕನ್ನಡ ಕಾವ್ಯದ ಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದರು. ಕಾಲಕಾಲಕ್ಕೆ ಕನ್ನಡ ಕಾವ್ಯ ಕಂಡ ಚಳುವಳಿಗೆ ಸೃಜನಾತ್ಮಕವಾಗಿ ಸ್ಪಂದಿಸುತ್ತಾ, ತಮ್ಮ ಕಾವ್ಯ ಸ್ವರೂಪದಲ್ಲೂ ಬದಲಾವಣೆ ಮಾಡಿಕೊಳ್ಳುತ್ತ ಕೆ.ಎಸ್.ನ ನಡೆದು ಬಂದರು.

ನವೋದಯ ಕಾಲದಲ್ಲಿ ಕೆ.ಎಸ್.ನ ಕಾವ್ಯ ರಚನೆಯನ್ನಾರಂಭಿಸಿದರು. ಕನ್ನಡ ಕಾವ್ಯಕ್ಕೆ ಹೊಸತನ ಮೂಡುತ್ತಿದ್ದ ಕಾಲದಲ್ಲಿ ಉತ್ಸಾಹಿಗಳಿಗೆ ಅನೇಕ ಸಾಧ್ಯತೆಗಳು ಕಣ್ಣಮುಂದಿದ್ದವು. ಕೆ.ಎಸ್.ನ ಬರ್ನ್ಸ್‌ನಿಂದ ಪ್ರೇರಣೆ ಪಡೆದು ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ಶ್ರೇಷ್ಠ ಕವಿಯಾಗುವ ಬಯಕೆಯನ್ನು ಹೊತ್ತಿದ್ದರು. ಅವರಿಗೆ ಅವಶ್ಯಕವಾಗಿದ್ದ ಮಾರ್ಗವು ಬಿ.ಎಂ.ಶ್ರೀ ಅವರ 'ಇಂಗ್ಲಿಷ್ ಗೀತೆ'ಗಳಲ್ಲಿ ದೊರಕಿತು. ಬರ್ನ್ಸ್‌ನ ಪ್ರಣಯ ಕವಿತೆ ' o My Love's like a red red rose'- ಬಿ.ಎಂ.ಶ್ರೀ ಅವರಲ್ಲಿ ಮೂಡಿದ ಬಗೆ ನರಸಿಂಹಸ್ವಾಮಿಯವರ ಎದುರಿಗಿತ್ತು. ಪೌರಾಣಿಕ ಪಾತ್ರಧಾರಿಗಳ ಪ್ರಣಯವಲ್ಲದೆ ಸಾಮಾನ್ಯ ಜನರ ಪ್ರಣಯವೂ ಅವರ ವಿವೇಚನೆಯಲ್ಲಿತ್ತು. ಜನಸಾಮಾನ್ಯರ ಜೀವನದ ರೀತಿ ನೀತಿಯನ್ನು ಆಡುವ ಭಾಷೆಯಲ್ಲಿ ಕಾವ್ಯದ ಮೂಲ ಸೆಲೆಯನ್ನಾಗಿ ಕೆ.ಎಸ್.ನ ಬಳಸಿಕೊಂಡರು.'ಪ್ರಣಯ' ಕೆ.ಎಸ್.ನ ಅವರ ಕಾವ್ಯದ ವಸ್ತುವಾಯಿತು. ತಮ್ಮಲ್ಲಿರುವ ಅಗಾಧ ಪ್ರತಿಭೆಯನ್ನು ಒಂದು ಮೂರ್ತರೂಪಕ್ಕೆ ತಂದು ಜನರ ಮನ್ನಣೆಯನ್ನು ಗಳಿಸುವ ಕೃತಿಗಳನ್ನು ರಚಿಸಿದರು. ಪ್ರಣಯಕ್ಕೆ ಒಂದು ಬಗೆಯ ಸಂಸ್ಕಾರವನ್ನು ನೀಡಿದರು. ಗಂಡು–ಹೆಣ್ಣಿನ ಮಿಲನಕ್ಕೆ ಪವಿತ್ರ ಸ್ಥಾನವನ್ನು ನೀಡಿದ ಕೀರ್ತಿ ಕೆ.ಎಸ್.ನ ಅವರದ್ದು. ಹೃದಯ ಮಂದಿರದಲ್ಲಿ ಮಾರ್ದನಿಸುವ ಪ್ರಣಯರಾಗವು ಕೆ.ಎಸ್.ನ ಅವರ ಕೃತಿಯಲ್ಲಿ ಮೂಡಿತು. ಶೃಂಗಾರದ ಸೊಗಡನ್ನು ಸಮರ್ಪಕವಾಗಿ ಬಳಸಿದ್ದರಿಂದ ಕವನವು ಶ್ರೇಷ್ಠವಾಗಿ ಹೊರಹೊಮ್ಮಿತು. ಮನೆ ಮನೆಗಳಲ್ಲಿ ಸುಪ್ರಭಾತದಂತೆ ಕೆ.ಎಸ್.ನ ಅವರ ಕವನಗಳು ಮನೆಮಾತಾಯಿತು. ಗಂಡ–ಹೆಂಡತಿ ಸಂಬಂಧಕ್ಕೆ ಹೊಸ ರೂಪವನ್ನು ಕೆ.ಎಸ್.ನ ನೀಡಿದರು.

ಪ್ರಣಯ ಅಥವಾ ಪ್ರೇಮದ ಕವನ ಎಂದಾಕ್ಷಣ ತಟ್ಟನೆ ನೆನಪಾಗುವ'ವರು ಕೆ.ಎಸ್.ನ ಪಾಶ್ಚಿಮಾತ್ಯ ಕವಿಗಳ ಕಲ್ಪನೆ ಭಾರತೀಯ ಕಾವ್ಯ ಮೀಮಾಂಸಕರ ಸಿದ್ಧಾಂತಗಳೊಂದಿಗೆ ಕೆ.ಎಸ್.ನ ಅವರ ಕವನವನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ನವೋದಯ ಕಾಲದ ಕವಿಗಳ ಪ್ರಣಯದ ಕವನಗಳನ್ನು ತೌಲನಿಕವಾಗಿ ಬಳಸಿಕೊಂಡಿದ್ದೇನೆ. 'ರಸ'ವನ್ನು ವಿವರಿಸಿ, ಶೃಂಗಾರದ ರಸದ ಸೊಗಸನ್ನು ನನ್ನ ಈ ಅಧ್ಯಯನದಲ್ಲಿ ವಿಶೇಷವಾಗಿ ಸಮರ್ಥಿಸಿದ್ದೇನೆ. ಪ್ರಣಯಾಧಾರಿತ ಕವನಗಳ ವೈಶಿಷ್ಟ್ಯ, ಮಹತ್ವದ, ವಿಶ್ಲೇಷಣೆ ಮಾಡಿರುತ್ತೇನೆ. ಪ್ರಸ್ತುತ ಸಮಾಜಕ್ಕೆ ಕೆ.ಎಸ್.ನ ನೀಡಿರುವ

ಸಂದೇಶವನ್ನು ವಿವರಿಸಿದ್ದೇನೆ. ಭವಿಷ್ಯಕ್ಕೆ ಕೆ.ಎಸ್.ನ ಅವರ ಕವನವು ಹೇಗೆ ದಾರಿದೀಪವಾಗಬಲ್ಲದು ಎಂಬುದನ್ನು ನಮೂದಿಸಿದ್ದೇನ. ಕೆ.ಎಸ್.ನ ಕವನಗಳಿಂದ ರಸಿಕರು ರಸಸ್ವಾದನೆಯನ್ನು ಮಾಡಲು ಸಾಧ್ಯವೆಂಬುದನ್ನು ನಿರೂಪಿಸಿದ್ದೇನೆ. ಒಟ್ಟಾರೆಯಾಗಿ ಕೆ.ಎಸ್.ನ ಕವನಗಳಲ್ಲಿರುವ ಪ್ರಣಯದ ವಿವರಣೆಯನ್ನು ಸಮಗ್ರವಾಗಿ ವಿವರಿಸಿದ್ದೇನೆ. ಇನ್ನೂ ಸಂಶೋಧನೆಗಳನ್ನು ಮಾಡುವಷ್ಟು ಸಾಮಗ್ರಿಗಳು ಕೆ.ಎಸ್.ನ ಕವನಗಳಲ್ಲಿ ಬೇಕಾದಷ್ಟಿವೆ ಎಂದು ಹೇಳುವುದು ಸಮಂಜಸ ಪೂರ್ಣವಾದ ವಿಚಾರವಾಗುತ್ತದೆ.

****

ಅನುಬಂಧ – ೧

ಕೆ.ಎಸ್ ನರಸಿಂಹಸ್ವಾಮಿಯವರ ಸಾಹಿತ್ಯ ಪಥ

ಕವನ ಸಂಗ್ರಗಳು		ಮೊದಲ ಮುದ್ರಣ
೧.	ಮೈಸೂರು ಮಲ್ಲಿಗೆ	೧೯೪೨
೨.	ಐರಾವತ	೧೯೪೫
೩.	ದೀಪದ ಮಲ್ಲಿ	೧೯೪೭
೪.	ಉಂಗುರ	೧೯೪೯
೫.	ಇರುವಂತಿಗೆ	೧೯೫೨
೬.	ಶಿಲಾಲತೆ	೧೯೫೮
೭.	ಮನೆಯಿಂದ ಮನೆಗೆ	೧೯೬೦
೮.	ಆಯ್ದಕವನಗಳು	೧೯೬೯
೯.	ತೆರೆದಬಾಗಿಲು	೧೯೭೬
೧೦.	ನವಪಲ್ಲವಿ	೧೯೮೩
೧೧.	ಮಲ್ಲಿಗೆ ಮಾಲೆ(ಸಮಗ್ರಕಾವ್ಯ)	೧೯೮೬
೧೨.	ದುಂಡುಮಲ್ಲಿಗೆ	೧೯೯೩
೧೩.	ನವಿಲದನಿ	೧೯೯೩
೧೪.	ಸಂಜೆಹಾಡು	೧೯೯೯
೧೫.	ಹಾಡುಹಸೆ	೨೦೦೩

ಗದ್ಯಕೃತಿಗಳು

೧.	ಮಾರಿಯ ಕಲ್ಲು (ಕಿರುಗತೆಗಳು)	೧೯೪೨
೨.	ಉಪವನ	೧೯೫೮
೩.	ದಮಯಂತಿ	೧೯೬೦

ಅನುವಾದಗಳು

೧.	ಮೋಹನ ಮಾಲೆ (ಗಾಂಧೀಜಿ ಸುಭಾಷಿತಗಳು)	೧೯೫೬
೨.	ನನ್ನ ಕನಸಿನ ಭಾರತ (ಗಾಂಧೀಜಿ ಕೃತಿಗಳಿಂದ)	೧೯೬೧
೩.	ಪ್ರಪಂಚದ ಬಾಲ್ಯದಲ್ಲಿ – ವೆರಿಯರ್ ಎಲ್ವಿನ್	೧೯೬೫
೪.	ಮೀಡಿಯಾ– ಯುರಿಪಿಡಿಸ್	೧೯೬೬
೫.	ಹಕಲ್ ಬರಿ ಫಿನ್ನನ ಸಾಹಸಗಳು – ಮಾರ್ಕ್ ಟ್ವೇಯ್ನ್	೧೯೬೯
೬.	ಸುಬ್ರಹ್ಮಣ್ಯಭಾರತಿ– ಪ್ರೇಮನಂದಕುಮಾರ್	೧೯೭೧

ಗ್ರಂಥಋಣ

೧. ಇಹದ ಪರಿಮಳದ ಹಾದಿ, ಡಾ॥ನರಹಳ್ಳಿ ಬಾಲಸುಬ್ರಹ್ಮಣ್ಯ, ಅಪಿ ಪ್ರಕಾಶನ, ೧೯೯೫

೨. ಇಂಗ್ಲಿಷ್ ಗೀತಗಳು, ಬಿ.ಎಂ.ಶ್ರೀ. ಕಾವ್ಯಾಲಯ ಪ್ರಕಾಶನ, (೧೨ನೇ ಮುದ್ರಣ),೨೦೦೧

೩. ಒಲುಮೆ, (ತೀ.ನಂ.ಶ್ರೀ. ಜನ್ಮ ಶತಮಾನೋತ್ಸವ) ತೀ.ನಂ.ಶ್ರೀಕಂಠಯ್ಯ, ಕಾವ್ಯಾಲಯ ಪ್ರಕಾಶನ,೨೦೦೬

೪. ಕನ್ನಡ ಛಂದೋವಿಕಾಸ, ಡಾ॥ಡಿ.ಎಸ್.ಕರ್ಕಿ, ಭಾರತ ಬುಕ್ ಡಿಪೋ ಪ್ರಕಾಶನ, ೧೯೯೨

೫. ಕನ್ನಡ ಸಾಹಿತ್ಯ ಕೋಶ, ರಾಜಪ್ಪ ದಳವಾಯಿ, ದಳವಾಯಿ ಪ್ರಕಾಶನ, ೧೯೯೬

೬. ಕಾವ್ಯಾರ್ಥ ಚಿಂತನ, ಜಿ.ಎಸ್.ಶಿವರುದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, (೯ನೇ ಮುದ್ರಣ) ೨೦೦೯

೭. ಕಾಳಿದಾಸನ ಕಾವ್ಯಗಳು, ಎಸ್.ರಾಮಚಂದ್ರರಾವ್.ಪಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೪೦

೮. ಗಿಳಿವಿಂಡು, ಗೋವಿಂದ ಪೈ. ಬಾಲ ಸಾಹಿತ್ಯ ಮಂಡಲ ೧೯೩೦

೯. ತೌಲನಿಕ ಕಾವ್ಯಮೀಮಾಂಸೆ, ಡಾ॥ಹೆಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ೧೯೮೫

೧೦. ತೌಲನಿಕ ಕಾವ್ಯಮೀಮಾಂಸೆ ಮತ್ತು ಆಧುನಿಕ ಸಾಹಿತ್ಯ ವಿಮರ್ಶೆಯ ಮೂಲತತ್ವಗಳು, ಓ.ಎಲ್.ನಾಗಭೂಷಣಸ್ವಾಮಿ. ಬೆಂಗಳೂರು ವಿಶ್ವವಿದ್ಯಾಲಯ, ೨೦೦೦

೧೧. ೭೫ ಭಾವಗೀತೆಗಳು ಕೆ. ಎಸ್. ನಿಸಾರ್ ಅಹ್ಮದ್. ಸಪ್ನ ಬುಕ್ ಹೌಸ್. ೨೦೧೦

೧೨. ನಳಚರಿತ್ರೆ, ಕನಕದಾಸರ ಗದ್ಯಾನುವಾದ:ಹಾತೂರು ಶಂಕರನಾರಾಯಣಭಟ್ಟ. ಕನ್ನಡ ಸಾಹಿತ್ಯ ಪರಿಷತ್, ೨೦೦೪

೧೩. ಪರಸ್ಪರ (ವಿಮರ್ಶಾತ್ಮಕ ಲೇಖನಗಳು). ಡಾ॥ಎನ್.ಎಸ್.ಲಕ್ಷ್ಮೀನಾರಾಯಣಭಟ್ಟ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೯

೧೪. ಪಾಶ್ಚಾತ್ಯ ಕಾವ್ಯ ಮೀಮಾಂಸೆ ಡಾ॥ಬಿ.ಬಿ.ಹೆಂಡಿ. ಪುಸ್ತಕಾಲಯ, ೧೯೭೧

೧೫. ಪಾಶ್ಚಿಮಾತ್ಯ ಸಾಹಿತ್ಯ ವಿಮರ್ಶೆಯ ಪಕ್ಷಿನೋಟ. ಸಂಗ್ರಹಾನುವಾದ. ಪ್ರೊ.ಜಿ.ಶಂಕರಯ್ಯ, ಕನ್ನಡ ಸಾಹಿತ್ಯ ಪರಿಷತ್. ೨೦೦೩

೧೬. ಪ್ರಾಚೀನ ಕನ್ನಡ ವ್ಯಾಕರಣಗಳು. ಎಂ.ವಿ.ಸೀತಾರಾಮಯ್ಯ, ಮೈಸೂರು ವಿಶ್ವವಿದ್ಯಾಲಯ, ೧೯೮೮

೧೭. ಭಾರತೀಯ ಕಾವ್ಯ ಮೀಮಾಂಸೆ. ತೀ.ನಂ.ಶ್ರೀಕಂಠಯ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ೧೯೯೫

೧೮. ಸಾಹಿತ್ಯೋಪಾಸನೆ, ರಂ.ಶ್ರೀ.ಮುಗಳಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ೨೦೦೬

೧೯. ಸುವರ್ಣ ಸಾಹಿತ್ಯ ವಿಮರ್ಶೆ. ಸಂ:ಹೆಚ್.ದಂಡಪ್ಪ .ಬಿ.ಎನ್.ಸುಮಿತ್ರಾಬಾಯಿ. ಕನ್ನಡ ಮತ್ತು ಸಂಸ್ಕೃತಿ ೨೦೦೬

೨೦. ಹದಿಬದೆಯ ಧರ್ಮ, ಸಂಚಿ ಹೊನ್ನಮ್ಮ .ಸಂ: ಬಿ.ಎಂ.ಶ್ರೀ. ಪ್ರಸಾರಾಂಗ ಮಾನಸ ಗಂಗೋತ್ರಿ, ೧೯೪೦

೨೧. ಕವಿರಾಜ ಮಾರ್ಗ, ಸೀತಾರಾಮ ಜಾಗೀರ್ದಾರ್. ಪ್ರಸಾರಾಂಗ, ಮಾನಸ ಗಂಗೋತ್ರಿ, ೧೯೮೪

೨೨. ಹಳ್ಳಿಯ ಬಾಳು, ಗೋರೂರು ರಾಮಸ್ವಾಮಿ ಅಯ್ಯಂಗಾರ್, ಕಾವ್ಯಾಲಯ ಮೈಸೂರು, ೧೯೪೩

೨೩. ಕನ್ನಡಭಾರತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಎಲ್. ಎಸ್. ಶೇಷಗಿರಿರಾವ್. ೧೯೮೪

೨೪. ಡಿ.ವಿ.ಜಿ.ಕೃತಿ ಶ್ರೇಣಿ ಸಂಪುಟ ೧(ವಿಚಾರವಿಮರ್ಶೆ) ಕನ್ನಡ ಮತ್ತು ಸಂಸ್ಕೃತಿ, ನಿರ್ದೇಶನಾಲಯ ಬೆಂಗಳೂರು, ೧೯೮೭

೨೫. ರಾಷ್ಟ್ರಕವಿ ಕುವೆಂಪು: ದೇಜವರೇಗೌಡ, ಕನ್ನಡ ಮತ್ತು ಸಂಸ್ಕೃತಿ, ನಿರ್ದೇಶನಾಲಯ ಬೆಂಗಳೂರು,

೨೬. ಕುವೆಂಪು ಕೊಡುಗೆ: ಜಿ ವರದರಾವ್, ಸಹ್ಯಾದ್ರಿ ಪ್ರಕಾಶನ ಮೈಸೂರು, ೧೯೮೫

೨೭. ಕಾವ್ಯಾನುಶೀಲನ, ರಾಗೌ, ಸುರುಚಿ, ಪ್ರಕಾಶನ, ೧೯೬೮

೨೮. ಶತಮಾನ ಕನ್ನಡ ಸಾಹಿತ್ಯ ಚರಿತ್ರೆ, ಡಾ|| ವಿ. ಶಿವಾನಂದ, ಕಾರ್ತಿಕೇಯ ಪ್ರಕಾಶನ, ಗುಲ್ಬರ್ಗಾ, ೧೯೭೬

೨೯. ಸಾಹಿತ್ಯ ಚಿಂತನ, ಚನ್ನವೀರ ಕಣವಿ, ಆನಂದ ಪ್ರಕಾಶನ, ಧಾರವಾಡ, ೧೯೬೬

೩೦. ತೀ.ನಂ.ಶ್ರೀ (ಜೀವನ), ದೇ. ಜವರೇಗೌಡ, ಕನ್ನಡ ಸಂಘ ಮಾನಸ ಗಂಗೋತ್ರಿ, ೧೯೬೭

31.	Alfred Lord Tennyson, 1809-1892	Chiefly, Lyrical – 1830, poems - 1833
32.	John Keats, 1795- 1821,	Life, Letters and Literay 1848
33.	Percy Byssche Shelley, 1792-1822	Ozymandias - 1818
34.	Lord Byron , 1788-7824	Childs, Harolds Pilgrimage – 1812-18
35.	Rebert Burns, 1759-1798	Don Juan – 1819-24 Auld Lang Syne
36.	William Words Worth, 1771-1850	Lyrical Ballads 1798
37.	William Shakespear, 1564-1616	Venus and Adonis 1593
38.	Samuel Talor Coleridge, 1772-1834	Lyrical Ballads 1798